ಬುಧವಾರ, ಆಗಸ್ಟ್ 17, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೃಷ್ಣ-ರಾಧೆ

ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದರು ಕೃಷ್ಣ-ರಾಧೆಯ ವೇಷ ತೊಟ್ಟು ಪಾಲ್ಗೊಂಡಿದ್ದರು





ಬುಧವಾರ, ಆಗಸ್ಟ್ 17, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೊಸವರ್ಷ

ಪಾರ್ಸಿಗಳ ಹೊಸವರ್ಷ ನವರೋಜ್ ಅಂಗವಾಗಿ ಮುಂಬೈನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಬೋಮನ್ ಇರಾನಿ ಮತ್ತು ಪತ್ನಿ ಝೆನೋಬಿಯಾ ಪಾಲ್ಗೊಂಡಿದ್ದರು



ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದ ನಂತರ ತ್ಯಾಜ್ಯ ದರ್ಶನ

ಸಸ್ಯಕಾಶಿಯಲ್ಲಿ ಕಸದ ರಾಶಿ


ಕಸದ ತೊಟ್ಟಿಯೇ ಬಾಯ್ತೆರೆದಾಗ...


ತಿಂದ ಬಳಿಕ ಎಸೆದಿರುವ ದೊನ್ನೆಗಳ ರಾಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತ ನೋಡಿದರೂ ಚೆಲ್ಲಾಪಿಲ್ಲಿಯಾಗಿ ಹರಡಿದ ಕಸ, ನಡೆದಲ್ಲೆಲ್ಲಾ ಕಾಲಿಗೆ ಸಿಗುವ ಪ್ಲಾಸ್ಟಿಕ್ ಕವರ್‌ಗಳು, ಕಾಗದದ ಚೂರುಗಳು, ತಿಂದು ಬಿಸಾಡಿದ ದೊನ್ನೆಗಳ ರಾಶಿ...

ಇದು ಲಾಲ್‌ಬಾಗ್‌ನ ಮಂಗಳವಾರ ಬೆಳಗಿನ ಸ್ಥಿತಿ. ಆಗಸ್ಟ್ 5ರಿಂದ ಆರಂಭವಾದ ಫಲಪುಷ್ಪ ಪ್ರದರ್ಶನ 11 ದಿನಗಳ ಕಾಲ ಯಶಸ್ವಿಯಾಗಿ ನಡೆದಿದ್ದು, ಸೋಮವಾರ(ಆ.15) ಸಮಾಪ್ತಿಗೊಂಡಿತು. ಮಂಗಳವಾರ ಮುಂಜಾನೆ ಲಾಲ್‌ಬಾಗ್‌ಗೆ ಕಾಲಿಟ್ಟರೆ ಎಲ್ಲೆಲ್ಲೂ ಕಸವೋ ಕಸ. ವಾಯುವಿಹಾರಿಗಳು ಸಾಗುವ ರಸ್ತೆ, ಪಾದಚಾರಿ ಮಾರ್ಗಗಳು, ಉದ್ಯಾನದ ಹಸಿರು ಹೊದಿಕೆ, ಲಾಲ್‌ಬಾಗ್‌ನ ಹೊರಗಿನ ಬಸ್ ತಂಗುದಾಣಗಳ ಆಸುಪಾಸು...ಎಲ್ಲೆಲ್ಲೂ ಜನರು ಬಿಸಾಡಿಹೋದ ತ್ಯಾಜ್ಯದ ರಾಶಿ.

ಫಲಪುಷ್ಪ ಪ್ರದರ್ಶನಗೊಂಡಿದ್ದ ಗಾಜಿನ ಮನೆಯ ಸುತ್ತ ಕಾಲಿಡಲೂ ಜಾಗವಿಲ್ಲದಷ್ಟು ಕಸ. ಎದುರಿಗಿದ್ದ ತಾತ್ಕಾಲಿಕ ಅಂಗಡಿ ಮಳಿಗೆಗಳನ್ನು ಖಾಲಿ ಮಾಡಲಾಗಿದ್ದು, ಅವುಗಳಲ್ಲಿ ಇದ್ದ ಕಸವನ್ನೆಲ್ಲ ಅಲ್ಲಿಯೇ ಹರಡಿ ಹೋಗಿದ್ದರು.

ಇನ್ನು ಆಹಾರ ಪದಾರ್ಥ ಸೇವಿಸಿದವರು ಪೇಪರ್ ಪ್ಲೇಟ್, ದೊನ್ನೆಗಳು, ಅಡಿಕೆ ತಟ್ಟೆಗಳನ್ನು ಮರದ ಬುಡಗಳ ಬಳಿ ರಾಶಿ ಹಾಕಿ ಹೋಗಿದ್ದಾರೆ. ಅಧಿಕೃತವಾಗಿ ಫಲಪುಷ್ಪ ಪ್ರದರ್ಶನ ಸೋಮವಾರಕ್ಕೆ ಮುಕ್ತಾಯವಾಗಿದ್ದರೂ, ಮಂಗಳವಾರವೂ ಜನ ಭೇಟಿ ನೀಡಿದ್ದರು. ಗಾಜಿನ ಮನೆಯಲ್ಲಿ ರಾಜ್‌ಕುಮಾರ್ ಮತ್ತು ಪುನೀತ್‌ರಾಜ್‌ಕುಮಾರ್ ಪ್ರತಿಮೆಗಳನ್ನು ಕಂಡು ಪುಳಕಿತರಾಗುತ್ತಿದ್ದರು. ಹೊರಗೆ ಬಂದರೆ ಬಿದ್ದಿರುವ ಕಸ ನೋಡಿ ಅಸಮಾಧಾನ ವ್ಯಕ್ತಪಡಿಸುವುದು ಸಾಮಾನ್ಯವಾಗಿತ್ತು.

‘ಲಾಲ್‌ಬಾಗ್ ಅನ್ನು ಈ ರೀತಿ ನೋಡಲು ಅತ್ಯಂತ ಬೇಸರವಾಗುತ್ತಿದೆ. ಅದನ್ನು ಹಾಳು ಮಾಡುವ ಪ್ರಯತ್ನವನ್ನು ಯಾರೂ ಮಾಡಬಾರದು. ಇದೊಂದು ಹೇಯ ಕೃತ್ಯ’ ಎಂದು ಬೆಳ್ಳಂದೂರಿನ ಅನುರಾಧ ನೋವಿನಿಂದ ನುಡಿದರು.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ


ಉಸಿರು ನೀಡುವ ಮರದ ಬುಡಕ್ಕೆ ಕಸದ ಕಾಣಿಕೆ
–ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.


ಫಲಪುಷ್ಪ ಪ್ರದರ್ಶನ ಮುಕ್ತಾಯಗೊಂಡ ಮರುದಿನ (ಮಂಗಳವಾರ) ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಚೆಲ್ಲಾಪಿಲ್ಲಿಯಾಗಿ ಕಸ ಬಿದ್ದಿತ್ತು

‘ಸ್ವಚ್ಛತೆ ಕಾರ್ಯ ಆರಂಭ’

‘ಕಸದ ರಾಶಿ ತೆಗೆಯುವ ಕೆಲಸವನ್ನು ಸೋಮವಾರ ಸಂಜೆಯಿಂದಲೇ ಲಾಲ್‌ಬಾಗ್ ಸಿಬ್ಬಂದಿ ಆರಂಭಿಸಿದ್ದಾರೆ’ ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಕುಸುಮಾ ಹೇಳಿದರು.

‘ಲಕ್ಷಾಂತರ ಜನ ಬಂದಿದ್ದರಿಂದ ಕಸ ಹರಡಿಕೊಂಡಿದೆ. ಮಧ್ಯರಾತ್ರಿ 1 ಗಂಟೆ ತನಕವೂ ನಮ್ಮ ಸಿಬ್ಬಂದಿ ಸ್ವಚ್ಛತೆ ಕಾರ್ಯ ನಡೆಸಿದರು. ಒಂದು ದಿನದಲ್ಲಿ ಬಹುತೇಕ ಸರಿಯಾಗಲಿದೆ’ ಎಂದು ತಿಳಿಸಿದರು.


ಲಾಲ್‌ಬಾಗ್‌ನ ಹೊರಗೂ ಪ್ಲಾಸ್ಟಿಕ್ ತ್ಯಾಜ್ಯದ ‘ಕೊಡುಗೆ’

‘ಇದು ನಾಗರಿಕ ನಡವಳಿಕೆಯಲ್ಲ’



‘ಗಾಜಿನ ಮನೆಯೊಳಗಿನ ಪುಷ್ಪಾಲಂಕಾರ, ಪುನೀತ್‌ರಾಜ್ ಮತ್ತು ರಾಜ್‌ಕುಮಾರ್ ಪ್ರತಿಮೆಗಳನ್ನು ನೋಡಿ ಖುಷಿ ಆಯಿತು. ಆದರೆ, ಹೊರಗೆ ಬಿದ್ದಿರುವ ಕಸ ನೋಡಿದರೆ ಮನಸಿಗೆ ನೋವಾಗುತ್ತದೆ’ ಎಂದು ಲಗ್ಗೆರೆಯ ಮಂಜುಳಾ ಹೇಳಿದರು.

‘ಅಲ್ಲಲ್ಲಿ ಕಸದ ಡಬ್ಬಗಳಿವೆ. ಅಲ್ಲಿಗೆ ಕಸ ಹಾಕಬೇಕು. ಅದನ್ನು ಬಿಟ್ಟು ತಿಂದು ಈ ರೀತಿ ಎಲ್ಲೆಂದರಲ್ಲಿ ಬಿಸಾಡುವುದು ನಾಗರಿಕ ನಡವಳಿಕೆ ಅಲ್ಲ. ತೋಟಗಾರಿಕೆ ಇಲಾಖೆಯವರು ಕಸ ತೆಗೆಯುತ್ತಿದ್ದಾರೆ. ಸಂಪೂರ್ಣ ಸ್ವಚ್ಛಗೊಳ್ಳಲು ಇನ್ನೂ ಎರಡು –ಮೂರು ದಿನ ಬೇಕಾಗಬಹುದು’ ಎಂದರು.


ಶುಚಿಗೊಳಿಸುವವರಿಗೆ ಸವಾಲೋ ಸವಾಲು

‘ಪರಿಸರ ಹಾಳು ಮಾಡಿದವರು ಪ್ರಾಣಿಗಳಿಗಿಂತಲೂ ಕಡೆ’



‘ಲಾಲ್‌ಬಾಗ್ ಅತ್ಯಂತ ಸುಂದರವಾದ ತಾಣ. ಈ ಪರಿಸರವನ್ನು ಹಾಳುವ ಮಾಡುವ ಮೊದಲು ಜನ ಯೋಚನೆ ಮಾಡಬೇಕು. ಯಾವುದೇ ಪ್ರಾಣಿಗಳು ಕೂಡ ಈ ರೀತಿ ಪರಿಸರವನ್ನು ಹಾಳು ಮಾಡಲಾರವು. ಕಸ ಬಿಸಾಡಿರುವವರು ಪ್ರಾಣಿಗಳಿಗಿಂತ ಕಡೆ’ ಎಂದು ಮಂಗಳವಾರ ಲಾಲ್‌ಬಾಗ್‌ಗೆ ಭೇಟಿ ನೀಡಿದ್ದ ಪ್ರವೀಣ್ ಡಿಸಿಲ್ವ ಅಸಮಾಧಾನ ವ್ಯಕ್ತಪಡಿಸಿದರು.


ಕಸ ಗುಡಿಸಿ ಬಾಚಲು ಎರಡು ಕೈಗಳು ಸಾಲವು

ಕಾರ್ಯಾಗಾರದಲ್ಲಿ ನ್ಯಾ.ನಾಗಮೋಹನ್ ದಾಸ್ ಅಭಿಪ್ರಾಯ


‘ನಂಬಿಕೆಗೆ ಅರ್ಹವಲ್ಲದ ಸರ್ಕಾರಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶ, ರಾಜ್ಯವನ್ನು ಆಳುತ್ತಿರುವ ಈಗಿನ ಸರ್ಕಾರಗಳು ನಂಬಿಕೆಗೆ ಅರ್ಹವಾಗಿಲ್ಲ. ವಿವಾದಿತ ಕೃಷಿ ಕಾಯ್ದೆಗಳು ರದ್ದಾದರೂ, ಮತ್ತೆ ಜಾರಿಯಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಎಚ್ಚರಿಸಿದರು.

ಜನಪರ ಸಂಘಟನೆಗಳು ‘ನಮ್ಮೂರ ಭೂಮಿ ನಮಗಿರಲಿ; ಅನ್ಯರಿಗಲ್ಲ’ ವಿಷಯ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ರೈತರ ನಿರಂತರ ಹೋರಾಟದ ಫಲವಾಗಿ ಕೇಂದ್ರ ಸರ್ಕಾರ ಮೂರು ವಿವಾದಿತ ಕೃಷಿ ಕಾಯ್ದೆಗಳನ್ನು ಹಿಂಪಡೆದಿದೆ. ಒತ್ತಡಕ್ಕೆ ಮಣಿದು ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವ ಒಪ್ಪಂದಕ್ಕೆ (ಆರ್‌ಸಿಇಪಿ) ಸಹಿ ಹಾಕಿಲ್ಲ.


ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ‘ನಮ್ಮೂರ ಭೂಮಿ ನಮಗಿರಲಿ: ಅನ್ಯರಿಗಲ್ಲ’ ಕಾರ್ಯಾಗಾರದಲ್ಲಿ ಹೈಕೋರ್ಟ್ ನಿವೃತ್ತ ನ್ಯಾ.ಎಚ್.ಎನ್ ನಾಗಮೋಹನ್ ದಾಸ್ ಮಾತನಾಡಿದರು – ಪ್ರಜಾವಾಣಿ ಚಿತ್ರ

ಆದರೆ, ಯಾವ ಸಮಯದಲ್ಲಾದರೂ ನಿರ್ಧಾರ ಬದಲಿಸಬಹುದು. ಏಷ್ಯಾದ 16 ದೇಶಗಳೊಂದಿಗಿನ ಮುಕ್ತ ವ್ಯಾಪಾರಕ್ಕೆ ಭಾರತದ ಬಾಗಿಲು ತೆರೆಯಬಹುದು. ಇದರಿಂದ ಭಾರತದ ಹಲವು ಕ್ಷೇತ್ರಗಳು ನೆಲಕಚ್ಚಲಿವೆ. ಹಲವು ಕೋಟಿ ಜನರು ಉದ್ಯೋಗ ಕಳೆದುಕೊಳ್ಳಲಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

1894 ಬ್ರಿಟಿಷರು ಭೂ ಸುಧಾರಣೆ ಕಾಯ್ದೆಯೇ ಇಲ್ಲಿಯವರೆಗೂ ಜಾರಿಯಲ್ಲಿತ್ತು. 2013ರ ಕಾಯ್ದೆ ಸ್ವಲ್ಪಮಟ್ಟಿಗೆ ಅನುಕೂಲಕರವಾಗಿತ್ತು. ಅದರ ನ್ಯೂನತೆಗಳನ್ನು ಜನರು ಅರ್ಥ ಮಾಡಿಕೊಳ್ಳುವ ಮೊದಲೇ ಕರಾಳ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ಇಂತಹ ಕಾಯ್ದೆಗಳಿಂದಾಗಿ ರೈತರು ಕಾರ್ಮಿಕರು, ಕಾರ್ಪೊರೇಟ್ ಕಂಪನಿಗಳ ಮೇಸ್ತ್ರಿಗಳಾಗುತ್ತಿದ್ದಾರೆ ಎಂದರು.

ಜಮೀನ್ದಾರಿ ಪದ್ಧತಿ ನಿರ್ಮೂಲನೆ ರಾಜಕೀಯ ನಿರ್ಧಾರವಾದರೂ ಅಂದು ಹಸಿರು ಕ್ರಾಂತಿಗೆ ನಾಂದಿಹಾಡಿತು. ಬಡವರಿಗೆ ಭೂಮಿ ದೊರೆತ ಪರಿಣಾಮ ಬಡತನ ರೇಖೆ ಶೇ 70ರಿಂದ 20ಕ್ಕೆ ಇಳಿಯಿತು ಎಂದು ಸ್ವಾತಂತ್ರ್ಯೋತ್ತರದ ದಿನಗಳನ್ನು ಮೆಲುಕು ಹಾಕಿದರು.

ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ, ಜನಪರ ಸಂಘಟನೆಗಳ ಮುಖಂಡರಾದ ಆಂಜನೇಯ ರೆಡ್ಡಿ, ಭಾಸ್ಕರ ರಾವ್, ವೀರಸಂಗಯ್ಯ, ವಿ.ಗಾಯತ್ರಿ ಉಪಸ್ಥಿತರಿದ್ದರು.

ಶ್ರೀಕೃಷ್ಣ ಜನ್ಮಾಷ್ಟಮಿ

ಬೆಂಗಳೂರು: ಇಸ್ಕಾನ್‌ನಿಂದ ಆಗಸ್ಟ್ 18, 19ರಂದು ರಾಜಾಜಿನಗರದಲ್ಲಿರುವ ಶ್ರೀರಾಧಾ ಕೃಷ್ಣ ದೇವಸ್ಥಾನದ ಹರೇ ಕೃಷ್ಣ ಹಿಲ್ ಮತ್ತು ಕನಕಪುರ ರಸ್ತೆಯಲ್ಲಿರುವ ವೈಕುಂಠ ಹಿಲ್‌ನಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎರಡೂ ದಿನ ಬೆಳಿಗ್ಗೆ 8ರಿಂದ ರಾತ್ರಿ 10 ಗಂಟೆಯವರೆಗೂ ದರ್ಶನಕ್ಕೆ ಅವಕಾಶವಿದೆ ಎಂದು ಹೇಳಿಕೆ ತಿಳಿಸಿದೆ.

ಇಸ್ಕಾನ್ ಸಾಂಸ್ಕೃತಿಕ ಕೇಂದ್ರದಿಂದ ಆಯೋಜನೆ: ಬೆಂಗಳೂರು: ಇಸ್ಕಾನ್ ದಕ್ಷಿಣ ಬೆಂಗಳೂರು ವತಿಯಿಂದ ಆ. 18ರಂದು (ಗುರುವಾರ) ಕುಮಾರ ಸ್ವಾಮಿ ಲೇಔಟ್‌ನ ಸಂವೃದ್ಧಿ ಎನ್‌ಕ್ಲೈವ್‌ನಲ್ಲಿ ಇರುವ ಇಸ್ಕಾನ್ ಸಾಂಸ್ಕೃತಿಕ ಕೇಂದ್ರ ಹಾಗೂ ಮಾಧವನ್ ಪಾರ್ಕ್ ಹತ್ತಿರ ಇರುವ ಕುಚಲಾಂಬಲ್ ಕಲ್ಯಾಣ ಮಹಲ್‌ನಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ ಮಾಡಲಾಗುವುದು.

ಬೆಳಿಗ್ಗೆ 8ರಿಂದ ರಾತ್ರಿ 10 ಗಂಟೆ ವರೆಗೆ ದರ್ಶನ, ಅಭಿಷೇಕ, ಕೀರ್ತನೆ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ರಾತ್ರಿ 10ಕ್ಕೆ ಮಹಾ ಆರತಿ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮುನಿರಾಜುಗೌಡ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು

ಬೆಂಗಳೂರು: ಈ ಹಿಂದೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ವೇಳೆ ನೀತಿ ಚುನಾವಣಾ ಸಂಹಿತೆ ಉಲ್ಲಂಘನೆ ಮಾಡಿದ್ದಾರೆ ಎಂದು ಆರೋಪಿಸಿ, ವಿಧಾನಪರಿಷತ್ ಸದಸ್ಯ ಪಿ.ಎಂ. ಮುನಿರಾಜುಗೌಡ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ರದ್ದತಿ ಕೋರಿ ಮುನಿರಾಜುಗೌಡ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ರದ್ದುಗೊಳಿಸಿ ಆದೇಶಿಸಿತು.

‘2014ರ ಲೋಕಸಭಾ ಚುನಾವಣೆ ವೇಳೆ ಮುನಿರಾಜುಗೌಡ, ಕನಕಪುರ ತಾಲ್ಲೂಕು ಮರಳವಾಡಿ ಹೋಬಳಿ ಗ್ರಾಮದಲ್ಲಿ 2014ರ ಏಪ್ರಿಲ್ 4ರಂದು ಸಾರ್ವಜನಿಕರಿಗೆ ಕರಪತ್ರ ವಿತರಣೆ ಮಾಡುತ್ತಿದ್ದರು. ಈ ಕರಪತ್ರಗಳಲ್ಲಿ ಹಳೆಯ ದಿನಾಂಕವಾದ 2014 ಏಪ್ರಿಲ್ 27 ಅನ್ನು ನಮೂದು ಮಾಡಲಾಗಿತ್ತು’ ಎಂದು ಸ್ಥಳೀಯ ಚುನಾವಣಾಧಿಕಾರಿ ಪ್ರಕರಣ ದಾಖಲಿಸಿದ್ದರು. ಒಟ್ಟು 350 ಕರಪತ್ರ ವಶಪಡಿಸಿಕೊಂಡಿದ್ದ ಚುನಾವಣಾಧಿಕಾರಿಯು, ಚುನಾವಣೆ ನಿಯಮ ಉಲ್ಲಂಘನೆ ಆರೋಪ ಹೊರಿಸಿ ಜನತಾ ಪ್ರಾತಿನಿಧ್ಯ ಕಾಯ್ದೆ–1951ರ ಕಲಂ 127 ಎ ಅಡಿಯಲ್ಲಿ ಈ ಪ್ರಕರಣ ದಾಖಲಿಸಿದ್ದರು.

ಮತ್ತೊಂದು ಪ್ರಕರಣ: 2018ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪಿ.ಎಂ. ಮುನಿರಾಜುಗೌಡ ಪರ ಕೆಲ ಯುವಕರು ‘ನೀತಿ ಸಂಹಿತೆ ಉಲ್ಲಂಘಿಸಿ ಪ್ರಚಾರ ಮಾಡುತ್ತಿದ್ದಾರೆ’ ಎಂದು ಆರೋಪಿಸಿ ಯಶವಂತಪುರ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣವನ್ನೂ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ ವೇಳೆ ಮಂಗಳವಾರ ರದ್ದುಗೊಳಿಸಿದೆ.

‘ಜೆ.ಪಿ.ಪಾರ್ಕ್ ವಾರ್ಡ್ ವ್ಯಾಪ್ತಿಯ ಎಚ್‌ಎಂಟಿ ಲೇಔಟ್‌ನ ಚೌಡೇಶ್ವರಿ ದೇವಾಲಯದ ಬಳಿ ಮುನಿರಾಜುಗೌಡ ಪರ ಸಂತೋಷ್, ಮಾರುತಿ, ಚೇತನ್ ಕುಮಾರ್, ಮಂಜುನಾಥ್ ಮನೆಮನೆಗೆ ತೆರಳಿ ಪ್ರಚಾರ ಮಾಡುತ್ತಿದ್ದಾರೆ’ ಎಂದು ಆರೋಪಿಸಲಾಗಿತ್ತು. ‘ಅಭ್ಯರ್ಥಿ ಪರ ಪ್ರಚಾರ ನಡೆಸುವವರು 2018ರ ಮೇ 26ರಂದೇ ಮತಕ್ಷೇತ್ರ ಬಿಟ್ಟು ತೆರಳುವಂತೆ ಸೂಚಿಸಿದ್ದರೂ ಈ ನಾಲ್ವರು ನೀತಿ ಸಂಹಿತೆ ಉಲ್ಲಂಘನೆ ಮಾಡಿ ಪ್ರಚಾರ ನಡೆಸಿದ್ದಾರೆ’ ಎಂದು ಆರೋಪಿಸಲಾಗಿತ್ತು.

ಎರಡೂ ಪ್ರಕರಣಗಳಲ್ಲಿ ಮುನಿರಾಜುಗೌಡರ ಪರ ವಕೀಲ ಧರಣೇಶ್, ‘ಈ ಪ್ರಕರಣಗಳನ್ನು ಸಂಪೂರ್ಣ ರಾಜಕೀಯ ಪ್ರೇರಿತವಾಗಿ ದಾಖಲಿಸಲಾಗಿದೆ’ ಎಂದು ವಾದ ಮಂಡಿಸಿದ್ದರು.

ಚಿತ್ರಾವಳಿ


ಕೆನರಾ ಬ್ಯಾಂಕ್‌ನ ಬೆಂಗಳೂರಿನ ಪ್ರಧಾನ ಕಚೇರಿಯಲ್ಲಿ ಸೋಮವಾರ ನಡೆದ ಸ್ವಾತಂತ್ರ್ಯದ ಅಮೃತ ಮಹೋತ್ಸವದಲ್ಲಿ ಬ್ಯಾಂಕ್‌ನ ಸಿಇಒ ಎಲ್.ವಿ.ಪ್ರಭಾಕರ್ ಅವರು ಧ್ವಜಾರೋಹಣ ನೆರವೇರಿಸಿ ಗೌರವ ವಂದನೆ ಸ್ವೀಕರಿಸಿದರು


ಕರ್ನಾಟಕ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಪದೋನ್ನತಿ ಹೊಂದಿದ ನ್ಯಾಯಮೂರ್ತಿ ಅನಿಲ್ ಭೀಮಸೇನ ಕಟ್ಟಿ, ತಲಕಾಡು ಗಿರಿಗೌಡ ಶಿವಶಂಕರೇಗೌಡ, ಉಮೇಶ ಮಂಜುನಾಥ ಭಟ್ ಅಡಿಗ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಕರ್ನಾಟಕ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ, ಪದೋನ್ನತಿ ಹೊಂದಿದ ನ್ಯಾಯಮೂರ್ತಿ ಗುರುಸಿದ್ದಯ್ಯ ಬಸವರಾಜ ಮತ್ತು ಚಂದ್ರಶೇಖರ ಮೃತ್ಯುಂಜಯ ಜೋಶಿ ಮಂಗಳವಾರ ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು


ಬೆಂಗಳೂರು ಉತ್ತರ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ(ಪಿ.ಎಲ್.ಡಿ)ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಬಿ.ಕೆ.ನಾರಾಯಣಸ್ವಾಮಿ ಅವರನ್ನು ನಿರ್ದೇಶಕರಾದ ಎನ್.ಎನ್.ಶ್ರೀನಿವಾಸಯ್ಯ, ಕೆ.ಎಂ.ಶ್ರೀಧರ್, ಎಲ್.ವೆಂಕಟೇಶ್, ಜೆ.ಸಿ.ಮುನೇಗೌಡ, ಕೆ.ಎಸ್.ಗುರುರಾಜಮೂರ್ತಿ, ವೈ.ಆರ್.ರವಿ, ಆರ್.ವಿ.ಅಖಿಲೇಶ್, ಎಂ.ಅಜಯ್ ಕುಮಾರ್ ಹಾಗೂ ಕಿರಣ್ ಕುಮಾರ್ ಅಭಿನಂದಿಸಿದರು

ಕೆಲಸದ ಆಮಿಷವೊಡ್ಡಿ 30 ಅಭ್ಯರ್ಥಿಗಳಿಗೆ ವಂಚನೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಇಲಾಖೆ ಹಾಗೂ ಕೇಂದ್ರ ಮೀಸಲು ಪೊಲೀಸ್ ಪಡೆಯಲ್ಲಿ (ಸಿಆರ್‌ಪಿಎಫ್) ಕೆಲಸ ಕೊಡಿಸುವುದಾಗಿ ಹೇಳಿ 30ಕ್ಕೂ ಹೆಚ್ಚು ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿ ವಂಚಿಸಲಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ವಂಚನೆ ಬಗ್ಗೆ ಸೇನೆಯ ನಿವೃತ್ತ ಅಧಿಕಾರಿಯೊಬ್ಬರು 3ನೇ ಎಸಿಎಂಎಂ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ ನ್ಯಾಯಾಲಯ ಆದೇಶ ನೀಡಿದೆ. ಆರೋಪಿಗಳಾದ ಶ್ರೇಯಾಂಶ್ ಬೋಗರ್, ಅಜಿತ್ ಕುಮಾರ್, ಅರುಣ್ ಹಾಗೂ ವಿಠ್ಠಲ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಇವರನ್ನು ವಿಚಾರಣೆ ನಡೆಸಬೇಕಿದೆ’ ಎಂದು ತಿಳಿಸಿವೆ.

‘ದೂರುದಾರ ನಿವೃತ್ತ ಅಧಿಕಾರಿ, ತರಬೇತಿ ಸಂಸ್ಥೆ ನಡೆಸುತ್ತಿದ್ದಾರೆ. ಇವರಿಗೆ ಆರೋಪಿ ಶ್ರೇಯಾಂಶ್ ಹಾಗೂ ಇತರರ ಪರಿಚಯವಾಗಿತ್ತು. ಕೇಂದ್ರ ಸರ್ಕಾರದ ವಿವಿಧ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ಆರೋಪಿಗಳು ಹೇಳಿದ್ದರು. ಇದನ್ನು ನಂಬಿದ್ದ ನಿವೃತ್ತ ಅಧಿಕಾರಿ, ಸ್ನೇಹಿತರು ಹಾಗೂ ಪರಿಚಯಸ್ಥರಿಗೆ ವಿಷಯ ತಿಳಿಸಿದ್ದರು. ಅವರ ಮೂಲಕ 30ಕ್ಕೂ ಹೆಚ್ಚು ಅಭ್ಯರ್ಥಿಗಳಿಂದ ತಲಾ ₹2 ಲಕ್ಷದಿಂದ ₹ 10 ಲಕ್ಷ ಸಂಗ್ರಹಿಸಿ ಆರೋಪಿಗಳಿಗೆ ಕೊಟ್ಟಿದ್ದರು.’

‘ದೈಹಿಕ ಹಾಗೂ ವೈದ್ಯಕೀಯ ಪರೀಕ್ಷೆ ನಡೆಸಿದ್ದ ಆರೋಪಿಗಳು, ನಕಲಿ ದಾಖಲೆಗಳನ್ನು ಅಭ್ಯರ್ಥಿಗಳಿಗೆ ನೀಡಿದ್ದರು. ನೇಮಕಾತಿ ಆದೇಶ ನೀಡುವುದಾಗಿಯೂ ಭರವಸೆ ನೀಡಿದ್ದರು. ಆದರೆ, ಆರೋಪಿಗಳು ಇದುವರೆಗೂ ಯಾವುದೇ ಆದೇಶ ನೀಡಿಲ್ಲ. ಇದನ್ನು ಪ್ರಶ್ನಿಸಿದರೆ ಜೀವ ಬೆದರಿಕೆಯೊಡ್ಡುತ್ತಿರುವುದಾಗಿ ದೂರುದಾರರು ಆರೋಪಿಸಿದ್ದಾರೆ.


ಮೈಸೂರಿನಲ್ಲಿ ಮಂಗಳವಾರ ಛಾಯಾಗ್ರಾಹಕ ವಿಶ್ವನಾಥ್ ಸುವರ್ಣ ಅವರ ‘ಕನ್ನಡ ನಾಡಿನ ಬಣ್ಣದ ಬಾನಾಡಿಗಳು’ ಕೃತಿಯನ್ನು ಶಿವರಾತ್ರಿ ದೇಶಕೇಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು. ಎಸ್.ಆರ್.ಮಧುಸೂಧನ, ಮಡ್ಡೀಕೆರೆ ಗೋಪಾಲ್, ಮೋಹನ್ ಕುಮಾರ್ ಗೌಡ, ಕೃಪಾಕರ್, ಡಾ.ಸಂತೃಪ್ತ್, ಕಲ್ಗುಂಡಿ ನವೀನ್ ಇದ್ದರು

ಎರಡು ದಶಕ ಕಳೆದರೂ ಅಪೂರ್ಣ • ಹಿಗ್ಗಿದ ಯೋಜನಾ ಗಾತ್ರ

ಕೇಂದ್ರ ಯೋಜನೆಗಳಿಗೆ ‘ಆಮೆಗತಿ ಭಾಗ್ಯ’!

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರ ಸರ್ಕಾರದ ಅನುದಾನದಿಂದ ಕರ್ನಾಟಕದಲ್ಲಿ ಅನುಷ್ಠಾನಗೊಳ್ಳುತ್ತಿರುವ ₹150 ಕೋಟಿಗಿಂತ ಹೆಚ್ಚು ಮೊತ್ತದ ಪ್ರಮುಖ ಮೂಲಸೌಕರ್ಯ ಯೋಜನೆಗಳು ಕನಿಷ್ಠ ಏಳು ತಿಂಗಳಿಂದ 26 ವರ್ಷಗಳ ವರೆಗೆ (312 ತಿಂಗಳು) ವಿಳಂಬವಾಗುತ್ತಿವೆ.

ಕರ್ನಾಟಕದಲ್ಲಿ ಕೆಲವು ಯೋಜನೆಗಳು ಆಮೆಗತಿಯಲ್ಲಿ ಅನುಷ್ಠಾನವಾಗುತ್ತಿರುವುದನ್ನು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಂಕಿ ಅಂಶಗಳು ಹೇಳುತ್ತವೆ. ಗಡುವಿನೊಳಗೆ ಪೂರ್ಣಗೊಂಡ ಯೋಜನೆಗಳೇ ಕಡಿಮೆ.

ಕೇಂದ್ರ ಸರ್ಕಾರವು ರಾಜ್ಯಗಳಲ್ಲಿ ಅನುಷ್ಠಾನವಾಗುತ್ತಿರುವ 1,514 ಮೂಲಸೌಕರ್ಯ ಯೋಜನೆಗಳ ಮೇಲ್ವಿಚಾರಣೆ ಮಾಡುತ್ತಿದ್ದು, 721 (ಶೇ 46) ಯೋಜನೆಗಳು ವಿಳಂಬವಾಗಿ ಕಾರ್ಯಗತ ಆಗುತ್ತಿವೆ. ಯೋಜನೆಗಳು ಸರಾಸರಿ 43 ತಿಂಗಳುಗಳಷ್ಟು ವಿಳಂಬವಾಗುತ್ತಿವೆ ಎಂದು ಸಾಂಖ್ಯಿಕ ಸಚಿವಾಲಯವೇ ಹೇಳಿದೆ.

ಕರ್ನಾಟಕದಲ್ಲಿ ಮೂಲಸೌಕರ್ಯ ಯೋಜನೆಗಳಾದ ರಾಷ್ಟ್ರೀಯ ಹೆದ್ದಾರಿ, ರಸ್ತೆ, ರೈಲ್ವೆ, ಅನಿಲ ಕೊಳವೆ ಮಾರ್ಗದ ಯೋಜನೆಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳುತ್ತಿಲ್ಲ. ಯೋಜನೆ ಘೋಷಣೆಯಾದ 26 ವರ್ಷಗಳ ಬಳಿಕವೂ ಬೆಂಗಳೂರು–ಸತ್ಯಮಂಗಲಂ ರೈಲು ಯೋಜನೆಯು ಕಾಗದ ದಲ್ಲೇ ಉಳಿದಿದೆ. ಕೊಚ್ಚಿ–ಬೆಂಗಳೂರು–ಮಂಗಳೂರು ಪೈಪ್‌ಲೈನ್ (ಎರಡನೇ ಹಂತ) ಯೋಜನೆಯು 2012ರಲ್ಲಿ ಪೂರ್ಣಗೊಳ್ಳಬೇಕಿತ್ತು. 2025ರಲ್ಲಿ ಈ ಯೋಜನೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಸಚಿವಾಲಯ ತಿಳಿಸಿದೆ.

ಯೋಜನೆ ಮೊತ್ತ ಹೆಚ್ಚಳ (₹ಕೋಟಿಗಳಲ್ಲಿ)				
ವರ್ಷ	ಯೋಜನೆಗಳು	ಮೂಲ ವೆಚ್ಚ	ವೆಚ್ಚ ಹೆಚ್ಚಳ	ಶೇ.ಗಳಲ್ಲಿ
2018	41	70,570	80,140	13.56
2019	47	82,362	88,262	7.16
2020	64	73,464	77,117	4.97
2021	60	71,320	80,933	13.48
2022 ಮಾರ್ಚ್	55	83,536	92,831	11.13
2022 ಜೂನ್	49	80,181	88,729	10.66

ಯಾವ ವರ್ಷ ಎಷ್ಟು ಯೋಜನೆ ತಡ: ಕರ್ನಾಟಕದಲ್ಲಿ ವಿಳಂಬವಾಗಿರುವ ಯೋಜನೆಗಳ ಸಂಖ್ಯೆ 2018ರಲ್ಲಿ ಮೂರು ಇದ್ದರೆ, 2022ರ ಜೂನ್‌ಗೆ 13ಕ್ಕೆ ಏರಿದೆ. ತಡವಾಗಿರುವ ಯೋಜನೆಗಳ ಮೊತ್ತ 2019ರಲ್ಲಿ ₹2,604 ಕೋಟಿಯಿಂದ ₹3,671 ಕೋಟಿಗೆ ಹೆಚ್ಚಿದೆ. 2022ರ ಮಾರ್ಚ್ ವೇಳೆಗೆ ಯೋಜನೆಗಳ ಮೊತ್ತ ₹9,674 ಕೋಟಿಗೆ ಏರಿದೆ. ಮೂರೇ ತಿಂಗಳಲ್ಲೇ ಯೋಜನೆಗಳ ಮೊತ್ತ ₹13,085 ಕೋಟಿಗೆ ಜಿಗಿದಿದೆ. ಯೋಜನೆಗಳು ನಿಧಾನವಾಗಿ ಕಾರ್ಯಗತವಾಗುತ್ತಿರುವುದರಿಂದ ಯೋಜನೆಗಳ ವೆಚ್ಚ ಶೇ 14ರಷ್ಟು ಹೆಚ್ಚಾಗಿದೆ.

ಯೋಜನಾ ವೆಚ್ಚ ಹೆಚ್ಚಳ ಏಕೆ: ‘ಯೋಜನೆಯ ಸ್ವರೂಪದಲ್ಲಿ ಪದೇ ಪದೇ ಬದಲಾವಣೆ, ಭೂಸ್ವಾಧೀನದ ಪರಿಹಾರ ಮೊತ್ತ ಹೆಚ್ಚಳ, ಪರಿಸರ ಅನುಮೋದನೆ ವಿಳಂಬ, ಕುಶಲ ಕಾರ್ಮಿಕರ ಕೊರತೆ, ಬೆಲೆ ಏರಿಕೆಯು ಯೋಜನಾ ಮೊತ್ತದ ಹೆಚ್ಚಳಕ್ಕೆ ಪ್ರಮುಖ ಕಾರಣಗಳು. ಕೆಲವು ಯೋಜನೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳಲು ಹಾಗೂ ಪರಿಸರ ಅನುಮೋದನೆ ಪಡೆಯಲು ವರ್ಷಾನುಗಟ್ಟಲೆ ಬೇಕಾಗುತ್ತದೆ. ಇದು ಯೋಜನೆಗಳ ವಿಳಂಬಕ್ಕೆ ಕಾರಣ’ ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಬೆಂಗಳೂರಿನಲ್ಲಿ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆಯನ್ನು ಘೋಷಿಸಿ 15 ವರ್ಷಗಳೇ ಕಳೆದಿವೆ. ಯೋಜನೆಯ ಸ್ವರೂಪ ಹಲವು ಸಲ ಬದಲಾಗಿದೆ. ಕೇಂದ್ರ ಸರ್ಕಾರದ ಅನುದಾನಕ್ಕಾಗಿ ಹತ್ತಾರು ಸಲ ಮನವಿ ಸಲ್ಲಿಸಲಾಗಿದೆ. ಈಗಷ್ಟೇ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ಬೆಂಗಳೂರು ಉಪನಗರ ರೈಲು ಯೋಜನೆಯ ಸ್ಥಿತಿ ಸಹ ಇದಕ್ಕಿಂತ ಭಿನ್ನವಿಲ್ಲ. ₹15,600 ಕೋಟಿ ಮೊತ್ತದ ಯೋಜನೆಗೆ ರೈಲ್ವೆ ಇಲಾಖೆಯ ಪಿಂಕ್ ಪುಸ್ತಕದಲ್ಲಿ ₹1 ಕೋಟಿಯಷ್ಟೇ ನೀಡಲಾಗಿದೆ. ಇಂತಹ ಕೆಲವು ಯೋಜನೆಗಳನ್ನು ಪಟ್ಟಿ ಮಾಡಬಹುದು’ ಎಂದು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಸಿ.ವಿ. ರಾಮನ್ ರಸ್ತೆಯಲ್ಲಿ ಸಂಚಾರ ನಿರ್ಬಂಧ

ಬೆಂಗಳೂರು: ಯಶವಂತಪುರದ ಸಿ.ವಿ. ರಾಮನ್ ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ಆಗಸ್ಟ್ 18ರಿಂದ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಲಿದ್ದು, ಈ ಅವಧಿಯಲ್ಲಿ ಬಿಎಚ್‌ಇಎಲ್ ಜಂಕ್ಷನ್‌ನಿಂದ ಯಶವಂತಪುರ ವೃತ್ತದವರೆಗಿನ ರಸ್ತೆಯಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

‘30 ದಿನಗಳವರೆಗೆ ಕಾಮಗಾರಿ ನಡೆಯಲಿದೆ. ಸಾರ್ವಜನಿಕರು ಪರ್ಯಾಯ ಮಾರ್ಗ ಬಳಸಬೇಕು’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

‘ಮಲ್ಲೇಶ್ವರ 18ನೇ ಅಡ್ಡರಸ್ತೆಯಿಂದ ಬರುವ ವಾಹನಗಳು, ಸರ್ಕಲ್ ಮಾರಮ್ಮ ದೇವಸ್ಥಾನ, ಮಾರ್ಗೋಸಾ ರಸ್ತೆ, 15ನೇ ಅಡ್ಡರಸ್ತೆ ಹಾಗೂ ಯಶವಂತಪುರ 8ನೇ ಮುಖ್ಯರಸ್ತೆ ಮೂಲಕ ಸಂಚರಿಸಬಹುದು. ಮೇಖ್ರಿ ವೃತ್ತದಿಂದ ಬರುವ ವಾಹನಗಳು, ಸದಾಶಿವನಗರ ಪೊಲೀಸ್ ಠಾಣೆ ಜಂಕ್ಷನ್, ಕುವೆಂಪು ವೃತ್ತ, ಬಿಇಎಲ್ ವೃತ್ತದ ಮೂಲಕ ಹೋಗಬಹುದು’ ಎಂದಿದ್ದಾರೆ.

ಅರಸು ಜಯಂತಿ: ಸಾಧಕರಿಗೆ ಸನ್ಮಾನ

ಮಂಗಳೂರು: ಹಿಂದುಳಿದ ವರ್ಗಗಳ ಸುಧಾರಣೆಯ ಹರಿಕಾರ ದಿ.ದೇವರಾಜ ಅರಸು ಅವರ 107ನೇ ಜನ್ಮ ದಿನದ ಅಂಗವಾಗಿ ಆ.20ರಿಂದ 22ರವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವಿಶೇಷ ಕಾರ್ಯಕ್ರಮ ನಡೆಯಲಿವೆ. ಪ್ರತಿ ಜಿಲ್ಲೆಯಲ್ಲಿ ಹಿಂದುಳಿದ ಸಮುದಾಯದ ಒಬ್ಬರು ಸಾಧಕರನ್ನು ಗುರುತಿಸಿ ಸನ್ಮಾನಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಹಾಗೂ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯ ಮಟ್ಟದ ಕಾರ್ಯಕ್ರಮ ಆ.20ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅರಸು ಪ್ರಶಸ್ತಿ ಪ್ರದಾನ ಮಾಡುವರು. ಅದೇ ದಿನ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ ಮಾಡುವರು. ಪ್ರಶಸ್ತಿಯು ₹50 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಸಾಧಕರ ಆಯ್ಕೆಗೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ’ ಎಂದರು.

ಬುಧವಾರ, ಆಗಸ್ಟ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 228 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ಮ್ಯಾನೇಜ್ ಮಾಡ್ತಿದ್ದೀವಿ ಎಂದು ಹೇಳಿರಬಹುದು’ 4
ಬಿಲ್ಕಿಸ್ ಬಾನು ಪ್ರಕರಣ: ನಿಯಮ ನಿರ್ಲಕ್ಷಿಸಿ ಕೈದಿಗಳ ಬಿಡುಗಡೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
59,842 ▲	17,825 ▲	₹53,920 (ಬೆಂಗಳೂರು)	₹59,800 (ಬೆಂಗಳೂರು)

ಮಹಿಳಾ ಮತ



ಮಹಿಳೆಯರ ಕುರಿತ ವಿಷಯಗಳ ಸಮಗ್ರ ವರದಿಗಳಿಗಾಗಿ ವಿಶೇಷ ಅಂಕಣ **ಮಹಿಳಾ ಮತ** ಇಂದಿನಿಂದ ಶುರು

9ನೇ ಪುಟ ನೋಡಿ

ಬಿಬಿಎಂಪಿ ವಾರ್ಡ್ ಮೀಸಲಾತಿ ಅಂತಿಮ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳಿಗೆ ಮೀಸಲಾತಿ ಅಂತಿಮಗೊಳಿಸಿ ರಾಜ್ಯ ಸರ್ಕಾರ ಮಂಗಳವಾರ ರಾತ್ರಿ ಅಧಿಸೂಚನೆ ಹೊರಡಿಸಿದೆ. 3

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಸ್ತಿ ನೋಂದಣಿಗೆ 20 ನಿಮಿಷ!

ನ.1ರಿಂದ ಹೊಸ ಸೌಲಭ್ಯ: ಉಪ ನೋಂದಣಾಧಿಕಾರಿ ಕಚೇರಿಗೆ ಹೊಸ ಸ್ಪರ್ಶ

• ಚಂದ್ರಹಾಸ ಹಿರೇಮಳಲಿ

ಮುಖ್ಯಾಂಶಗಳು
- ಮನೆಯಲ್ಲೇ ಕುಳಿತು ಆಸ್ತಿ ದಾಖಲೆಗಳ ಅಪ್‌ಲೋಡ್
- ಅನುಕೂಲಕರ ನೋಂದಣಿ ದಿನ, ಸಮಯ ಆಯ್ಕೆಗೆ ಅವಕಾಶ

ಪ್ರಜಾವಾಣಿ ವಿಶೇಷ

ಬೆಂಗಳೂರು: ಆಸ್ತಿ ನೋಂದಣಿ ಮಾಡಿಸುವಲ್ಲಿ ಇರುವ ಅಡೆತಡೆಗಳನ್ನು ಶಾಶ್ವತವಾಗಿ ಪರಿಹರಿಸಲು ಮುಂದಾಗಿರುವ ಸರ್ಕಾರ, ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಪಾಸ್‌ಪೋರ್ಟ್ ಕಚೇರಿ ಮಾದರಿಯ ಸೇವೆ ಒದಗಿಸುವತ್ತ ಹೆಜ್ಜೆ ಇಟ್ಟಿದೆ.

ಆಸ್ತಿಗಳ ಸುಲಭ ನೋಂದಣಿಗಾಗಿ ವೆಬ್ ಆಧಾರಿತ ಕಾರ್ಯನಿರ್ವಹಣೆಯ ನಾಗರಿಕ ಸ್ನೇಹಿ ಕಾವೇರಿ–2 ತಂತ್ರಾಂಶ ರೂಪಿಸಲಾಗಿದೆ. ನವೆಂಬರ್ 1ರಿಂದಲೇ ನಾಗರಿಕರು ತಮಗೆ ಅನುಕೂಲವಾಗುವ ನೋಂದಣಿ ದಿನ, ಸಮಯ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಕಚೇರಿಗೆ ಭೇಟಿ ನೀಡಿದ 20 ನಿಮಿಷದೊಳಗೆ ಎಲ್ಲ ಪ್ರಕ್ರಿಯೆಗಳೂ ಪೂರ್ಣಗೊಳ್ಳಲಿವೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಹೆಚ್ಚುವರಿ ಆಯುಕ್ತ ಎಚ್‌.ಎಲ್‌.ಪ್ರಭಾಕರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಇದುವರೆಗೂ ನೋಂದಣಿ ಬಯಸುವವರು ಎಲ್ಲ ದಾಖಲೆಗಳನ್ನು ನೀಡಿ, ಮುದ್ರಾಂಕ, ನೋಂದಣಿ ಶುಲ್ಕಗಳನ್ನು ಭರಿಸಿದ ನಂತರ ದಿನ, ಸಮಯಕ್ಕಾಗಿ ವಾರಗಟ್ಟಲೆ ಕಾಯಬೇಕಿತ್ತು. ಕಚೇರಿಯ ಅಧಿಕಾರಿಗಳು, ಸಿಬ್ಬಂದಿ ನೀಡಿದ ಟೋಕನ್ ಆಧಾರದಲ್ಲಿ ನೋಂದಣಿ ಮಾಡಿಸಬೇಕಿತ್ತು. ನಿಗದಿತ ಸಮಯಕ್ಕೆ ಹೋದರೂ ತಾಂತ್ರಿಕ ಸಮಸ್ಯೆಗಳಿಂದ ಕಾಯುವುದು ಮಾತ್ರ ತಪ್ಪುತ್ತಿರಲಿಲ್ಲ. ಇಂತಹ ಸಮಸ್ಯೆಗಳಿಗೆ ಕಾವೇರಿ–2 ತಂತ್ರಾಂಶ ಪರಿಹಾರ ದೊರಕಿಸಲಿದೆ.

ಆಸ್ತಿಯ ದಾಖಲೆಗಳ ದತ್ತಾಂಶವನ್ನು ಮನೆಯಲ್ಲೇ ಕುಳಿತು ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಬಹುದು. ಶುಲ್ಕವನ್ನು ಲೆಕ್ಕ ಹಾಕಿಕೊಳ್ಳಬಹುದು. ಪ್ರತಿ ಹಂತದಲ್ಲೂ ಮೊಬೈಲ್ ಸಂದೇಶ ರವಾನಿಸಲಾಗುತ್ತದೆ. ಋಣಭಾರ ಪ್ರಮಾಣಪತ್ರ ಮತ್ತು ದೃಢೀಕೃತ ನಕಲುಗಳನ್ನು ಮೊಬೈಲ್ ಮೂಲಕವೇ ಪಡೆಯಬಹುದು. ನೋಂದಣಿ ದತ್ತಾಂಶಗಳನ್ನು ರಾಜ್ಯ ದತ್ತಾಂಶ ಕೋಶದಲ್ಲಿ ಸಂಗ್ರಹಣೆ ಮಾಡಲಾಗುತ್ತದೆ.

ಪ್ರತಿ ಹಂತದ ಅಧಿಕಾರಿ, ಸಿಬ್ಬಂದಿಗೂ ಜವಾಬ್ದಾರಿ ನಿಗದಿ ಮಾಡಲಾಗಿದ್ದು, ತಪ್ಪಿತಸ್ಥರನ್ನು ಸುಲಭವಾಗಿ ಗುರುತಿಸಿ ಹೊಣೆಗಾರರನ್ನಾಗಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ದತ್ತಾಂಶಗಳ ಸುರಕ್ಷತೆಗೆ ಒತ್ತು ನೀಡಲಾಗಿದೆ. ಉಪ ನೋಂದಣಾಧಿಕಾರಿ ಕಚೇರಿಯ ಜತೆಗೆ, ಜಿಲ್ಲಾ, ಕೇಂದ್ರ ಕಚೇರಿಗಳ ಕಾರ್ಯ ವಿಧಾನಗಳೂ ಸುಗಮವಾಗಲಿವೆ ಎಂದೂ ಅವರು ವಿವರ ನೀಡಿದ್ದಾರೆ.

ದತ್ತಾಂಶಗಳ ವಿಶ್ಲೇಷಣೆಗೆ ಅವಕಾಶ: ತಾಂತ್ರಿಕ ದೋಷ ರಹಿತ ಈ ವ್ಯವಸ್ಥೆಯಲ್ಲಿ ನೋಂದಣಿ ದತ್ತಾಂಶಗಳನ್ನು ವಿಶ್ಲೇಷಿಸಲು ಅವಕಾಶವಿದೆ. ಪ್ರತಿ ದಿನ ಸಂಗ್ರಹವಾಗುವ ಶುಲ್ಕಗಳ ಅಂಕಿ–ಅಂಶಗಳು ದಿನದ ಕೊನೆಗೆ ಲಭ್ಯವಾಗುತ್ತವೆ. ಯಾವ ವಯಸ್ಸಿನವರು ಎಷ್ಟು ಆಸ್ತಿ ನೋಂದಣಿ ಮಾಡಿಸಿದ್ದಾರೆ. ಮಹಿಳೆಯರು, ಪುರುಷರು ಎಷ್ಟು? ರಿಯಲ್ ಎಸ್ಟೇಟ್ ಉದ್ಯಮದ ಬೆಳವಣಿಗೆ ರಾಜ್ಯದ ಯಾವ ಜಿಲ್ಲೆಗಳಲ್ಲಿ ಹೇಗಿದೆ ಎಂಬ ಹಲವು ಸಂಗತಿಗಳ ನಿಖರ ದತ್ತಾಂಶಗಳು ದೊರೆಯುತ್ತವೆ.

ಚಿಂಚೋಳಿಯಲ್ಲಿ ಮೊದಲ ಪ್ರಯೋಗ

ರಾಜ್ಯ ಸರ್ಕಾರದ ಇ–ಆಡಳಿತ ಇಲಾಖೆಯ ಅಧೀನ ಸಂಸ್ಥೆ ‘ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್’ ಸಂಸ್ಥೆ ಅಭಿವೃದ್ಧಿಪಡಿಸಿದ ಕಾವೇರಿ– 2 ತಂತ್ರಾಂಶವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ಕಲಬುರಗಿ ಜಿಲ್ಲೆಯ ಚಿಂಚೋಳಿ ಉಪ ನೋಂದಣಾಧಿಕಾರಿ ಕಚೇರಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯೋತ್ಸವದ ದಿನ ರಾಜ್ಯದ ಎಲ್ಲ ಕಚೇರಿಗಳಲ್ಲೂ ಈ ಸೇವೆ ಲಭ್ಯವಾಗಲಿದೆ.

> **ಹೊಸ ತಂತ್ರಾಂಶದಿಂದ ವಿಳಂಬ, ಕಾಯುವಿಕೆ ಕೊನೆಗೊಳ್ಳಲಿದೆ. ಆಸ್ತಿ ನೋಂದಣಿಯಲ್ಲಿ ಆಗುವ ಅಕ್ರಮ, ವಂಚನೆಗಳಿಗೂ ಕಡಿವಾಣ ಬೀಳಲಿದೆ**
> **ಎಚ್‌.ಎಲ್‌. ಪ್ರಭಾಕರ್,** ನೋಂದಣಿ ಮತ್ತು ಮುದ್ರಾಂಕಗಳ ಹೆಚ್ಚುವರಿ ಆಯುಕ್ತ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಕ್ರೀಡಾಪಟುಗಳಿಗೆ ಶೇ 2 ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಮತ್ತು ಅರಣ್ಯ ಇಲಾಖೆಗಳ ಹುದ್ದೆಗಳಲ್ಲಿ ಕ್ರೀಡಾಪಟುಗಳಿಗೆ ಶೇ 2 ರಷ್ಟು ಮೀಸಲಾತಿ ನೀಡುತ್ತಿರುವ ಮಾದರಿಯಲ್ಲೇ ಇತರ ಇಲಾಖೆಗಳ ಹುದ್ದೆಗಳಲ್ಲೂ ಮೀಸಲಾತಿ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಪಡೆದ ಕ್ರೀಡಾಪಟುಗಳಿಗೆ ಮತ್ತು ಅಮೃತ ಕ್ರೀಡಾ ದತ್ತು ಯೋಜನೆಯಡಿ ಆಯ್ಕೆಯಾದ 75 ಕ್ರೀಡಾಪಟುಗಳಿಗೆ ಮಂಗಳವಾರ ಏರ್ಪಡಿಸಲಾದ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಮೀಸಲಾತಿ ನೀಡುವ ಕುರಿತ ಕಡತ ನನ್ನ ಮುಂದಿದ್ದು, ಅದಕ್ಕೆ ಆದಷ್ಟು ಬೇಗನೆ ಅನುಮೋದನೆ ನೀಡಲಾಗುವುದು’ ಎಂದರು.

‘ಕೇವಲ ಸರ್ಕಾರಿ ಹುದ್ದೆ ಗಿಟ್ಟಿಸುವುದಕ್ಕಾಗಿ ಕ್ರೀಡಾಪಟುಗಳಾಗಬೇಡಿ. ಕ್ರೀಡಾಪಟುಗಳ ಜೀವನಕ್ಕೆ ಭದ್ರತೆ ಬೇಕು ಎನ್ನುವುದನ್ನು ಸರ್ಕಾರ ಮನಗಂಡಿದೆ. ಕ್ರೀಡೆಯನ್ನು ನನಗೋಸ್ಕರ ಮತ್ತು ದೇಶಕ್ಕಾಗಿ ಪದಕ ಗೆಲ್ಲಲು ಆಡುತ್ತಿದ್ದೇನೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು. ನಿಮ್ಮ ಸಾಧನೆಗಳಿಗೆ ತಕ್ಕಂತೆ ಪ್ರೋತ್ಸಾಹ ನೀಡುವ ಕೆಲಸ ಮಾಡುತ್ತೇವೆ. ಪ್ರಶಸ್ತಿ ಮೊತ್ತ ಹೆಚ್ಚಳ ಮಾಡಬೇಕು ಎಂಬ ಬೇಡಿಕೆಯನ್ನು ಪರಿಶೀಲಿಸುತ್ತೇನೆ’ ಎಂದು ಬೊಮ್ಮಾಯಿ ಹೇಳಿದರು.

ಬ್ಯಾಸ್ಕೆಟ್ ಬಾಲ್ ರಾಜ್ಯ ಕ್ರೀಡೆ: ‘ಬ್ಯಾಸ್ಕೆಟ್ ಬಾಲ್ ಅನ್ನು ರಾಜ್ಯದ ಕ್ರೀಡೆಯಾಗಿ ಅಳವಡಿಸಿಕೊಳ್ಳುತ್ತೇವೆ. ಕ್ರೀಡಾ ದತ್ತು ಯೋಜನೆ ಜಾರಿಯಲ್ಲಿರುವ ಮೊಟ್ಟ ಮೊದಲ ರಾಜ್ಯ ಕರ್ನಾಟಕ’ ಎಂದರು.

ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಮಾತನಾಡಿ, ‘ಹಿಂದಿನ ಯಾವುದೇ ಸರ್ಕಾರಗಳು ನೀಡದಷ್ಟು ಪ್ರೋತ್ಸಾಹ ಮತ್ತು ಆರ್ಥಿಕ ನೆರವನ್ನು ನಮ್ಮ ಸರ್ಕಾರ ನೀಡುತ್ತಿದೆ. ಅಮೃತ ಯೋಜನೆಯಡಿ ಮುಖ್ಯಮಂತ್ರಿ ಬೊಮ್ಮಾಯಿ ಅವರು ಇಲಾಖೆಗೆ ಸಾಕಷ್ಟು ಅನುದಾನ ನೀಡಿದ್ದಾರೆ’ ಎಂದು ಹೇಳಿದರು.

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪದಕಗಳನ್ನು ಗೆದ್ದ ಗುರುರಾಜ್ ಪೂಜಾರಿ, ರಾಜೇಶ್ವರಿ ಗಾಯಕ್ವಾಡ್, ಪ್ರಿಯಾಮೋಹನ್, ಅಂಕಿತಾ ಸುರೇಶ್ ಅವರನ್ನು ಗೌರವಿಸಲಾಯಿತು.

ಕಣಿವೆಗೆ ಬಸ್ ಉರುಳಿ ಐಟಿಬಿಪಿಯ ಏಳು ಯೋಧರ ಸಾವು



ಶ್ರೀನಗರ (ಪಿಟಿಐ): ಆಳವಾದ ಕಣಿವೆಗೆ ಬಸ್ ಉರುಳಿ ಇಂಡೊ–ಟಿಬೆಟ್ ಗಡಿ ಪೊಲೀಸ್ (ಐಟಿಬಿಪಿ) ಪಡೆಯ ಏಳು ಯೋಧರು ಮಂಗಳವಾರ ಮೃತಪಟ್ಟಿದ್ದಾರೆ.

‘ಬಸ್‌ನಲ್ಲಿದ್ದ ಇತರ 32 ಮಂದಿ ಗಾಯಗೊಂಡಿದ್ದಾರೆ. ಇವರೆಲ್ಲಾ ಅಮರನಾಥ ಯಾತ್ರೆ ವೇಳೆ ಭದ್ರತಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದರು. ಅಲ್ಲಿಂದ ಮರಳುತ್ತಿದ್ದಾಗ ಅವಘಡ ನಡೆದಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

5ನೇ ಪುಟ ನೋಡಿ

ಉಗ್ರರಿಂದ ಗುಂಡಿನ ದಾಳಿ ಕಾಶ್ಮೀರಿ ಪಂಡಿತ ಸಾವು

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು–ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಚೋಟಿಪೊರಾ ಪ್ರದೇಶದಲ್ಲಿ ಉಗ್ರಗಾಮಿಗಳು ಮಂಗಳವಾರ ನಡೆಸಿದ ಗುಂಡಿನ ದಾಳಿಯಲ್ಲಿ ಕಾಶ್ಮೀರ ಪಂಡಿತರೊಬ್ಬರು ಸಾವನ್ನಪ್ಪಿದ್ದು, ಅವರ ಸಹೋದರ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೃತ ವ್ಯಕ್ತಿಯನ್ನು ಸುನೀಲ್ ಕುಮಾರ್ ಹಾಗೂ ಗಾಯಗೊಂಡವರನ್ನು ಪಿಂಟು ಕುಮಾರ್ ಎಂದು ಗುರುತಿಸಲಾಗಿದೆ’ ಎಂದು ಪೊಲೀಸ್ ಇಲಾಖೆ ವಕ್ತಾರರೊಬ್ಬರು ತಿಳಿಸಿದ್ದಾರೆ.

‘ಚೋಟಿಪೊರಾ ಪ್ರದೇಶದಲ್ಲಿರುವ ತಮ್ಮ ಸೇಬುಹಣ್ಣಿನ ತೋಟದಲ್ಲಿ ಈ ಇಬ್ಬರು ಕೆಲಸ ಮಾಡುತ್ತಿದ್ದ ವೇಳೆ, ಸಮೀಪದಿಂದಲೇ ಉಗ್ರರು ಇಬ್ಬರ ಮೇಲೆ ಗುಂಡು ಹಾರಿಸಿದ್ದು, ಸುನೀಲ್ ಕುಮಾರ್ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ಪಿಂಟು ಕುಮಾರ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

ದಾಳಿಯ ಹೊಣೆಯನ್ನು ಈ ವರೆಗೆ ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ. ಪೊಲೀಸರು ಹಾಗೂ ಭದ್ರತಾ ಪಡೆಗಳು ಘಟನಾ ಪ್ರದೇಶವನ್ನು ಸುತ್ತುವರಿದಿದ್ದು, ದಾಳಿಕೋರರ ವಿರುದ್ಧದ ಕಾರ್ಯಾಚರಣೆ ಮುಂದುವರಿದಿದೆ ಎಂದೂ ತಿಳಿಸಿದ್ದಾರೆ.

ದಾಳಿ ಹೆಚ್ಚಳ: ವಲಸೆ ಕಾರ್ಮಿಕರು ಹಾಗೂ ಸ್ಥಳೀಯರಲ್ಲದವರನ್ನು ಗುರಿಯಾಗಿಸಿ ಕಳೆದ ಅಕ್ಟೋಬರ್‌ನಿಂದ ಉಗ್ರರು ದಾಳಿಯನ್ನು ಹೆಚ್ಚಿಸಿದ್ದಾರೆ.

‘ಆರ್‌ಎಸ್‌ಎಸ್, ಗುಪ್ತಚರ ಸಂಸ್ಥೆಗಳೊಂದಿಗೆ ಕಾರ್ಯ ನಿರ್ವಹಿಸುವವರು ಹಾಗೂ ಮೂಲ ಕಾಶ್ಮೀರಿಗಳಲ್ಲದವರು ಜಮ್ಮು–ಕಾಶ್ಮೀರದಲ್ಲಿ ಆಸ್ತಿಗಳನ್ನು ಖರೀದಿ ಮಾಡಿದಲ್ಲಿ ಅವರನ್ನು ‘ಆಕ್ರಮಣ’ಕಾರರು ಎಂದೇ ಭಾವಿಸಿ, ಅವರನ್ನು ಗುರಿಯಾಗಿಸಿ ದಾಳಿ ನಡೆಸಲಾಗುತ್ತದೆ’ ಎಂದು ಟಿಆರ್‌ಎಫ್ ಎಚ್ಚರಿಸಿತ್ತು.

ಇನ್ನೊಂದು ಸುದ್ದಿ 11

ಮುಖ್ಯ ಆರೋಪಿ ಕಾಲಿಗೆ ಗುಂಡೇಟು • ಭದ್ರಾವತಿಯಲ್ಲಿ ಯುವಕನ ಮೇಲೆ ಹಲ್ಲೆ

ಶಿವಮೊಗ್ಗ: ಚೂರಿ ಇರಿತ – ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಫ್ಲೆಕ್ಸ್ ಅಳವಡಿಸುವ ವಿವಾದದಿಂದಾಗಿ ಸೋಮವಾರ ಉದ್ವಿಗ್ನಗೊಂಡಿದ್ದ ಶಿವಮೊಗ್ಗ ನಗರ ಮಂಗಳವಾರ ಬಹುತೇಕ ಸಹಜ ಸ್ಥಿತಿಗೆ ಮರಳಿದೆ. ಇರಿತ ಪ್ರಕರಣದ ಪ್ರಮುಖ ಆರೋಪಿಯ ಕಾಲಿಗೆ ಪೊಲೀಸರು ಗುಂಡುಹಾರಿಸಿ ಆತನನ್ನು ವಶಕ್ಕೆ ಪಡೆದಿದ್ದಾರೆ. ಇದುವರೆಗೆ ಒಟ್ಟು ನಾಲ್ವರು ಆರೋಪಿಗಳನ್ನು ಬಂಧಿಸಿದಂತಾಗಿದೆ.

ಎರಡು ಗುಂಪುಗಳ ಘರ್ಷಣೆ ವೇಳೆ ಸೋಮವಾರ ಪ್ರೇಮ್ ಸಿಂಗ್ ಎಂಬುವವರನ್ನು ಚೂರಿಯಿಂದ ಇರಿಯಲಾಗಿತ್ತು. ರಾತ್ರಿಯೇ ಇಬ್ಬರನ್ನು ಬಂಧಿಸಲಾಗಿತ್ತು. ಪ್ರಮುಖ ಆರೋಪಿ ಮಾರ್ನಬೈಲಿನ ಚರ್ಬಿ ಅಲಿಯಾಸ್ ಜಬೀವುಲ್ಲಾ (30) ಎನ್‌.ಟಿ. ರಸ್ತೆಯ ಫಲಕ್ ಪ್ಯಾಲೇಜ್ ಬಳಿ ಇರುವ ಮಾಹಿತಿ ಪಡೆದ ಪೊಲೀಸರು ಮಂಗಳವಾರ ನಸುಕಿನಲ್ಲಿ ಬಂಧನಕ್ಕೆ ತೆರಳಿದ್ದರು.

ಸಾವರ್ಕರ್ ಫ್ಲೆಕ್ಸ್ ಹರಿದ ಕಿಡಿಗೇಡಿಗಳು

ತುಮಕೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ನಗರದಲ್ಲಿ ಅಳವಡಿಸಲಾಗಿದ್ದ ವಿನಾಯಕ ದಾಮೋದರ ಸಾವರ್ಕರ್ ಚಿತ್ರವಿದ್ದ ಫ್ಲೆಕ್ಸ್‌ಗಳನ್ನು ಸೋಮವಾರ ರಾತ್ರಿ ಹರಿದು ಹಾಕಲಾಗಿದೆ. 4

> **ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ ಸುಮ್ಮನೇ ಬಿಡುವುದಿಲ್ಲ. ಅವರಿಗೆ ಯಾವ ಸಂಘಟನೆ ನಂಟು ಇದೆ ಎಂಬುದರ ಬಗ್ಗೆ ತನಿಖೆ ನಡೆಸಿ, ತಾರ್ಕಿಕ ಅಂತ್ಯ ಕಂಡುಕೊಳ್ಳಲಾಗುವುದು**
> **ಆರಗ ಜ್ಞಾನೇಂದ್ರ,** ಗೃಹ ಸಚಿವ

4ನೇ ಪುಟ ನೋಡಿ

ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪೂರ್ವ ತಯಾರಿ • ತಂತ್ರಗಾರನಿಂದ ನೀಲನಕ್ಷೆ

ಮತ ಬೇಟೆಗೆ ಕಾಂಗ್ರೆಸ್ ತಂತ್ರಗಾರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಸಜ್ಜುಗೊಳ್ಳುವ ಉದ್ದೇಶದಿಂದ ರೂಪಿಸಿ, ಅಳವಡಿಸಿಕೊಳ್ಳಬೇಕಾದ ಕಾರ್ಯತಂತ್ರಗಳ ಕುರಿತು ರಾಜ್ಯ ಕಾಂಗ್ರೆಸ್ ನಾಯಕರ ಮಹತ್ವದ ಸಭೆ ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆಯಿತು.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನೇತೃತ್ವದಲ್ಲಿ ಗೌಪ್ಯವಾಗಿ ನಡೆದ ಸಭೆಯಲ್ಲಿ ಚುನಾವಣಾ ತಂತ್ರಗಾರ ಸುನಿಲ್ ಕನುಗೋಲು ಸಿದ್ಧಪಡಿಸಿದ್ದ ನೀಲನಕ್ಷೆ ಬಗ್ಗೆ ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿನ ಕೋಮು ಸಂಘರ್ಷಗಳ ಬಗ್ಗೆ ಪ್ರತಿಕ್ರಿಯೆ ನೀಡುವ ವೇಳೆ ಪಕ್ಷದ ನಾಯಕರು ಎಚ್ಚರಿಕೆ ವಹಿಸಬೇಕು. ಅನವಶ್ಯಕವಾಗಿ ವ್ಯತಿರಿಕ್ತ ಹೇಳಿಕೆ ನೀಡುವುದರಿಂದ ಗೊಂದಲಗಳು ಸೃಷ್ಟಿಯಾಗುತ್ತಿವೆ ಎನ್ನುವ ವಿಷಯ ಚರ್ಚೆಗೆ ಬಂದಿದೆ. ಇಂಥ ವಿಚಾರಗಳನ್ನು ಸಮರ್ಪಕವಾಗಿ ಎದುರಿಸುವುದು ಹಾಗೂ ವಿವಾದ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಷ್ಟು ಕೋಮು ಗಲಭೆಗಳ ನಡೆದಿವೆ, ಆ ಗಲಭೆಗಳು ಚುನಾವಣೆಗಳಲ್ಲಿ ಯಾವ ರೀತಿಯ ಪರಿಣಾಮ ಬೀರಲಿವೆ ಎನ್ನುವ ಬಗ್ಗೆ ಪ್ರಾತ್ಯಕ್ಷಿಕೆಯನ್ನೂ ಸಭೆಯಲ್ಲಿ ನೀಡಲಾಗಿದೆ.

ರಾಜ್ಯದ 4 ವಿಭಾಗಗಳಲ್ಲಿ ಕಾಂಗ್ರೆಸ್ ಪಕ್ಷದ ಶಕ್ತಿ ಮತ್ತು ದೌರ್ಬಲ್ಯದ ಬಗ್ಗೆಯೂ ಸುನಿಲ್ ಮಾಹಿತಿ ನೀಡಿದ್ದಾರೆ. ಎಲ್ಲ ನಾಯಕರು ಒಗ್ಗಟ್ಟಿನಿಂದ ಹೋಗಬೇಕು. ಯಾವುದೇ ಗೊಂದಲಗಳಿಗೆ ಅವಕಾಶ ನೀಡಬಾರದು. ಮುಂದಿನ ದಿನಗಳಲ್ಲಿ ವಲಯವಾರು ವಿಂಗಡಣೆ ಮಾಡಿ ಪ್ರಚಾರದ ತಂತ್ರಗಾರಿಕೆ ರೂಪಿಸಿ, ಒಬ್ಬೊಬ್ಬ ನಾಯಕರಿಗೆ ಜವಾಬ್ದಾರಿ ಹಂಚಬೇಕು. ಯಾವ ಭಾಗದಲ್ಲಿ ಯಾವ ವಿಷಯ ಮುಂದಿಟ್ಟುಕೊಂಡು ಪ್ರಚಾರ ಮಾಡಬೇಕು, ಎಲ್ಲೆಲ್ಲಿ–ಏನೇನು ಸರಿಪಡಿಸಿಕೊಳ್ಳಬೇಕು ಎಂಬ ಬಗ್ಗೆಯೂ ಚರ್ಚೆ ನಡೆದಿದೆ.

ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಶೇ 40 ಕಮಿಷನ್ ಸರ್ಕಾರ ಎನ್ನುವುದು ಜನರ ಮನಸ್ಸಿನಲ್ಲಿದೆ. ಈ ಭಾವನೆ ಚುನಾವಣೆಯವರೆಗೆ ಜನರ ಮನಸ್ಸಿನಲ್ಲಿ ಉಳಿಯುವಂತೆ ಮಾಡಬೇಕು. ಬಿಜೆಪಿ ಸಚಿವರು, ಶಾಸಕರು ಸರ್ಕಾರದ ವಿರುದ್ಧ ಮಾತನಾಡುತ್ತಿರುವುದನ್ನೂ ಲಾಭ ಮಾಡಿಕೊಳ್ಳಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆ ವಿಷಯ ಮುಂದಿಟ್ಟು ಮಹಿಳಾ ಮತದಾರರನ್ನು ತಲುಪಲು ಕಾರ್ಯತಂತ್ರ ರೂಪಿಸಬೇಕು ಎಂದೂ ಸಲಹೆ ನೀಡಿದ್ದಾರೆ. ಪ್ರವಾಹದಿಂದ ಆಗಿರುವ ಹಾನಿಗೆ ಸರ್ಕಾರ ಸರಿಯಾಗಿ ಸ್ಪಂದಿಸಿಲ್ಲ. ಈ ವಿಚಾರದ ಮೂಲಕ ಸ್ಥಳೀಯ ನಾಯಕರು ಜನರ ಬಳಿ ತಲುಪಬೇಕು. ಸೆ. 15ರ ವೇಳೆಗೆ ಇನ್ನೊಂದು ಸಮೀಕ್ಷಾ ವರದಿ ಬರಲಿದ್ದು, ಆಗ ಕಾರ್ಯಯೋಜನೆಗಳ ಬಗ್ಗೆ ಚರ್ಚಿಸಿ, ನಿರ್ಣಯ ತೆಗೆದುಕೊಳ್ಳಲು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ನಾಯಕರಾದ ಎಚ್.ಕೆ. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರು ಇದ್ದರು.

ಅಕ್ಟೋಬರ್‌ನಲ್ಲಿ ಬೆಂಗಳೂರಿಗೆ ಅತಿ ದೊಡ್ಡ ವಿಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವದ ಅತಿ ದೊಡ್ಡ ಮತ್ತು ಅತ್ಯಂತ ವಿಶಾಲವಾದ ಪ್ರಯಾಣಿಕ ವಿಮಾನ ಎ– 380 ಶೀಘ್ರದಲ್ಲೇ ಬೆಂಗಳೂರಿಗೆ ಬರಲಿದೆ. ಅಕ್ಟೋಬರ್ 30ರಿಂದ ಎಮಿರೇಟ್ಸ್ ಜಂಬೊ ಜೆಟ್(79.8 ಮೀಟರ್ ಉದ್ದ) ವಿಮಾನ ದುಬೈ ಮತ್ತು ಬೆಂಗಳೂರು ನಡುವೆ ಸಂಚರಿಸಲಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋಡ್ 'ಎಫ್'ಗೆ ಅನುಗುಣವಾಗಿ ಈ ವಿಮಾನ ಇಳಿಸುವ ರನ್‌ವೇ ಅಣಿಗೊಳಿಸಲಾಗುತ್ತಿದೆ. ದುಬೈನಿಂದ ಅಕ್ಟೋಬರ್ 30ರ ರಾತ್ರಿ 9.25 ಹೊರಟು ಬೆಂಗಳೂರಿಗೆ ಬೆಳಗಿನ ಜಾವ 2.30ರ ಸುಮಾರಿಗೆ ಬರಲಿದೆ.

ಬೋಯಿಂಗ್ ಪ್ರಯಾಣಿಕರ ವಿಮಾನ ಮಾತ್ರ 'ಎಫ್' ಕೋಡ್ ಹೊಂದಿದ್ದ ಪ್ರಯಾಣಿಕ ವಿಮಾನವಾಗಿತ್ತು. ಎ 380 ಡಬಲ್ ಡೆಕರ್ ವಿಮಾನವಾಗಿದ್ದು, ಇದರಲ್ಲಿ 500ಕ್ಕೂ ಹೆಚ್ಚು ಜನ ಪ್ರಯಾಣಿಸಬಹುದು. ಮುಂಬೈ ಮತ್ತು ದೆಹಲಿ ಬಿಟ್ಟರೆ ಜಂಬೊ ಜೆಟ್ ವಿಮಾನ ಸಂಚಾರಕ್ಕೆ ಸಾಕ್ಷಿಯಾಗಲಿರುವ ದೇಶದ ಮೂರನೇ ನಗರ ಬೆಂಗಳೂರು ಎನಿಸಿಕೊಳ್ಳಲಿದೆ.

ವಾಟ್ಸ್‌ಆ್ಯಪ್ ಮೂಲಕ ಕುದುರೆ ರೇಸ್ ಬೆಟ್ಟಿಂಗ್: ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಟ್ಸ್‌ಆ್ಯಪ್ ಹಾಗೂ ಟೆಲಿಗ್ರಾಂ ಆ್ಯಪ್‌ನಲ್ಲಿ ಗ್ರೂಪ್ ರಚಿಸಿಕೊಂಡು ಕುದುರೆ ರೇಸ್ ಬೆಟ್ಟಿಂಗ್ ನಡೆಸುತ್ತಿದ್ದವರ ವಿರುದ್ಧ ಪೊಲೀಸರು ಕಾರ್ಯಾಚರಣೆ ನಡೆಸಿದ್ದು, ಉದ್ಯಮಿಗಳು ಸೇರಿದಂತೆ 8 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಸಿಸಿಬಿ ಹಾಗೂ ಉಪ್ಪಾರಪೇಟೆ ಠಾಣೆ ಪೊಲೀಸರು ಇತ್ತೀಚೆಗೆ ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿದ್ದಾರೆ. ಈ ಸಂಬಂಧ ಎರಡು ಎಫ್‌ಐಆರ್ ದಾಖಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ರೇಸ್‌ಕೋರ್ಸ್ ಆವರಣದಲ್ಲೇ ಬಂಧನ: 'ನಗರದ ರೇಸ್‌ಕೋರ್ಸ್ ಪ್ರವೇಶ ದ್ವಾರದಲ್ಲೇ ಆರೋಪಿ ಬಸವರಾಜ್ (45) ಎಂಬುವರು ಜನರಿಂದ ಅಕ್ರಮವಾಗಿ ಹಣ ಕಟ್ಟಿಸಿಕೊಂಡು ಬೆಟ್ಟಿಂಗ್ ನಡೆಸುತ್ತಿದ್ದರು. ಹಣ ಕಟ್ಟುತ್ತಿದ್ದವರನ್ನು ಒಂದೆಡೆ ಸೇರಿಸಲು ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿಕೊಂಡಿದ್ದರು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಆರೋಪಿ ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ನ್ಯಾಯಾಲಯದಿಂದ ಅನುಮತಿ ಪಡೆದು ಕಾರ್ಯಾಚರಣೆ ನಡೆಸಲಾಯಿತು. ಪುರಾವೆ ಸಮೇತವಾಗಿ ಬಸವರಾಜ್ ಅವರನ್ನು ಬಂಧಿಸಲಾಯಿತು. ಅವರಿಂದ ₹ 31,500 ನಗದು, ರೇಸ್ ಮಾಹಿತಿಯುಳ್ಳ ಕರಪತ್ರ, ಮೊಬೈಲ್ ಹಾಗೂ ಬೆಟ್ಟಿಂಗ್‌ಗೆ ಸಂಬಂಧಪಟ್ಟ ಹಾಳೆಗಳನ್ನು ಜಪ್ತಿ ಮಾಡಲಾಗಿದೆ. ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ ಇವರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದೂ ಹೇಳಿವೆ.

ಕೊಠಡಿ ಮೇಲೆ ದಾಳಿ: 'ಮೂವಿಲ್ಯಾಂಡ್ ಸಿನಿಮಂದಿರ ಬಳಿಯ ಮಗಜಿ ರೆಸಿಡೆನ್ಸಿ ಕಟ್ಟಡದ 2ನೇ ಮಹಡಿಯಲ್ಲಿರುವ ಕೊಠಡಿ ಮೇಲೆ ದಾಳಿ ಮಾಡಲಾಗಿತ್ತು. ಕೊಠಡಿಯಲ್ಲಿದ್ದ ಉದ್ಯಮಿಗಳು ಹಾಗೂ ಇತರರು, ಪುಣೆ ಕುದುರೆ ರೇಸ್ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದರು' ಎಂದು ಉಪ್ಪಾರಪೇಟೆ ಪೊಲೀಸ್ ಮೂಲಗಳು ಹೇಳಿವೆ.

'ಬೆಟ್ಟಿಂಗ್ ಜಾಲದಲ್ಲಿದ್ದ ಆರೋಪಿಗಳಾದ ಸಮೀರ್ ಪಟೇಲ್, ಇಸ್ಮಾಯಿಲ್ ಷರೀಫ್, ಮಂಜುನಾಥ್, ಸುದೀಪ್, ಪ್ರಮೋದ್, ಮೋನಿಷ್ ಹಾಗೂ ವೆಂಕಟೇಶ್ ವಿರುದ್ಧ ನ್ಯಾಯಾಲಯದ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದೂ ತಿಳಿಸಿವೆ.

ನವೋದ್ಯಮಗಳಿಗೆ ನೆರವು ಎಸ್‌ಬಿಐ ವಿಶೇಷ ಶಾಖೆ



ದಿನೇಶ್ ಕುಮಾರ್

ಬೆಂಗಳೂರು: ನವೋದ್ಯಮಗಳಿಗೆ ಸಾಲ ಸೇರಿದಂತೆ ಹಣಕಾಸಿನ ವಿವಧ ಸೇವೆಗಳನ್ನು ಒದಗಿಸುವ ಉದ್ದೇಶದಿಂದಲೇ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಇದೇ ಮೊದಲ ಬಾರಿಗೆ ಬೆಂಗಳೂರಿನ ಕೋರಮಂಗಲದಲ್ಲಿ ಪ್ರತ್ಯೇಕ ಶಾಖೆಯೊಂದನ್ನು ಆರಂಭಿಸಿದೆ.

ಸಾಲ, ಠೇವಣಿ, ಹಣ ರವಾನೆ, ವಿದೇಶಿ ವಿನಿಮಯ, ವಿಮೆ, ಬಂಡ ವಾಳ ಮಾರುಕಟ್ಟೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಲಹೆಗಳು ಸೇರಿದಂತೆ ನವೋದ್ಯಮಗಳಿಗೆ ಹಣಕಾಸಿನ ಹಲವು ಸೇವೆಗಳನ್ನು ಈ ಶಾಖೆ ಒದಗಿಸಲಿದೆ.

'ಎಸ್‌ಬಿಐ ಕಡೆಯಿಂದ ದೇಶದಲ್ಲಿ ಒಟ್ಟು 104 ನವೋದ್ಯಮಗಳಿಗೆ ಈಗಾಗಲೇ ಸಾಲ ಕೊಡಲಾಗಿದೆ. ಹೀಗೆ ನೀಡಿರುವ ಸಾಲದ ಒಟ್ಟು ಮೊತ್ತ ಅಂದಾಜು ₹ 250 ಕೋಟಿ. ಬಹಳ ಜವಾಬ್ದಾರಿಯುತ ಮರುಪಾವತಿ ಇಲ್ಲಿ ಕಾಣುತ್ತಿದೆ' ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರು ನವೋದ್ಯಮಗಳಿಗೆ ರಾಜಧಾನಿ. ಹೀಗಾಗಿ ಇಲ್ಲಿ ಮೊದಲ ಶಾಖೆಯನ್ನು ಆರಂಭಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗುರುಗ್ರಾಮ ಮತ್ತು ಹೈದರಾಬಾದ್‌ನಲ್ಲಿಯೂ ಇಂತಹ ಶಾಖೆ ಆರಂಭಿಸುವ ಆಲೋಚನೆ ಇರುವುದಾಗಿ ಅವರು ಹೇಳಿದರು.

ನವೋದ್ಯಮಗಳಲ್ಲಿ ಈಕ್ವಿಟಿ ರೂಪದಲ್ಲಿ ಬಂಡವಾಳ ಒದಗಿಸುವ ವಿಚಾರದಲ್ಲಿಯೂ ಎಸ್‌ಬಿಐ ಮುಕ್ತವಾಗಿ ಇದೆ ಎಂದು ಅವರು ಉತ್ತರಿಸಿದರು.

ಮೆಟ್ರೊ: ಒಂದೇ ದಿನ ₹1.24 ಕೋಟಿ ವರಮಾನ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ದಿನ ಮೆಟ್ರೊ ರೈಲಿನಲ್ಲಿ 8.25 ಲಕ್ಷ ಜನ ಪ್ರಯಾಣ ಮಾಡಿದ್ದು, ಒಂದೇ ದಿನ ₹1.24 ಕೋಟಿ ವರಮಾನವನ್ನು ಬಿಎಂಆರ್‌ಸಿಎಲ್ ಸಂಗ್ರಹಿಸಿದೆ.

ನೇರಳೆ ಮಾರ್ಗದಲ್ಲಿ 2.58 ಲಕ್ಷ ಜನ, ಹಸಿರು ಮಾರ್ಗದಲ್ಲಿ 4.02 ಲಕ್ಷ ಜನ ಪ್ರಯಾಣಿಸಿದ್ದಾರೆ. ನಾಡಪ್ರಭು ಕೆಂಪೇಗೌಡ ಮೆಟ್ರೊ ರೈಲು ನಿಲ್ದಾಣವೊಂದರಿಂದಲೇ 1.65 ಲಕ್ಷ ಜನ ಪ್ರಯಾಣಿಸಿದ್ದಾರೆ. ಸಾಮಾನ್ಯ ದಿನಗಳಲ್ಲಿ ಸರಾಸರಿ 5.12 ಲಕ್ಷ ಜನ ಮೆಟ್ರೊ ರೈಲಿನಲ್ಲಿ ಸಂಚರಿಸುತ್ತಾರೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಇದೇ 17 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಬನ್ನೇರುಘಟ್ಟ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಸುತ್ತಮುತ್ತ ಪ್ರದೇಶಗಳು



ವಾರ್ಡ್ ವಿಂಗಡಣೆ ಕುರಿತ ತಕರಾರು ಅರ್ಜಿಗಳು: ಚುನಾವಣಾ ಆಯೋಗದ ಆಕ್ಷೇಪ

‘ವೈಯಕ್ತಿಕ ಹಿತಾಸಕ್ತಿ ವಿಜೃಂಭಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ಗಳ ಪುನರ್ ವಿಂಗಡಣೆ ವಿರೋಧಿಸಿ ಸಲ್ಲಿಸಲಾಗಿರುವ ಅರ್ಜಿಗಳಲ್ಲಿ ಸಾರ್ವಜನಿಕ ಹಿತಾಸಕ್ತಿಗಿಂತಲೂ ವೈಯಕ್ತಿಕ ಹಿತಾಸಕ್ತಿಯೇ ಢಾಳಾಗಿ ವಿಜೃಭಿಸುತ್ತಿದೆ’ ಎಂದು ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್‌ನಲ್ಲಿ ಬಲವಾದ ಆಕ್ಷೇಪ ವ್ಯಕ್ತಪಡಿಸಿದೆ.

ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣೆ ಪ್ರಶ್ನಿಸಿ ಹೈಕೋರ್ಟ್ ವಕೀಲ ಎಸ್. ಇಸ್ಮಾಯಿಲ್ ಜಬೀವುಲ್ಲಾ, ಶಾಂತಿನಗರ ಬ್ಲಾಕ್ ಕಾಂಗ್ರೆಸ್ ಸಮಿತಿ, ಮಾಜಿ ಪಾಲಿಕೆ ಸದಸ್ಯರಾದ ಬಿ.ಎನ್. ಮಂಜುನಾಥ್ ರೆಡ್ಡಿ, ಎನ್. ನಾಗರಾಜ್ ಸೇರಿ ಒಟ್ಟು ಆರು ಜನರ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ಮಧ್ಯಂತರ ಆದೇಶ ಅಥವಾ ಮೌಖಿಕ ನಿರ್ದೇಶನ ನೀಡಲು ನಿರಾಕರಿಸಿದ ನ್ಯಾಯಪೀಠ ವಿಚಾರಣೆಯನ್ನು ಬುಧವಾರ (ಆ.17) ಮಧ್ಯಾಹ್ನ 2.30ಕ್ಕೆ ಮುಂದೂಡಿದೆ.

ವಿಚಾರಣೆ ವೇಳೆ ರಾಜ್ಯ ಚುನಾವಣಾ ಆಯೋಗದ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ.ಎನ್.ಫಣೀಂದ್ರ,‘ವಾರ್ಡ್ ವಿಂಗಡಣೆಯಲ್ಲಿ ಯಾವುದೇ ತರತಮ ಎಸಗಿಲ್ಲ. 2011ರ ಜನಗಣತಿ ಪ್ರಕಾರ ಮತ್ತು ಆಯಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸರಹದ್ದು ಮೀರಿ ಹೋಗದಂತೆಯೇ ಇದೇ ಮೊದಲ ಬಾರಿಗೆ ಈ ರೀತಿಯ ವಿಂಗಡಣೆ ಮಾಡಲಾಗಿದೆ’ ಎಂದು ಸಮರ್ಥಿಸಿಕೊಂಡರು.

‘ಬಿಬಿಎಂಪಿ ಚುನಾಯಿತ ಆಡಳಿತದ ಅವಧಿ 2020ರ ಸೆಪ್ಟೆಂಬರ್ 14ರಂದೇ ಮುಗಿದಿದ್ದು, ತುರ್ತಾಗಿ ಚುನಾವಣೆ ನಡೆಸಬೇಕಿದೆ. ಅಂತೆಯೇ, ಸುಪ್ರೀಂ ಕೋರ್ಟ್ ಆದೇಶ ಪಾಲನೆಗೆ ಕಾಲಮಿತಿ ಕಡಿಮೆ ಇರುವುದರಿಂದ ಆಯೋಗಕ್ಕೆ ಅನಿವಾರ್ಯ ಸ್ಥಿತಿ ಎದುರಾಗಿದ್ದು, ಮತದಾರರ ಪಟ್ಟಿ ಸಿದ್ಧಪಡಿಸಲಾಗುತ್ತಿದೆ’ ಎಂದು ವಿವರಿಸಿದರು.

‘ವಾರ್ಡ್‌ಗಳ ಪುನರ್ ವಿಂಗಡಣೆಯಲ್ಲಿ ಬಿಬಿಎಂಪಿ ಕಾಯ್ದೆಯ ಕಲಂ 7 (1)(ಎ) ಮತ್ತು (ಬಿ) ಅನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಗಳ ವಾರ್ಡ್‌ಗಳಲ್ಲಿ ಜನಸಂಖ್ಯೆಯನ್ನು ಸರಾಸರಿ 35 ಸಾವಿರದ ಪ್ರಮಾಣದಲ್ಲಿ ಇರುವಂತೆ ನೋಡಿಕೊಳ್ಳಲಾಗಿದೆ. ಈ ಹಂತದಲ್ಲಿ ನ್ಯಾಯಾಲಯ ಯಾವುದೇ ಆದೇಶ ನೀಡಿದರೂ ಅದು ಚುನಾವಣೆಗೆ ಅಡ್ಡಿಯಾಗಲಿದೆ ಮತ್ತು ಆಯೋಗದ ಸಿದ್ಧತೆಗಳನ್ನು ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ’ ಎಂದರು.

‘ಒಂದು ವೇಳೆ ಮೀಸಲಾತಿ ಅಧಿಸೂಚನೆ ಮೇಲೆ ಏನಾದರೂ ಮಧ್ಯಂತರ ಆದೇಶ ನೀಡಿದರೆ ಅದು, ಸುಪ್ರೀಂ ಕೋರ್ಟ್ ಜುಲೈ 28ರಂದು ನೀಡಿರುವ ಆದೇಶದ ಉಲ್ಲಂಘನೆ ಆಗಲಿದೆ’ ಎಂಬ ಅಂಶವನ್ನೂ ಫಣೀಂದ್ರ ನ್ಯಾಯಪೀಠದ ಗಮನಕ್ಕೆ ತಂದರು.

ಬಿಟಿಎಂ ಲೇಔಟ್ ನಿವಾಸಿಯಾದ ಕೆ.ಜಾರ್ಜ್ ಎಂಬುವರ ಪರ ವಾದ ಮಂಡಿಸಿದ ಹಿರಿಯ ವಕೀಲ ಎ.ಎಸ್. ಪೊನ್ನಣ್ಣ, ‘ಸರ್ಕಾರ ವಾರ್ಡ್ ವಿಂಗಡಣೆಯಲ್ಲೇ ತನ್ನ ಕೈಚಳಕ ತೋರಿಸುವ ಮೂಲಕ ಚುನಾವಣೆಯಲ್ಲಿ ಗೆಲ್ಲಲು ಹುನ್ನಾರ ನಡೆಸಿದೆ’ ಎಂದು ಆರೋಪಿಸಿದರು.

ಇದೇ ವೇಳೆ ರಾಜ್ಯ ಸರ್ಕಾರ ಲಿಖಿತ ಆಕ್ಷೇಪಣೆ ಸಲ್ಲಿಸಿದ್ದು, ‘ಅರ್ಜಿದಾರರು ಸಲ್ಲಿಸಿರುವ ದಾಖಲೆ-ಪುರಾವೆಗಳು ಕಾನೂನು ಮಾನ್ಯತೆ ಹೊಂದಿಲ್ಲ. ಆದ್ದರಿಂದ, ಅರ್ಜಿಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕು’ ಎಂದು ಮನವಿ ಮಾಡಿದೆ.

‘ಸರ್ಕಾರಕ್ಕೆ ಚುನಾವಣೆ ಬೇಡವಾಗಿದೆ’

‘ಆಡಳಿತಾರೂಢ ಬಿಜೆಪಿ ಸರ್ಕಾರಕ್ಕೆ ಚುನಾವಣೆ ಬೇಡವಾಗಿದೆ’ ಎಂದು ಇದೇ ವೇಳೆ ಹಿರಿಯ ವಕೀಲ ಎಚ್.ಎನ್.ಶಶಿಧರ ಅವರು ಆರೋಪಿಸಿದರು.

ಗಾಂಧಿನಗರದ ನಿವಾಸಿ ಸಿ.ಎಸ್.ರಘು ಎಂಬ ಮಧ್ಯಂತರ ಅರ್ಜಿದಾರರ ಪರ ವಾದ ಮಂಡಿಸಿದ ಶಶಿಧರ ಅವರು, ‘ಈ ಹಂತದಲ್ಲಿ ಚುನಾವಣೆ ಪ್ರಕ್ರಿಯೆಗೆ ತಡೆ ಒಡ್ಡುವುದು ಸಲ್ಲದು. ಬಿಬಿಎಂಪಿಯಲ್ಲಿ ಚುನಾಯಿತ ಆಡಳಿತ ಬರಬೇಕಿದೆ. ಪ್ರಜಾಪ್ರಭುತ್ವದಲ್ಲಿ ಇಂತಹ ತಕರಾರುಗಳಿಗೆ ಕೊನೆ ಎಂಬುದೇ ಇರುವುದಿಲ್ಲ. ಆದ್ದರಿಂದ ನ್ಯಾಯಪೀಠ ಚುನಾವಣೆ ನಡೆಯಲು ಸಮ್ಮತಿ ನೀಡಬೇಕು’ ಎಂದು ಕೋರಿದರು.

ಬಿಬಿಎಂಪಿ: ಮೀಸಲಾತಿ ಅಂತಿಮ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳಿಗೆ ಮೀಸಲಾತಿ ಅಂತಿಮಗೊಳಿಸಿ ರಾಜ್ಯ ಸರ್ಕಾರ ಮಂಗಳವಾರ ರಾತ್ರಿ ಅಧಿಸೂಚನೆ ಹೊರಡಿಸಿದೆ.

ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಿ ಆ. 3ರಂದು ಕರಡು ಪಟ್ಟಿ ಪ್ರಕಟಿಸಲಾಗಿತ್ತು. ಕರಡು ಪಟ್ಟಿಯಲ್ಲಿರುವ ಮೀಸಲಾತಿಯನ್ನೇ ಅಂತಿಮಗೊಳಿಸಿ ಆದೇಶ ಹೊರಡಿಸಲಾಗಿದೆ.

ಕರಡು ಪಟ್ಟಿ ಪ್ರಕಟಿಸಿ ಆಕ್ಷೇಪಣೆಗೆ ಏಳು ದಿನ ಅವಕಾಶ ನೀಡಲಾಗಿತ್ತು. ಬಂದಿದ್ದ ಆಕ್ಷೇಪಣೆಗಳನ್ನು 16ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ ನಂತರ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಲಾಗಿದೆ.

ಅಧಿಕಾರಿ ಕೊಂದಿದ್ದವನಿಗೆ ಜೀವಾವಧಿ

ಬೆಂಗಳೂರು: ನ್ಯಾಯಾಂಗ ಇಲಾಖೆಯ ನಿವೃತ್ತ ಅಧಿಕಾರಿ ಪಿ.ಎನ್. ರಾಘವೇಂದ್ರ (65) ಅವರನ್ನು ಕೊಂದು ಚಿನ್ನಾಭರಣ ದೋಚಿದ್ದ ಅಪರಾಧಿ ವೈ. ರಾಮಾಂಜನೇಯಲು ಅಲಿಯಾಸ್ ಶ್ರೀರಾಮ್ (35) ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

ಬನಶಂಕರಿ 3ನೇ ಹಂತದ ಇಟ್ಟಮಡುವಿನಲ್ಲಿ ವಾಸವಿದ್ದ ವೃದ್ಧ ರಾಘವೇಂದ್ರ ಅವರನ್ನು 2014ರ ಡಿಸೆಂಬರ್ 17ರಂದು ಕೊಲೆ ಮಾಡಲಾಗಿತ್ತು. ಅವರ ಪತ್ನಿ ಸುಧಾಕುಮಾರಿ ಕೊಲೆಗೂ ಯತ್ನಿಸಲಾಗಿತ್ತು. ಪ್ರಕರಣದಲ್ಲಿ ರಾಮಾಂಜನೇಯಲುನನ್ನು ಬಂಧಿಸಿದ್ದ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಬಿ.ಕೆ. ಶೇಖರ್, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.



ಶರತ್ ನಂದಿನಿ ದೇಸಾಯಿ

ಮಿಸ್ಸೆಸ್ ಇಂಡಿಯಾ ಸ್ಪರ್ಧೆಗೆ ಆಯ್ಕೆ

ಬೆಂಗಳೂರು: ಮಿಸ್ಸೆಸ್ ಇಂಡಿಯಾದ ರಾಷ್ಟ್ರಮಟ್ಟದ ಸ್ಪರ್ಧೆಗೆ ನಗರದ ಶರತ್ ನಂದಿನಿ ದೇಸಾಯಿ ಅವರು ಅರ್ಹತೆ ಪಡೆದಿದ್ದಾರೆ.

ಯಲಹಂಕದಲ್ಲಿ ನಡೆದ ರಾಜ್ಯಮಟ್ಟದ ಅಂತಿಮ ಸ್ಪರ್ಧೆಯಲ್ಲಿ ಶರತ್ ನಂದಿನಿ ಅವರು ‘ಫಸ್ಟ್ ರನ್ನರ್ ಅಪ್’ ಸ್ಥಾನ ಪಡೆಯುವ ಮೂಲಕ ಈ ಅರ್ಹತೆ ಗಳಿಸಿದ್ದಾರೆ.

ಜತೆಗೆ, ಸಸಿ ನೆಡುವ ಕಾರ್ಯಕ್ಕಾಗಿ ‘ಮಿಸ್ಸೆಸ್ ಕ್ಲಾಸಿಕ್ ದಿವಾ ಮತ್ತು ಮಿಸ್ಸೆಸ್ ಗ್ರೀನ್’ ಪ್ರಶಸ್ತಿಗೂ ಭಾಜನರಾಗಿದ್ದಾರೆ.

ಜೆ.ಪಿ. ನಗರದ ರಾಯಲ್ ಪಾರ್ಕ್ ರೆಸಿಡೆನ್ಸಿ ನಿವಾಸಿಯಾಗಿರುವ ಶರತ್ ನಂದಿನಿ, ಎಎನ್‌ಝೆಡ್ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.



ಅನ್ನಪೂರ್ಣೇಶ್ವರಿ ನಗರದಲ್ಲಿನ ಸರಸ್ವತಿ ಮಕ್ಕಳ ಸೇವಾಶ್ರಮಕ್ಕೆ ವಿಜಯನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆಯಿಂದ ದಿನಸಿ ಸಾಮಗ್ರಿ ವಿತರಣೆ ಮಾಡಲಾಯಿತು. ಅಧ್ಯಕ್ಷ ಬಿ.ಟಿ.ಕೋದಂಡರಾಮು ಇತರರು ಉಪಸ್ಥಿತರಿದ್ದರು.

ರೈಲು ಹರಿದು ಸಾವು

ಬೆಂಗಳೂರು: ಮಲ್ಲೇಶ್ವರ ಬಳಿಯ ರೈಲ್ವೆ ಹಳಿಯಲ್ಲಿ ರೈಲು ಹರಿದು ವೆಂಕಟೇಶ್ (62) ಎಂಬುವರು ಮೃತಪಟ್ಟಿದ್ದಾರೆ.

‘ಕುರುಬರಹಳ್ಳಿ ನಿವಾಸಿಯಾದ ಅವರು, ಪೇಂಟರ್ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ 2.30 ಗಂಟೆ ಸುಮಾರಿಗೆ ಹಳಿ ಮೇಲೆ ಹೊರಟಿದ್ದಾಗ ಅವಘಡ ಸಂಭವಿಸಿದೆ. ದೇಹ ಛಿದ್ರವಾಗಿ ಬಿದ್ದಿತ್ತು’ ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

‘ವೆಂಕಟೇಶ್ ಅವರ ಸಾವು ಆಕಸ್ಮಿಕವೋ ಅಥವಾ ಆತ್ಮಹತ್ಯೆಯೋ ಎಂಬುದುದು ತನಿಖೆಯಿಂದ ಗೊತ್ತಾಗಬೇಕಿದೆ’ ಎಂದೂ ತಿಳಿಸಿವೆ.

ಪಾನಮತ್ತನಾಗಿ ಚಾಲನೆ: ಚಾಲಕನಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತನಾಗಿ ಚಾಲನೆ ಮಾಡಿದ್ದ ಆರೋಪದಡಿ ಬಿಬಿಎಂಪಿ ಚಾಲಕ ಶಿವಶಂಕರ್ ಅವರಿಗೆ ಸಂಚಾರ ಪೊಲೀಸರು ದಂಡ ವಿಧಿಸಿದ್ದು, ಜಂಟಿ ಆಯುಕ್ತರು ಬಳಸುತ್ತಿದ್ದ ಕಾರನ್ನೂ ಜಪ್ತಿ ಮಾಡಿದ್ದಾರೆ.

‘ಜಂಟಿ ಆಯುಕ್ತ ನಾಗರಾಜ್ ಬಳಕೆಗೆ ನೀಡಿದ್ದ ಕಾರನ್ನು ಶಿವಶಂಕರ್ ಚಲಾಯಿಸುತ್ತಿದ್ದರು. ರಾಜರಾಜೇಶ್ವರಿ ನಗರದ ಪ್ರವೇಶ ದ್ವಾರದ ಬಳಿ ಸೋಮವಾರ ತಡರಾತ್ರಿ ಅಪಘಾತ ಮಾಡಿದ್ದ ಶಿವಶಂಕರ್ ಅವರನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಮದ್ಯದ ಅಂಶ ಕಂಡುಬಂದಿದ್ದರಿಂದ ಕಾರು ಜಪ್ತಿ ಮಾಡಿ, ನ್ಯಾಯಾಲಯದಲ್ಲಿ ದಂಡ ಪಾವತಿಸುವಂತೆ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೆಲಸ ಮುಗಿಸಿ ಮನೆಗೆ ಹೊರಟಿದ್ದರು. ಅವರೊಬ್ಬರೇ ಕಾರಿನಲ್ಲಿದ್ದರೆಂದು ಗೊತ್ತಾಗಿದೆ. ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದರಿಂದ, ಮತ್ತೊಂದು ಕಾರಿಗೆ ಡಿಕ್ಕಿ ಆಗಿತ್ತು.’

ದಾಖಲಾಗದ ದೂರು: ‘ಅಪಘಾತದಿಂದಾಗಿ ಬಿಬಿಎಂಪಿ ಕಾರು ಹಾಗೂ ಸಾರ್ವಜನಿಕರ ಕಾರು ಎರಡಕ್ಕೂ ಹಾನಿ ಆಗಿದೆ. ಯಾರೊಬ್ಬರಿಗೂ ಗಾಯವಾಗಿಲ್ಲ. ಅಪಘಾತದ ಬಗ್ಗೆ ಸಹ ಯಾರೂ ದೂರು ನೀಡಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ವಿದ್ಯಾರ್ಥಿ ಕೊಲೆ: ಆರೋಪಿಗಳು ವಶಕ್ಕೆ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಅರ್ಬಾಜ್ (18) ಎಂಬುವರ ಕೊಲೆ ಪ್ರಕರಣ ಸಂಬಂಧ ಏಳು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

‘ಪ್ರಾವಿನ್ಸ್ ಕಾಲೇಜಿನಲ್ಲಿ ಪಿಯು ಎರಡನೇ ವರ್ಷದಲ್ಲಿ ಓದುತ್ತಿದ್ದ ಅರ್ಬಾಜ್ ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ಸಾಂಸ್ಕೃತಿಕ ಕಾರ್ಯಕ್ರಮದ ವೇಳೆ ನಡೆದಿದ್ದ ಗಲಾಟೆ ಕೊಲೆಗೆ ಕಾರಣವೆಂಬ ಸುಳಿವು ಆಧರಿಸಿ ಆರೋಪಿ ಸಾದ್, ಇತರರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಚನ ಶ್ರಾವಣ: ವಚನ ಗಾಯನ: ಟಿ.ಎಂ. ಜಾನಕಿ, ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಪಿ.ವಿ. ಶಿವಣ್ಣ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಆರ್.ಇ.ಎಸ್. ಹೈಸ್ಕೂಲ್, ಕಾವೇರಿಪುರ, ಕಾಮಾಕ್ಷಿಪಾಳ್ಯ, ಬೆಳಿಗ್ಗೆ 9.30

ಡ್ರೆಸ್ ಸರ್ಕಲ್ ಶಾಪಿಂಗ್ ಮಾಲ್ ಉದ್ಘಾಟನೆ: ಉದ್ಘಾಟನೆ: ಶ್ರೀನಿಧಿ ಶೆಟ್ಟಿ, ಅತಿಥಿಗಳು: ಎಂ. ಸತೀಶ್ ರೆಡ್ಡಿ, ಆಯೋಜನೆ: ಡ್ರೆಸ್ ಸರ್ಕಲ್, ಸ್ಥಳ: ಅರಕೆರೆ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10

ಆರೋಗ್ಯ ತಪಾಸಣಾ ಶಿಬಿರ ಮತ್ತು ಹಸಿರು ಪರಿಸರ ಕಾರ್ಯಕ್ರಮ: ಅತಿಥಿಗಳು: ಕೆ. ಸೋಮಶೇಖರ್, ಬಿ.ಎಸ್. ರಾಜಶೇಖರಯ್ಯ, ಅಧ್ಯಕ್ಷತೆ: ವಿವೇಕ್.ಎಸ್. ಸುಬ್ಬಾರೆಡ್ಡಿ, ಆಯೋಜನೆ: ಲಯನ್ಸ್ ಕ್ಲಬ್ ಇಂಟರ್ ನ್ಯಾಷನಲ್, ಸ್ಥಳ: ಹೈಕೋರ್ಟ್ ಆವರಣ, ಬೆಳಿಗ್ಗೆ 10

ರಾಷ್ಟ್ರೀಯ ಶಿಕ್ಷಣ ನೀತಿ–2020 ಮತ್ತು ಭಾರತದಲ್ಲಿ ಉನ್ನತ ಶಿಕ್ಷಣದ ಕುರಿತು ವಿಚಾರಸಂಕಿರಣ: ಉದ್ಘಾಟನೆ: ಎಸ್.ಸಿ. ಶರ್ಮಾ, ಗುರುರಾಜ ಕರಜಗಿ, ಆಯೋಜನೆ: ಶೇಷಾದ್ರಿಪುರಂ ಕಾಲೇಜಿನ ಸಭಾಂಗಣ, ಬೆಳಿಗ್ಗೆ 10

‘ಸ್ವಾತಂತ್ರ್ಯದ ಅಮೃತ ಮಹೋತ್ಸವ’: ಅತಿಥಿಗಳು: ಜಗ್ಗೇಶ್, ಸಿ.ಎಂ. ಜೋಶಿ, ಅಧ್ಯಕ್ಷತೆ: ಜಗದೀಶ್ ಎಲ್., ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಸ್ಥಳ: ವಕೀಲರ ಭವನ, ಸಿಟಿ ಸಿವಿಲ್ ಕೋರ್ಟ್ ಆವರಣ, ಮಧ್ಯಾಹ್ನ 1

ಫ್ಯಾಕ್ಟರ್ಸ್ ಫಾರ್ ಎ ಸಕ್ಸಸ್‌ಫುಲ್ ಸ್ಟಾರ್ಟ್‌ಅಪ್: ಅತಿಥಿಗಳು: ರಘುವೀರ್ ಎಸ್. ಭಟ್, ಆಯೋಜನೆ: ಬಿ.ಎನ್.ಎಂ., ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಮಧ್ಯಾಹ್ನ 3

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಾಂಸ್ಕೃತಿಕ ಸ್ಪರ್ಧೆಗಳು, ಡಾ.ಜೀವರಾಜ್ ಆಳ್ವ ದತ್ತಿನಿಧಿ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಉದ್ಘಾಟನೆ: ಟಿ.ಎಸ್. ನಾಗಾಭರಣ, ಅತಿಥಿಗಳು: ಸಿ.ಎ. ಎಚ್.ವಿ. ಗೌತಮ್, ಐ.ಎಸ್. ಪ್ರಸಾದ್, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಸಂಜೆ 4

ಬಿ.ಎಸ್. ರುಕ್ಮಿಣಮ್ಮ, ಬಿ.ಎಸ್. ಸೀತಾರಾಮರಾವ್ ದತ್ತಿ ಕಾರ್ಯಕ್ರಮ: ವಿಷಯ: ಕನ್ನಡ ಸಾಹಿತ್ಯಕ್ಕೆ ಬೆಟಗೇರಿ ಕೃಷ್ಣಶರ್ಮಾ ಕೊಡುಗೆ, ಉಪನ್ಯಾಸ: ಪ್ರಮೀಳಾ ಮಾಧವ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಸ್ಥಳ: ಬಿ.ಎಂ. ಶ್ರೀ ಕಲಾಭವನ, ಸಂಜೆ 5

‘ಸಿದ್ಧಲಿಂಗಯ್ಯ ಅವರ ಬದುಕು–ಬರಹ’ ಕುರಿತು ವಿಚಾರಗೋಷ್ಠಿ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಅಧ್ಯಕ್ಷತೆ: ಮನು ಬಳಿಗಾರ್, ಬದುಕು–ಬರಹ: ಪದ್ಮಿನಿ ನಾಗರಾಜು, ಅತಿಥಿಗಳು: ಸಂತೋಷ ಹಾನಗಲ್ಲ, ಮಾನಸ ಸಿದ್ಧಲಿಂಗಯ್ಯ, ಆಯೋಜನೆ: ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 5.30

ಗುರುಶಕ್ತಿ, ಭಕ್ತಿ, ಮುಕ್ತಿ ಪ್ರವಚನ ಯಜ್ಞಂ: ಪ್ರವಚನ: ಷಣ್ಮುಖ ಶರ್ಮಾ, ಆಯೋಜನೆ: ಋಷಿಪೀಠಂ ಸತ್ಸಂಗ, ಸ್ಥಳ: ಭಾರತೀ ತೀರ್ಥ ಸಭಾ ಭವನ, ಶೃಂಗೇರಿ ಶಂಕರ ಮಠ, ಶಂಕರಪುರಂ, ಸಂಜೆ 6

21ನೇ ಶತಮಾನದಲ್ಲಿ ರೂಪಿಸುವ ನಗರಗಳು: ಭಾಷಣಕಾರರು: ತುಷಾರ್ ಗಿರಿನಾಥ್, ಪ್ರೇಮ್ ಚಂದಾವರ್ಕರ್, ಕರೂಲ್ ಉಪಾಧ್ಯಾಯ, ಕ್ಯಾಥಿ ಡೋರ್ಗಾನ್, ನರೇಶ್ ನರಸಿಂಹನ್, ಲಿಯೋ ಸಲ್ಡಾನ್ಹಾ, ಭಾರ್ಗವಿ ರಾವ್, ಆಯೋಜನೆ: ಹ್ಯಾಬಿಟ್ ಫೋರಂ ಇನ್‌ಹಾಫ್, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ಮಲ್ಲೇಪುರಂ.ಜಿ. ವೆಂಕಟೇಶ ಅವರ ‘ಶ್ರೀಕೃಷ್ಣ ಚರಿತ್ರೆ’ ಕೃತಿ ಬಿಡುಗಡೆ: ಬಿಡುಗಡೆ: ಯದುಗಿರಿ ಯತಿರಾಜ ಜೀಯರ್ ಸ್ವಾಮೀಜಿ, ಆಯೋಜನೆ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸ್ಥಳ: ಸೀತಾ ಕಲ್ಯಾಣ ಭವನ, ಯದುಗಿರಿ ಯತಿರಾಜ ಮಠ, ಮಲ್ಲೇಶ್ವರ, ಸಂಜೆ 6.30

ಭಜನೆ–ಪ್ರವಚನ–ಹರಿನಾಮ ಸಂಕೀರ್ತನೆ: ಸಂಜೆ 6ಕ್ಕೆ ಭಜನೆ: ಚಂದ್ರಿಕಾ ಭಜನಾ ಮಂಡಳಿ, ಪ್ರವಚನ: ಧನಂಜಯಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಅಭಯ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 7

75ನೇ ಸ್ವಾತಂತ್ರ್ಯ ಮಹೋತ್ಸವ ‘ನೇತಾಜಿ ಅವರ ಕನಸುಗಳು’: ಭಾಷಣಕಾರರು: ಬಿ.ಎನ್. ಶ್ರೀಕೃಷ್ಣ, ಎ. ಮುರಿಗೆಪ್ಪ, ಅಲ್ಲಮಪ್ರಭು ಬೆಟ್ಟದೂರು, ಅಧ್ಯಕ್ಷತೆ: ಸುಧಾ ಕಾಮತ್, ಆಯೋಜನೆ: ನೇತಾಜಿ ಸುಭಾಷ್ ಚಂದ್ರ ಬೋಸ್ 125ನೇ ಜಯಂತಿ ಆಚರಣೆ ಸಮಿತಿ, (ಆನ್‌ಲೈನ್ ಕಾರ್ಯಕ್ರಮ) ಸಂಜೆ 6.30

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ವಿ.ವಿ. ಪುರದಲ್ಲಿರುವ ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್.ಲಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. 2021–22ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ 85ಕ್ಕೂ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳು ಸೆಪ್ಟೆಂಬರ್ 5ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ 080–41314393, 26604393 ಅಥವಾ 9483514393ಗೆ ಸಂಪರ್ಕಿಸಿ.

ನಿಧನವಾರ್ತೆ

ಎಂ.ವಿ.ನಾರಾಯಣ ರಾವ್



ನಾರಾಯಣ ರಾವ್

ಬೆಂಗಳೂರು: ದೆಹಲಿಯಲ್ಲಿನ ’ಕನ್ನಡ ಭಾರತಿ‘ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ, ರಂಗಕರ್ಮಿ ಎಂ.ವಿ. ನಾರಾಯಣ ರಾವ್ (92) ಮಂಗಳವಾರ ನಿಧನರಾದರು.


ನಿವೃತ್ತ ಐಎಎಸ್ ಅಧಿಕಾರಿ ಎಂ.ಎನ್. ವಿದ್ಯಾಶಂಕರ್ ಸೇರಿ ಅವರಿಗೆ ಮೂವರು ಪುತ್ರರಿದ್ದಾರೆ. ರಂಗ ಸಂಯೋಜಕರಾಗಿ ಅಷ್ಟೆ ಅಲ್ಲದೆ ನಟರಾಗಿಯೂ ಅವರು ಹೆಸರಾಗಿದ್ದರು. ಎಂ.ಎಸ್. ಸತ್ಯು ಸಮಕಾಲೀನರಾಗಿದ್ದ ನಾರಾಯಣ ರಾವ್ ಅವರ ದೀರ್ಘಕಾಲದ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಸಂದಿತ್ತು. ’ಕನ್ನಡ ಭಾರತಿ‘ಯ ರಂಗ ಪ್ರಯೋಗಗಳಾದ ’ತುಘಲಕ್‘, ’ಮ್ಯಾಕ್‌ಬೆತ್‘ ನಾಟಕಗಳಲ್ಲಿ ಪ್ರಮುಖ ಪಾತ್ರಧಾರಿಯಾಗಿ ಅವರು ಅಭಿನಯಿಸಿದ್ದರು. ಅಖಿಲ ಭಾರತ ಕರಕುಶಲ ಮಂಡಳಿಯ ಪ್ರಾದೇಶಿಕ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ ನಂತರ ಅವರು ನಿವೃತ್ತರಾಗಿದ್ದರು.

’ಸತ್ಯು ಅವರ ’ಬರ‘ ಚಿತ್ರದಲ್ಲಿ ನಾನು ಅವರ ಜತೆಗೆ ನಟಿಸಿದ್ದೆ. ಸಾತ್ವಿಕ ಸ್ವಭಾವದ ಸಜ್ಜನ ವ್ಯಕ್ತಿ ನಾರಾಯಣ ರಾವ್. ಒಬ್ಬರಾದ ಮೇಲೆ ಒಬ್ಬರಂತೆ ಹೋಗುತ್ತಿದ್ದಾರೆ‘ ಎಂದು ನಟ ಅನಂತನಾಗ್ ಭಾವುಕರಾಗಿ ಸಂತಾಪ ಸೂಚಿಸಿದ್ದಾರೆ. ಚಾಮರಾಜಪೇಟೆಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಆಡಿಯೊ ಸಂಭಾಷಣೆ ಒಪ್ಪಿಕೊಂಡ ಮಾಧುಸ್ವಾಮಿ • ಸಿ.ಎಂ ಕೇಳಿದರೆ ರಾಜೀನಾಮೆ ಕೊಡಲು ಸಿದ್ಧ– ಸಚಿವ

‘ಮ್ಯಾನೇಜ್ ಮಾಡ್ತಿದ್ದೀವಿ ಎಂದು ಹೇಳಿರಬಹುದು’

ಪ್ರಜಾವಾಣಿ ವಾರ್ತೆ



ಜೆ.ಸಿ. ಮಾಧುಸ್ವಾಮಿ

ತುಮಕೂರು: ‘ಸರ್ಕಾರ ನಡೀತಾ ಇಲ್ಲ, ಮ್ಯಾನೇಜ್ ಮಾಡ್ತಾ ಇದ್ದೀವಿ ಅಂಥ ನಾನು ಹೇಳಿರಬಹುದು. ಯಾರ ಜತೆ ಮಾತನಾಡಿದ್ದೇನೆ, ಯಾವಾಗ ಮಾತನಾಡಿದ್ದೇನೆ ಎಂಬುದು ನನಗೆ ಗೊತ್ತಿಲ್ಲ’ ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಸ್ಪಷ್ಟಪಡಿಸಿದ್ದಾರೆ.

‘ಸರ್ಕಾರ ನಡೀತಾ ಇಲ್ಲ, ಇಲ್ಲಿ, ಮ್ಯಾನೇಜ್ ಮಾಡ್ತಾ ಇದ್ದೀವಿ ಅಷ್ಟೇ. ತಳ್ಳಿದರೆ ಸಾಕಪ್ಪ, ಎಂಟು ತಿಂಗಳಷ್ಟೆ ಅಂತ ತಳ್ತಾ ಇದೀವಿ ಕಣಪ್ಪ’ ಎಂದು ಚನ್ನಪಟ್ಟಣದ ವ್ಯಕ್ತಿಯೊಬ್ಬರ ಜತೆ ಮಾತನಾಡುವ ಸಮಯದಲ್ಲಿ ಹೇಳಿರುವ ಆಡಿಯೊ ಕೆಲವು ದಿನಗಳ ಹಿಂದೆ ವೈರಲ್ ಆಗಿತ್ತು. ಈ ಬಗ್ಗೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜೆ.ಸಿ.ಪುರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಎಲ್ಲಾ ಅಕ್ರಮ, ಯಾರೂ ಕೆಲಸ ಮಾಡುತ್ತಿಲ್ಲ ಅಂತ ಹೇಳಿಲ್ಲ. ಡಿಸಿಸಿ ಬ್ಯಾಂಕ್‌ನಲ್ಲಿ ಹೆಚ್ಚುವರಿಯಾಗಿ ಬಡ್ಡಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದ್ದು ನಿಜ. ಕರೆ ಮಾಡಿದ ವ್ಯಕ್ತಿ ಜತೆ ಮುಂದಕ್ಕೆ ಮಾತನಾಡುವ ಸಮಯದಲ್ಲಿ ಏನೋ ಹೇಳಿರಬಹುದು. ನೀವು ಸರ್ಕಾರ ನಡೆಸ್ತಿಲ್ಲ ಅಂಥ ಅವರು ಕೇಳಿರಬಹುದು. ಆಗ ನಾನು ಆ ರೀತಿ ಹೇಳಿರಬಹುದು’ ಎಂದು ಸಮಜಾಯಿಷಿ ನೀಡಿದರು.

‘ಸರ್ಕಾರದಲ್ಲಿ ಇದ್ದುಕೊಂಡು ಈ ರೀತಿ ಹೇಳಲು ಆಗುತ್ತದೆಯೆ? ಮೂರನೇ ವ್ಯಕ್ತಿ ಜತೆ ಸರ್ಕಾರ ನಡಿತಿಲ್ಲ ಎಂದು ಹೇಳುವಂತಹ ಪರಿಸ್ಥಿತಿ ಇಲ್ಲ. ಯಾವಾಗ ಮಾತನಾಡಿದ್ದು ನೆನಪಿಲ್ಲ. ಆದರೆ ಈಗ ಏಕೆ ಆಡಿಯೊ ವೈರಲ್ ಆಗಿದೆ ಎಂಬುದು ಗೊತ್ತಿಲ್ಲ’ ಎಂದು ತಿಳಿಸಿದರು.

ಮಾಧುಸ್ವಾಮಿ ಹೇಳಿಕೆಗೆ ಅಪಾರ್ಥಬೇಡ: ಬೊಮ್ಮಾಯಿ

ಬೆಂಗಳೂರು: ‘ಸರ್ಕಾರ ನಡೀತಾ ಇಲ್ಲ, ಮ್ಯಾನೇಜ್ ಮಾಡ್ತಾ ಇದ್ದೀವಷ್ಟೆ’ ಎಂಬ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಆ ಹೇಳಿಕೆ ಬಗ್ಗೆ ಅಪಾರ್ಥ ಕಲ್ಪಿಸುವ ಅಗತ್ಯವಿಲ್ಲ’ ಎಂದು ಹೇಳಿದ್ದಾರೆ.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಸಚಿವರು ಬೇರೆ ಯಾವುದೋ ಸಂದರ್ಭದಲ್ಲಿ ಮಾತನಾಡಿದ್ದಾರೆ. ಈ ಬಗ್ಗೆ ಅವರ ಬಳಿ ಈ ಬಗ್ಗೆ ನಾನು ಮಾತನಾಡಿದ್ದೇನೆ. ಆದ್ದರಿಂದ ತಪ್ಪು ಅರ್ಥ ಕಲ್ಪಿಸಬೇಕಾಗಿಲ್ಲ. ಮೂರು ತಿಂಗಳ ಹಿಂದೆ ಸಹಕಾರ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ್ದು. ಸರ್ಕಾರಕ್ಕೆ ಯಾವುದೇ ತೊಂದರೆ ಇಲ್ಲ. ಸರ್ಕಾರದಲ್ಲಿ ಎಲ್ಲವೂ ಸರಿ ಇದೆ’ ಎಂದು ಬೊಮ್ಮಾಯಿ ಹೇಳಿದರು.

ಮಾಧುಸ್ವಾಮಿ ಹೇಳಿಕೆ ಬಗ್ಗೆ ಸಂಪುಟದ ಸದಸ್ಯರಾದ ಎಸ್.ಟಿ.ಸೋಮಶೇಖರ್ ಮತ್ತು ಮುನಿರತ್ನ ಅವರು ಆಕ್ಷೇಪಿಸಿದ್ದರು. ಮುನಿರತ್ನ ಅವರು ರಾಜೀನಾಮೆಗೂ ಒತ್ತಾಯಿಸಿದ್ದರು.

‘ಮಾಧುಸ್ವಾಮಿ ಹೇಳಿದ್ದು ತಪ್ಪು’

ಸಚಿವ ಮಾಧುಸ್ವಾಮಿ ಆ ರೀತಿ ಹೇಳಿರುವುದು ತಪ್ಪು. ಅವರು ಕಾನೂನನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಯಾವ ಅರ್ಥದಲ್ಲಿ ಆ ಮಾತು ಹೇಳಿದ್ದಾರೋ ಗೊತ್ತಿಲ್ಲ ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಹೇಳಿದರು.

‘ಈ ವಿಚಾರವಾಗಿ ನಾನು ಅವರ ಜತೆ ಖಾಸಗಿಯಾಗಿ ಮಾತನಾಡುತ್ತೇನೆ’ ಎಂದೂ ಅವರು ತಿಳಿಸಿದರು.

‘ಡಿಸಿಸಿ ಬ್ಯಾಂಕ್ ತನಿಖೆಗೆ ಸೂಚನೆ’

ಬೆಂಗಳೂರು: ‘ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಡಿಸಿಸಿ ಬ್ಯಾಂಕ್‌ಗಳ ಕುರಿತು ತನಿಖೆ ನಡೆಸುವಂತೆ ಸಹಾಯಕ ರಿಜಿಸ್ಟ್ರಾರ್‌ಗೆ ಸೂಚಿಸಲಾಗಿದೆ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

‘ಈ ಬ್ಯಾಂಕ್‌ಗಳಲ್ಲಿ ಅಕ್ರಮಗಳು ನಡೆದಿರುವುದು ಸಾಬೀತಾದರೆ ಕ್ರಮ ಕೈಗೊಳ್ಳುತ್ತೇವೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಸರ್ಕಾರವನ್ನು ಯಾವ ರೀತಿ ಮ್ಯಾನೇಜ್ ಮಾಡಲಾಗುತ್ತಿದೆ ಎನ್ನುವ ಹೇಳಿಕೆ ಕುರಿತು ಮಾಧುಸ್ವಾಮಿ ಅವರನ್ನೇ ಕೇಳಬೇಕು. ಆಗ ನನಗೂ ಅರ್ಥವಾಗುತ್ತದೆ. ಯಾವ ಉದ್ದೇಶದಿಂದ ಅವರು ಈ ರೀತಿ ಹೇಳಿಕೆ ನೀಡಿದ್ದಾರೆ ಎನ್ನುವುದು ಗೊತ್ತಿಲ್ಲ’ ಎಂದರು.

‘ಬೊಮ್ಮಾಯಿ ಸರ್ಕಾರ ಕಳೆದ ಒಂದು ವರ್ಷದಲ್ಲಿ ಯಾವುದೇ ರೀತಿಯಲ್ಲಿ ಮ್ಯಾನೇಜ್ ಮಾಡುತ್ತಿರುವುದನ್ನು ನಾನು ನೋಡಿಲ್ಲ. ಅಂತಹ ಒಂದು ಪ್ರಕರಣವೂ ಇಲ್ಲ. ಕಾನೂನು ಸಚಿವರಾಗಿರುವ ಮಾಧುಸ್ವಾಮಿ ಅವರು ಯಾವ ಸನ್ನಿವೇಶ ಮತ್ತು ಸಂದರ್ಭದಲ್ಲಿ ಹೇಳಿದರು ಎನ್ನುವುದನ್ನು ಅವರನ್ನೇ ಕೇಳಿದರೆ ಗೊತ್ತಾಗುತ್ತದೆ’ ಎಂದರು.

ರಾಜೀನಾಮೆಗೆ ಸಿದ್ಧ: ‘ನಾನು ನನ್ನ ಸಹೋದ್ಯೋಗಿಗಳು ಕೇಳುತ್ತಾರೆ ಎಂದು ರಾಜೀನಾಮೆ ಕೊಡಬೇಕಾಗಿಲ್ಲ. ಮುಖ್ಯಮಂತ್ರಿ ಕೇಳಿದರೆ ರಾಜೀನಾಮೆ ಕೊಡಲು ಸಿದ್ಧನಿದ್ದೇನೆ. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆ ಮಾತನಾಡಿದ್ದು, ಯಾವ ಸಮಯ, ಸಂದರ್ಭದಲ್ಲಿ ಮಾತನಾಡಿದ್ದೇನೆ ಎಂಬುದನ್ನು ಮನದಟ್ಟು ಮಾಡಿಕೊಟ್ಟಿದ್ದೇನೆ’ ಎಂದರು.

ಸುದ್ದಿ 2 ನಿಮಿಷ

‘ಆಸ್ತಿ ಮುಟ್ಟುಗೋಲು; ಮೌನ ಏಕೆ?’

ಮಂಗಳೂರು: ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣದ ಆರೋಪಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಹೇಳಿದಂತೆ, ಕೋಮು ದ್ವೇಷಕ್ಕೆ ಕೊಲೆಯಾದ ಫಾಝಿಲ್, ಮಸೂದ್ ಇನ್ನಿತರ ಕೊಲೆ ಪ್ರಕರಣಗಳ ಆರೋಪಿಗಳ ಆಸ್ತಿಯನ್ನೂ ಮುಟ್ಟುಗೋಲು ಹಾಕಿಕೊಳ್ಳುವ ವಿಚಾರದಲ್ಲಿ ಮೌನ ಏಕೆ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್ ಅವರು ಪೊಲೀಸರನ್ನು ಪ್ರಶ್ನಿಸಿದ್ದಾರೆ.

ಈ ಸಂಬಂಧ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ಅವರಿಗೆ ಪತ್ರ ಬರೆದಿರುವ ಖಾದರ್, ‘ಇದು ನಾಗರಿಕ ಸಮಾಜದ ಪ್ರತಿಯೊಬ್ಬರ ಪ್ರಶ್ನೆಯಾಗಿದೆ. ಈ ಅನುಮಾನ ಬಗೆಹರಿಸಿ, ಪೊಲೀಸ್ ಇಲಾಖೆಯ ಮೇಲೆ ವಿಶ್ವಾಸ ಬರುವಂಥ ಉತ್ತರವನ್ನು ನಿಮ್ಮಿಂದ ನಿರೀಕ್ಷಿಸಿದ್ದೇನೆ’ ಎಂದಿದ್ದಾರೆ.

‘ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಸರಣಿ ಕೊಲೆಗಳ ಆರೋಪಿಗಳನ್ನು ಬಂಧಿಸಲು, ಅವರನ್ನು ಕಾನೂನು ಕ್ರಮಕ್ಕೆ ಒಳಪಡಿಸಲು ಮತ್ತು ಕೊಲೆಗಳ ಸರಣಿ ಮುಂದುವರಿಯದಂತೆ ತಡೆಯಲು ಪೊಲೀಸ್ ಇಲಾಖೆ ನಡೆಸುತ್ತಿರುವ ಪ್ರಯತ್ನ ಶ್ಲಾಘನೀಯ. ಕೊಲೆ, ಸಮಾಜದಲ್ಲಿ ಭಯವನ್ನು ಹುಟ್ಟಿಸುವವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಎಲ್ಲರ ಬೆಂಬಲ ಇದೆ. ಪ್ರವೀಣ್ ಪ್ರಕರಣಕ್ಕೆ ಸಂಬಂಧಿಸಿ ಕೈಗೊಂಡ ದಿಟ್ಟ ಕ್ರಮವನ್ನು ಫಾಝಿಲ್, ಮಸೂದ್ ಪ್ರಕರಣಕ್ಕೂ ಅನ್ವಯಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ಜಗ್ಗೇಶ್ ನಿರ್ಮಾಣದ ‘ವಂದೇ ಮಾತರಂ’ಗೆ ಮೋದಿ ಶ್ಲಾಘನೆ



ನಮ್ಮ ಕನ್ನಡದ ಮನಗಳ ಕಾರ್ಯ ಹರಸಿದ ಪ್ರಧಾನಿಗಳಿಗೆ ಧನ್ಯವಾದ. ನಮ್ಮ ಕಾರ್ಯವನ್ನು ಗುರುತಿಸಿರುವುದು ಉತ್ಸಾಹವನ್ನು ಇಮ್ಮಡಿಗೊಳಿಸಿದೆ.
ಜಗ್ಗೇಶ್, ನಟ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ನಟ, ರಾಜ್ಯಸಭಾ ಸದಸ್ಯ ಜಗ್ಗೇಶ್ ಅವರು ನಿರ್ಮಿಸಿರುವ ‘ವಂದೇ ಮಾತರಂ’ ವಿಡಿಯೊವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶ್ಲಾಘಿಸಿದ್ದಾರೆ.

ಈ ವಿಡಿಯೊವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಆ.14ರಂದು ಹಂಚಿಕೊಂಡಿದ್ದರು. ಈ ಟ್ವೀಟ್‌ಗೆ ‘ವಿವಿಧ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆಗೈದ ಕರ್ನಾಟಕದ ಅಪ್ರತಿಮ ಸಾಧಕರ ಅತ್ಯುತ್ತಮ ಪ್ರಯತ್ನ’ ಎಂದು ಕನ್ನಡದಲ್ಲಿಯೇ ಶೀರ್ಷಿಕೆ ನೀಡಿ ಮೋದಿ ಅವರು ರಿಟ್ವೀಟ್ ಮಾಡಿದ್ದಾರೆ.

ಈ ವಿಡಿಯೊವನ್ನು ಸಂತೋಷ್ ಆನಂದರಾಮ್ ನಿರ್ದೇಶಿಸಿದ್ದು, ಪ್ರವೀಣ್ ಡಿ. ರಾವ್ ಸಂಗೀತ ನೀಡಿದ್ದು, ವಿಜಯ್ ಪ್ರಕಾಶ್ ಧ್ವನಿಯಾಗಿದ್ದಾರೆ. ಶ್ರೀಶ ಕುದವಳ್ಳಿಅವರ ಛಾಯಾಗ್ರಹಣವಿದೆ. ನಟರಾದ ಸುದೀಪ್, ಶಿವರಾಜಕುಮಾರ್, ರವಿಚಂದ್ರನ್, ಜಗ್ಗೇಶ್, ರಮೇಶ್ ಅರವಿಂದ್, ಅನಂತನಾಗ್, ಅರ್ಜುನ್ ಸರ್ಜಾ, ಗಣೇಶ್, ಶ್ರೀಮುರಳಿ, ಧನಂಜಯ, ರಿಷಬ್ ಶೆಟ್ಟಿ, ಧ್ರುವ ಸರ್ಜಾ, ಸಾಹಿತಿ ಎಸ್.ಎಲ್. ಭೈರಪ್ಪ, ಸಾಲುಮರದ ತಿಮ್ಮಕ್ಕ, ಜೋಗತಿ ಮಂಜಮ್ಮ ಹಾಗೂ ಕ್ರಿಕೆಟ್ ಆಟಗಾರ ವೆಂಕಟೇಶ್ ಪ್ರಸಾದ್ ಈ ಹಾಡಿನಲ್ಲಿದ್ದಾರೆ.



ಕಳ್‌ಬಾಡ್ಯಾನ ಆರ್ಭಟ... ಮೊಹರಂ ಆಚರಣೆ ವೇಳೆ ಮಂಗಳವಾರ ಕೊಪ್ಪಳದ ಗಡಿಯಾರ ಕಂಬದ ಬಳಿ ಕಳ್‌ಬಾಡ್ಯಾನ ವೇಷಧಾರಿಗೆ ಜನರು ಹೆಗಲ ಮೇಲೆ ಕೂರಿಸಿಕೊಂಡು ಮೆರವಣಿಗೆ ಮಾಡಿದರು ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಸಿದ್ದರಾಮಯ್ಯ ವಿರೋಧಿಯಲ್ಲ: ಶ್ರೀರಾಮುಲು

ಬಳ್ಳಾರಿ: ‘ರಾಮುಲು ಕುರುಬ ಸಮುದಾಯದ ವಿರುದ್ಧ ಅಥವಾ ಸಿದ್ದರಾಮಯ್ಯನವರ ವಿರೋಧಿ ಅಂತ ಯಾರೂ ತಿಳಿದುಕೊಳ್ಳಬೇಡಿ. ಕಾಂಗ್ರೆಸ್‌ನಲ್ಲಿ ಅವಕಾಶ ಸಿಕ್ಕರೆ ಅವರು ಮತ್ತೊಮ್ಮೆ ಮುಖ್ಯಮಂತ್ರಿ ಆಗಬೇಕೆಂದು ಆಸೆ ಪಡುವ ವ್ಯಕ್ತಿಗಳಲ್ಲಿ ನಾನೂ ಒಬ್ಬ’ ಎಂದು ಸಾರಿಗೆ ಸಚಿವ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ಶ್ರೀರಾಮುಲು ಹೇಳಿದರು.

ಬಳ್ಳಾರಿ ನಗರದಲ್ಲಿ ಕುರುಬ ಸಮುದಾಯದ ವಿದ್ಯಾರ್ಥಿ ನಿಲಯವನ್ನು ಸೋಮವಾರ ತಡರಾತ್ರಿ ಉದ್ಘಾಟಿಸಿ ಮಾತನಾಡಿದ ಅವರು, ‘ಬೇಕಾದರೆ ಹೋಗಿ, ರಾಮುಲು ಮುಖ್ಯಮಂತ್ರಿ ಆಗಬೇಕಾ? ಅಂತ ಸಿದ್ದರಾಮಯ್ಯ ಅವರನ್ನು ಕೇಳಿ, ಬಿಜೆಪಿಯಲ್ಲಿ ಅವಕಾಶ ಬಂದರೆ ರಾಮುಲು ಸಿ.ಎಂ ಆಗಲಿ ಎಂದು ಸಿದ್ದರಾಮಯಯ್ಯ ಬಯಸುತ್ತಾರೆ’ ಎಂದರು.

‘ಹಿಂದುಳಿದವರ ವಿಚಾರ ಬಂದಾಗ ನಾನು ಮತ್ತು ಸಿದ್ದರಾಮಯ್ಯ ಒಂದೇ. ಹಿಂದುಳಿದ ಜಾತಿಗಳನ್ನು ಒಂದು ಮಾಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ರಾಜಕಾರಣದಲ್ಲಿ ಪರಸ್ಪರರನ್ನು ಎದುರಿಸುತ್ತೇವೆ. ಆದರೆ, ವಾಸ್ತವವೇ ಬೇರೆ’ ಎಂದು ಅವರು ವಿಶ್ಲೇಷಿಸಿದರು.

‘ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ರಾಮುಲು ಎರಡು ಕಡೆ ನಿಂತರು, ಸಿದ್ದರಾಮಯ್ಯ ಎರಡು ಕಡೆ ನಿಂತರು. ರಾಮುಲು ಒಂದು ಕಡೆ ಸೋತರು, ಸಿದ್ದರಾಮಯ್ಯ ಒಂದು ಕಡೆ ಸೋತರು. ಅವರು ಗೆದ್ದಿದ್ದು ಹೇಗೆ, ನಾನು ಗೆದ್ದಿದ್ದು ಹೇಗೆ ಒಂದು ಸಲ ಯೋಚನೆ ಮಾಡಿ. ಸಂದರ್ಭ ಬಂದಾಗ ನಾನೇ ಹೇಳುತ್ತೇನೆ’ ಎಂದು ಶ್ರೀರಾಮುಲು ವಿವರಿಸಿದರು.

‘ಎಲ್ಲರ ಮುಂದೆಯೂ ಹೀಗೇ ಹೇಳುತ್ತೇನೆ. ನನಗೆ ಯಾರ ಭಯವೂ ಇಲ್ಲ. ನಾನು ಯಾರ ಗುಲಾಮನೂ ಅಲ್ಲ. ನಮ್ಮ ದೋಸ್ತಿ ಹಂಗಿದೆ. ಒಳಗೊಳಗೆ ಏನೋ ಮಾಡುತ್ತೇವೆ. ಇಬ್ಬರೂ ರಾಜಕಾರಣದಲ್ಲಿ ಇರಬೇಕಲ್ಲ. ಹೇಗೋ ಇಬ್ಬರೂ ವಿಧಾನಸೌಧ ಪ್ರವೇಶ ಮಾಡುತ್ತೇವೆ’ ಎಂದರು.

‘ಇಂಥ ದೊಡ್ಡ ಜಾತಿ ವ್ಯವಸ್ಥೆಯಲ್ಲಿ ಇವೆಲ್ಲ ನಾವು ಮಾಡಲೇಬೇಕು. ಇವು ರಾಜಕಾರಣದ ತಂತ್ರಗಳು. ನೀವೆಲ್ಲ ಹುಡುಗರು, ನಿಮಗೆ ಇವೆಲ್ಲ ಅರ್ಥ ಆಗೊಲ್ಲ. ಹಿಂದುಳಿದ ಸಮುದಾಯಗಳ ಪರಿಸ್ಥಿತಿ ನನಗೆ ತುಂಬಾ ಚೆನ್ನಾಗಿ ಗೊತ್ತಿದೆ. ನಮ್ಮ ಸಮಾಜಗಳು ದೊಡ್ಡ ಮಟ್ಟದಲ್ಲಿ ಬೆಳೆಯಬೇಕು. ಅವಕಾಶ ದೊರೆತರೆ ನಾನು, ಸಿದ್ದರಾಮಯ್ಯ ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುತ್ತೇವೆ’ ಎಂದರು.

‘ಮುಸ್ಲಿಂ ಗೂಂಡಾಗಳಿಗೆ ಕಾಂಗ್ರೆಸ್ ಬೆಂಬಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲವು ಹಿರಿಯ ಮುಸ್ಲಿಂ ನಾಯಕರು ಸಮಾಜದಲ್ಲಿ ಶಾಂತಿ ಕಾಪಾಡುವ ಕೆಲಸವನ್ನು ಮೊದಲಿನಿಂದಲೂ ಮಾಡುತ್ತಿದ್ದಾರೆ. ಗೂಂಡಾಗಿರಿ ಮಾಡುವ ಯುವಕರನ್ನು ಕರೆಸಿ ಇವರು ಬುದ್ಧಿವಾದ ಹೇಳಬೇಕು. ಇಲ್ಲವಾದರೆ, ಅಂತಹ ಗೂಂಡಾಗಳನ್ನು ಸರ್ಕಾರ ಮತ್ತು ಹಿಂದೂ ಸಮಾಜವೇ ನೋಡಿಕೊಳ್ಳುತ್ತದೆ’ ಎಂದು ಬಿಜೆಪಿ ಶಾಸಕ ಕೆ.ಎಸ್.ಈಶ್ವರಪ್ಪ ಎಚ್ಚರಿಕೆ ನೀಡಿದ್ದಾರೆ.

‘ಮುಸ್ಲಿಂ ಗೂಂಡಾಗಳಿಗೆ ಕಾಂಗ್ರೆಸ್ ಪಕ್ಷದ ಬೆಂಬಲವಿದೆ. ಹೀಗಾಗಿ ಇಂತಹ ಘಟನೆಗಳನ್ನು ನಡೆದಾಗ ಖಂಡನೆ ಮಾಡದೇ ಮೌನವಾಗಿರುತ್ತಾರೆ. ಶಿವಮೊಗ್ಗದಲ್ಲಿ ಸಾವರ್ಕರ್ ಬ್ಯಾನರ್ ಹರಿದು ಹಾಕಿದ ವ್ಯಕ್ತಿ ಕಾಂಗ್ರೆಸ್ ಕಾರ್ಪೊರೇಟರೊಬ್ಬರ ಗಂಡ. ಆತ ಎಸ್‌ಡಿಪಿಐ ಕಾರ್ಯಕರ್ತ. ಅಮಾಯಕ ಯುವಕನಿಗೆ ಚೂರಿದ ಇರಿದ ಘಟನೆ ನಡೆದಿದೆ. ಮಾಡೋದು ಮಾಡಿ ಕೊನೆಯಲ್ಲಿ ಬಿಜೆಪಿ ಕೋಮುಗಲಭೆ ಮಾಡುತ್ತದೆ ಎಂದು ಗೂಬೆ ಕೂರಿಸುತ್ತಾರೆ’ ಎಂದು ಕಿಡಿಕಾರಿದರು.

‘ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಶಿವಮೊಗ್ಗದಲ್ಲಿ ನಡೆದ ಘಟನೆಯ ಬಗ್ಗೆ ಚರ್ಚೆ ಮಾಡಿದ್ದೇನೆ. ಪೊಲೀಸರು ಅಲ್ಲಿ ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಆರೋಪಿಗಳನ್ನು ಬಂಧಿಸಿದ್ದಾರೆ. ಅದಕ್ಕಾಗಿ ಮುಖ್ಯಮಂತ್ರಿ ಮತ್ತು ಗೃಹ ಸಚಿವರನ್ನು ಅಭಿನಂದಿಸುತ್ತೇನೆ’ ಎಂದರು.

‘ರಾಜ್ಯದಲ್ಲಿ ಎಸ್‌ಡಿಪಿಐ ನಿಷೇಧ ಮಾಡುವ ಬಗ್ಗೆ ಮುಖ್ಯಮಂತ್ರಿಯವರ ಜತೆ ಚರ್ಚೆ ಮಾಡಿದ್ದೇನೆ. ಅದೂ ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರುವ ವಿಶ್ವಾಸವಿದೆ’ ಎಂದರು. ಶಿವಮೊಗ್ಗದ ಪ್ರಕರಣದಲ್ಲಿ ಆರು ಗೂಂಡಾಗಳು ಪ್ರೇಮ್ ಸಿಂಗ್ ಮೇಲೆ ಹಲ್ಲೆ ಮಾಡಿದ್ದಾರೆ. ಪ್ರೇಮ್ ಸಾವು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದಾರೆ ಎಂದರು.

> ಸಾವರ್ಕರ್ ಬ್ರಿಟಿಷರ ಬೂಟು ನೆಕ್ಕುವ ಕೆಲಸ ಮಾಡಿದ್ದರು ಎಂದು ಪದೇ ಪದೇ ಹೇಳಿ ಒಂದು ಸಮುದಾಯವನ್ನು ಎತ್ತಿಕಟ್ಟುವುದನ್ನು ಸಿದ್ದರಾಮಯ್ಯ ಬಿಡಬೇಕು
> **ಆರಗ ಜ್ಞಾನೇಂದ್ರ,** ಗೃಹ ಸಚಿವ

> ಶಿವಮೊಗ್ಗದಲ್ಲಿ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಚೂರಿ ಇರಿತದ ಪ್ರಕರಣದ ಬಗ್ಗೆ ಕಟ್ಟುನಿಟ್ಟಿನ ತನಿಖೆ ಮಾಡಲು ಆದೇಶ ನೀಡಲಾಗಿದೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಹಲ್ಲೆ: ಪೊಲೀಸ್ ವಶಕ್ಕೆ ಒಬ್ಬ

ಭದ್ರಾವತಿ: ಇಲ್ಲಿನ ಹಳೇನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಂಡವೊಂದು, ಬಜರಂಗದಳದ ಸಾವರ್ಕರ್ ಘಟಕದ ಕಾರ್ಯಕರ್ತ ಸುನಿಲ್ (26) ಎಂಬುವವರ ಮೇಲೆ ಮಂಗಳವಾರ ಹಲ್ಲೆ ನಡೆಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಒಬ್ಬನನ್ನು ವಶಕ್ಕೆ ಪಡೆದಿದ್ದಾರೆ.

ಗಾರೆ ಕೆಲಸಕ್ಕೆ ತೆರಳುತ್ತಿದ್ದ ಸುನಿಲ್ ಅವರನ್ನು ತರೀಕೆರೆ ರಸ್ತೆ ಫ್ಲೈಓವರ್ ಮೇಲೆ ಮೂರರಿಂದ ನಾಲ್ಕು ಮಂದಿಯ ಯುವಕರಿದ್ದ ತಂಡವು ಅಡ್ಡಗಟ್ಟಿದೆ. ಒಬ್ಬಾತ ಸುನಿಲ್ ಮುಖಕ್ಕೆ ತಲೆಯಿಂದ ಗುದ್ದಿದ್ದಾನೆ. ಇನ್ನೊಬ್ಬ ಚಾಕುವಿನಿಂದ ಇರಿಯಲು ಮುಂದಾದಾಗ ಸುನಿಲ್ ಓಡಿಹೋಗಿ ಪಾರಾಗಿದ್ದಾರೆ. ಮೂಗಿನಲ್ಲಿ ರಕ್ತಸ್ರಾವ ಆಗಿದ್ದರಿಂದ ಸುನಿಲ್ ಅವರನ್ನು ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆ ವಿವರ: ಸೋಮವಾರ ರಾತ್ರಿ ಮುಬಾರಕ್ ಎಂಬ ವ್ಯಕ್ತಿ ಮೂರ್ನಾಲ್ಕು ಜನರ ಗುಂಪಿನೊಂದಿಗೆ ಶರವಣ ಎಂಬುವವರ ಮೇಲೆ ಹಲ್ಲೆಗೆ ಮುಂದಾಗಿದ್ದ. ಈ ವೇಳೆ ತಡೆಯಲು ಸುನಿಲ್ ಬಂದ ಕಾರಣ ತಂಡ, ಆತನ ಮೇಲೆಯೇ ಆಕ್ರೋಶಗೊಂಡಿತ್ತು ಎನ್ನಲಾಗಿದೆ.

‘ಮುಬಾರಕ್ ಮತ್ತು ಸ್ನೇಹಿತರು ಹಲ್ಲೆ ಮಾಡಿದ್ದು ತನಿಖೆಯಿಂದ ಗೊತ್ತಾಗಿದೆ. ಮುಬಾರಕ್‌ನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಾಳೆ ರಾತ್ರಿವರೆಗೆ ನಿಷೇಧಾಜ್ಞೆ

ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಶಿವಮೊಗ್ಗ, ಭದ್ರಾವತಿ ವ್ಯಾಪ್ತಿಯಲ್ಲಿ ಆಗಸ್ಟ್ 18ರ ರಾತ್ರಿ 10 ಗಂಟೆಯವರೆಗೆ ನಿಷೇಧಾಜ್ಞೆ ವಿಸ್ತರಿಸಲಾಗಿದೆ.

ಈ ಅವಧಿಯಲ್ಲಿ ದ್ವಿಚಕ್ರ ವಾಹನಗಳಲ್ಲಿ 40 ವರ್ಷದೊಳಗಿನವರು (ಮಹಿಳೆಯರು, ಮಕ್ಕಳನ್ನು ಹೊರತುಪಡಿಸಿ) ಹಿಂಬದಿ ಸವಾರರಾಗುವುದನ್ನು ಹಾಗೂ ರಾತ್ರಿ 9ರಿಂದ ಬೆಳಿಗ್ಗೆ 5 ಗಂಟೆಯವರೆಗೆ ದ್ವಿಚಕ್ರ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ.

ಶಿವಮೊಗ್ಗದಲ್ಲಿ ವಾಸ್ತವ್ಯ ಹೂಡಿರುವ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಅಲೋಕ್ ಕುಮಾರ್, ಪೂರ್ವ ವಲಯ ಐಜಿಪಿ ತ್ಯಾಗರಾಜನ್ ನೇತೃತ್ವದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ಸಿಬ್ಬಂದಿಯು ಹಳೆಯ ಶಿವಮೊಗ್ಗದ ಸೂಕ್ಷ್ಮ ಪ್ರದೇಶದಲ್ಲಿ ಮಂಗಳವಾರ ಪಥ ಸಂಚಲನ ನಡೆಸಿದರು.

ಸಾವರ್ಕರ್ ಫ್ಲೆಕ್ಸ್ ಹರಿದ ಕಿಡಿಗೇಡಿಗಳು

ತುಮಕೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ನಗರದಲ್ಲಿ ಅಳವಡಿಸಲಾಗಿದ್ದ ವಿನಾಯಕ ದಾಮೋದರ ಸಾವರ್ಕರ್ ಚಿತ್ರವಿದ್ದ ಫ್ಲೆಕ್ಸ್‌ಗಳನ್ನು ಸೋಮವಾರ ರಾತ್ರಿ ಹರಿದು ಹಾಕಲಾಗಿದೆ.

ನಗರದ ಹೃದಯ ಭಾಗವಾದ ಅಶೋಕ ರಸ್ತೆ, ಬಿ.ಎಚ್. ರಸ್ತೆ ಸೇರಿದಂತೆ ವಿವಿಧೆಡೆ ಶಾಸಕ ಜಿ.ಬಿ.ಜ್ಯೋತಿಗಣೇಶ್ ಅವರು ಸ್ವಾತಂತ್ರ್ಯ ಹೋರಾಟಗಾರರ ಫ್ಲೆಕ್ಸ್ ಹಾಕಿಸಿದ್ದರು. ಅದರಲ್ಲಿ ಸಾವರ್ಕರ್ ಚಿತ್ರವಿರುವ ಫ್ಲೆಕ್ಸ್‌ಗಳನ್ನು ಮಾತ್ರ ಹರಿದು ಹಾಕಲಾಗಿದೆ. ನಗರದಲ್ಲಿ ಮೂರು ದಿನಗಳ ಹಿಂದೆ ಹಾಕಲಾಗಿದ್ದ ಎಲ್ಲ ಫ್ಲೆಕ್ಸ್‌ಗಳನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ಮಂಗಳವಾರ ಬೆಳಿಗ್ಗೆ ತೆರವುಗೊಳಿಸಿದ್ದಾರೆ.

‘ಆರೋಪಿಗಳ ಪತ್ತೆಗೆ ತನಿಖೆ ಕೈಗೊಳ್ಳಲಾಗಿದೆ’ ಎಂದು ಎಸ್‌ಪಿ ರಾಹುಲ್ ಕುಮಾರ್ ಶಹಾಪೂರವಾಡ್ ತಿಳಿಸಿದ್ದಾರೆ.

ಪ್ರತಿಭಟನೆ: ಸಾವರ್ಕರ್ ಚಿತ್ರವಿದ್ದ ಫ್ಲೆಕ್ಸ್‌ಗಳನ್ನು ಹರಿದಿರುವುದನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟಿಸಿದರು. ಕಿಡಿಗೇಡಿಗಳಿಗೆ ಕಂಡಲ್ಲಿ ಗುಂಡು ಹೊಡೆಯಬೇಕು ಎಂದು ಬಿಜೆಪಿ ಮುಖಂಡ ಸೊಗಡು ಶಿವಣ್ಣ ಆಗ್ರಹಿಸಿದ್ದಾರೆ.



ಸೋಮವಾರ ರಾತ್ರಿ ವೀರ ಸಾವರ್ಕರ್ ಚಿತ್ರವಿದ್ದ ಫ್ಲೆಕ್ಸ್‌ಗಳನ್ನು ಹರಿದು ಹಾಕಲಾಗಿದೆ

ಶಿವಮೊಗ್ಗ: ಚೂರಿ ಇರಿತ; ನಾಲ್ವರ ಬಂಧನ

ಒಂದನೇ ಪುಟದಿಂದ...

ಈ ವೇಳೆ ವಿನೋಬ ನಗರ ಠಾಣೆ ಪಿಎಸ್‌ಐ ಮಂಜುನಾಥ ಕುರಿ ಅವರ ಮೇಲೆ ಜಬೀವುಲ್ಲಾ ಚಾಕುವಿನಿಂದ ಹಲ್ಲೆ ನಡೆಸಿ ಪರಾರಿಯಾಗಲು ಪ್ರಯತ್ನಿಸಿದ್ದ. ಆಗ ಮಂಜುನಾಥ ಅವರು ಗುಂಡು ಹಾರಿಸಿ ಬಂಧಿಸಿದರು.

ಗಾಯಾಳು ಪಿಎಸ್‌ಐ ಹಾಗೂ ಆರೋಪಿಯನ್ನು ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಸ್ಪಿ ಬಿ.ಎಂ. ಲಕ್ಷ್ಮಿಪ್ರಸಾದ್ ತಿಳಿಸಿದ್ದಾರೆ.

ಪ್ರಕರಣದಲ್ಲಿ ಸೋಮವಾರ ಜೆ.ಸಿ. ನಗರ ನಿವಾಸಿ ನದೀಮ್ ಅಲಿಯಾಸ್ ನೌಶಾದ್ ಅಲಿ (25), ಬುದ್ಧ ನಗರದ ಅಬ್ದುಲ್ ರೆಹಮಾನ್ (25) ಅವರನ್ನು ಬಂಧಿಸಲಾಗಿತ್ತು. ಮಂಗಳವಾರ ಆರ್‌ಎಂಎಲ್ ನಗರದ ತನ್ವೀರ್ ಅಹಮದ್ (22) ಎಂಬುವವರನ್ನೂ ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪೊಲೀಸರು, ಹೆಚ್ಚಿನ ವಿಚಾರಣೆಗೆ ತಮ್ಮ ವಶಕ್ಕೆ ಪಡೆದಿದ್ದಾರೆ.



ಮೊಹಮ್ಮದ್ ಜಬಿ



ಅಬ್ದುಲ್ ರೆಹಮಾನ್



ನೌಶಾದ್ ಅಲಿ



ತನ್ವೀರ್ ಅಹಮದ್

ಸಾಕ್ಷ್ಯಗಳಿದ್ದರೆ ಪಿಎಫ್‌ಐ, ಎಸ್‌ಡಿಪಿಐ ನಿಷೇಧಿಸಿ: ಸಿದ್ದರಾಮಯ್ಯ

ಬೆಂಗಳೂರು: ‘ಪಿಎಫ್‌ಐ, ಎಸ್‌ಡಿಪಿಐ ಹೀಗೆ ಯಾವ ಸಂಘಟನೆಯಾದರೂ ಸಮಾಜದ ಸಾಮರಸ್ಯ ಹಾಳು ಮಾಡುತ್ತಿವೆ, ಗಲಭೆಗಳಿಗೆ ಕಾರಣವಾಗುತ್ತಿವೆ ಎಂಬುದಕ್ಕೆ ಸೂಕ್ತ ಸಾಕ್ಷ್ಯಾಧಾರಗಳಿದ್ದರೆ ಅಂಥ ಸಂಘಟನೆಗಳನ್ನು ಬಿಜೆಪಿ ಸರ್ಕಾರ ನಿಷೇಧಿಸಲಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ರಾಜ್ಯ ಮತ್ತು ಕೇಂದ್ರದಲ್ಲಿ ಎರಡೂ ಕಡೆ ನಿಮ್ಮದೇ ಸರ್ಕಾರ ಇದೆ. ಆದರೂ ಯಾಕೆ ಸುಮ್ಮನಿದ್ದೀರಿ’ ಎಂದು ಬಿಜೆಪಿ ನಾಯಕರನ್ನು ಅವರು ಪ್ರಶ್ನಿಸಿದ್ದಾರೆ.

‘ಕರಾವಳಿಯಲ್ಲಿ ಪ್ರವೀಣ್ ಮನೆಗೆ ಮಾತ್ರ ಹೋಗಿ ಮುಖ್ಯಮಂತ್ರಿ ಪರಿಹಾರ ಕೊಟ್ಟಿದ್ದಾರೆ. ಆದರೆ, ಮಸೂದ್ ಮತ್ತು ಫಾಜಿಲ್ ಕುಟುಂಬವನ್ನು ಭೇಟಿ ಮಾಡಿಲ್ಲ. ಪರಿಹಾರವನ್ನೂ ಘೋಷಿಸಿಲ್ಲ’ ಎಂದು ಅವರು ಕೇಳಿದ್ದಾರೆ.

‘ರಾಷ್ಟ್ರಧ್ವಜದ ಜಾಗದಲ್ಲಿ ಭಗವಾಧ್ವಜ ಹಾರಿಸುತ್ತೇವೆ ಎಂದ ಈಶ್ವರಪ್ಪ ಅವರನ್ನು ಇನ್ನೂ ಪಕ್ಷದಲ್ಲಿ ಇಟ್ಟುಕೊಂಡಿರುವ ಬಿಜೆಪಿಯವರು, ನಮಗೆ ದೇಶಪ್ರೇಮದ ಪಾಠ ಮಾಡುವುದು ಆತ್ಮವಂಚನೆ ಆಗುತ್ತದೆ’ ಎಂದಿದ್ದಾರೆ.

ಪ್ರವೀಣ್ ಹತ್ಯೆ: ತನಿಖೆ ಹೊಣೆ ಇನ್ನು ಎನ್‌ಐಎಗೆ

ಸುಳ್ಯ (ದಕ್ಷಿಣ ಕನ್ನಡ): ಬಿಜೆಪಿ ಯುವ ಮೋರ್ಚಾ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ತನಿಖೆಯನ್ನು ಇನ್ನು ಮುಂದೆ ರಾಷ್ಟ್ರೀಯತನಿಖಾಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ನಡೆಸಲಿದ್ದಾರೆ.

ಎನ್‌ಐಎ ಅಧಿಕಾರಿಗಳು ಪ್ರಕರಣದ ತನಿಖೆಯನ್ನು ಮುಂದುವರಿಸಲಿದ್ದಾರೆ’ ಎಂದು ದಕ್ಷಿಣ ಕನ್ನಡ ಎಸ್ಪಿ ಹೃಷಿಕೇಶ್ ಸೋನಾವಣೆ ತಿಳಿಸಿದರು.

ನಿಧನ ವಾರ್ತೆ

ತಮ್ಮಣ್ಣಪ್ಪ ಬುದ್ನಿ



ಮುಧೋಳ: ತಾಲ್ಲೂಕಿನ ಚಿಂಚಖಂಡಿ ಗ್ರಾಮದ ಗಾಂಧಿವಾದಿ ತಮ್ಮಣ್ಣಪ್ಪ ಪರಪ್ಪ ಬುದ್ನಿ (93) ಮಂಗಳವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತ್ನಿ ಹಾಗೂ ಮೂವರು ಪುತ್ರರು ಇದ್ದಾರೆ.

ವಿನೋಬಾ ಭಾವೆ, ನೀಲಕಂಠಜಿ ಗಣಾಚಾರಿವರ ನಿಕಟ ಒಡನಾಟದಲ್ಲಿದ್ದ ಅವರು, ಖಾದಿ ಕೇಂದ್ರಗಳ ಸ್ಥಾಪನೆಯಲ್ಲಿ, ಸರ್ವೋದಯ ಚಳವಳಿಯಲ್ಲಿ ತೊಡಗಿಕೊಂಡಿದ್ದರು.

ಭೀಮಾ ಪ್ರವಾಹ: ದೇಗುಲ ಜಲಾವೃತ

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಸೊನ್ನ ಭೀಮಾ ಬ್ಯಾರೇಜ್‌ನಿಂದ 1 ಲಕ್ಷ ಕ್ಯುಸೆಕ್ ನೀರನ್ನು ಭೀಮಾ ನದಿಗೆ ಬಿಟ್ಟ ಪರಿಣಾಮ ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ಮಂಗಳವಾರ ಮಣ್ಣೂರಿನ ಹೊಳೆ ಯಲ್ಲಮ್ಮ ದೇವಸ್ಥಾನ ಜಲಾವೃತವಾಗಿದೆ.

‘ಜಲಾವೃತವಾಗಿರುವ ಕಾರಣ ದೇವಸ್ಥಾನದಲ್ಲಿ ಸದ್ಯಕ್ಕೆ ಪೂಜೆ ಮಾಡಲು ಆಗುವುದಿಲ್ಲ. ಪ್ರವಾಹ ಇಳಿಮುಖವಾದ ನಂತರವಷ್ಟೇ ಪೂಜಾ ಕಾರ್ಯ ನಡೆಯಲಿದೆ’ ಎಂದು ದೇವಸ್ಥಾನದ ಅರ್ಚಕರಾದ ಸಚಿನ್ ಪೂಜಾರಿ ಮತ್ತು ದಾನಪ್ಪ ಪೂಜಾರಿ ತಿಳಿಸಿದ್ದಾರೆ.

‘ಮಣ್ಣೂರ ಗ್ರಾಮದ ಬಳಿ ಸೇತುವೆ ತುಂಬಿ ಹರಿಯುತ್ತಿದೆ. ಗ್ರಾಮದ ಸಂಸ್ಕೃತ ಪಾಠಶಾಲೆ ಆವರಣದಲ್ಲಿ ನೀರು ಆವರಿಸಿಕೊಂಡಿದೆ. ನದಿಗೆ ನೀರು ಹೆಚ್ಚು ಬಂದಿರುವುದರಿಂದ ಹಿನ್ನೀರಿನಿಂದ ಬಂಕಲಗಿ ಗ್ರಾಮದ ಬೋರಿ ಹಳ್ಳಗಳು ತುಂಬಿ ಹರಿಯುತ್ತಿವೆ. ಹಿನ್ನೀರಿನಿಂದ ಮುಂಗಾರು ಹಂಗಾಮಿನ ಬೆಳೆ ಹಾಳಾಗುತ್ತಿವೆ’ ಎಂದು ರೈತರು ಹೇಳಿದ್ದಾರೆ.

ಇಂದು ರಾಜ್ಯದ ಕೆಲವೆಡೆ ಮಳೆ: (ಬೆಂಗಳೂರು ವರದಿ): ಕರಾವಳಿಯ ಬಹುತೇಕ ಕಡೆ ಹಾಗೂ ಉತ್ತರ ಒಳನಾಡಿನ ಕೆಲವು ಕಡೆ ಬುಧವಾರ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಕೆಲವು ಕಡೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಳ್ಳಾರಿ,ಬೆಂಗಳೂರುಗ್ರಾಮಾಂತರ, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಯ ಗುಡುಗುಸಹಿತಮಳೆಯಾಗಲಿದೆ.ಆದರೆ, ಭಾರಿ ಮಳೆಯಾಗುವ ಸಾಧ್ಯತೆಯಿಲ್ಲ ಎಂದು ಇಲಾಖೆ ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	122.70	21,347	4,256
ಹಾರಂಗಿ	2,859	2,855.79	2,658	1,400
ಕಬಿನಿ	2284	2,284	6,800	4,000
ಹೇಮಾವತಿ	2,922	2,921.60	12,883	15,620
ಲಿಂಗನಮಕ್ಕಿ	1,819	1,812.60	13,909	4,427.41
ಸೂಪಾ (ಮೀ)	564	548	10,008	838
ಮಾಣಿ	595	587.90	1379	-
ತುಂಗಭದ್ರಾ	1,633	1,632.61	84,608	78,667
ಮಲಪ್ರಭಾ	2079.5	2,076.80	7,222	5,694
ಘಟಪ್ರಭಾ	2175	2,173.31	14,611	13,186
ಭದ್ರಾ	186	183.4	10,964	10,374
ಆಲಮಟ್ಟಿ (ಮೀ)	519.6	518.42	14,419	1,50,000
ನಾರಾಯಣಪುರ (ಮೀ)	492.25	491.45	1,25,000	1,8,450

*ನೆಲಮಟ್ಟದಿಂದ

ಕುದಾಪುರದಲ್ಲಿನ ಬಿ.ಎ.ಆರ್.ಸಿ ಶಾಖೆಯ ಸಾಧನೆ

ಮೊಬೈಲ್ ಆ್ಯಪ್ ಆಧಾರಿತ ಇಸಿಜಿ ಸಾಧನ

ಪ್ರಜಾವಾಣಿ ವಾರ್ತೆ





ಕುದಾಪುರದ ಬಾಬಾ ಅಣು ಸಂಶೋಧನಾ ಕೇಂದ್ರವು (ಬಿ.ಎ.ಆರ್.ಸಿ) ಸಿದ್ಧಪಡಿಸಿರುವ ಚಿಕ್ಕಗಾತ್ರದ ಇಸಿಜಿ ಉಪಕರಣ ಕುರಿತು ನಾಯಕನಹಟ್ಟಿ ಪಟ್ಟಣದ ಸಮುದಾಯ ಆಸ್ಪತ್ರೆಯಲ್ಲಿ ಮಂಗಳವಾರ ಅಣು ಸಂಶೋಧನಾ ಕೇಂದ್ರದ ಸಿಬ್ಬಂದಿ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು (ಎಡಚಿತ್ರ) ಮೊಬೈಲ್ ಆ್ಯಪ್ ಆಧಾರಿತ ಇಸಿಜಿ ಉಪಕರಣ

ನಾಯಕನಹಟ್ಟಿ: ಇಲ್ಲಿನ ಕುದಾಪುರದಲ್ಲಿರುವ ಬಾಬಾ ಅಣು ಸಂಶೋಧನಾ ಕೇಂದ್ರದ (ಬಿ.ಎ.ಆರ್.ಸಿ) ಶಾಖೆಯು, ಹೃದ್ರೋಗಿಗಳಿಗೆ ಅನುಕೂಲಕರವಾದ ಮೊಬೈಲ್ ಆ್ಯಪ್ ಆಧಾರಿತ ಅಂಗೈ ಅಗಲದ ಇಸಿಜಿ ಉಪಕರಣವನ್ನು ಆವಿಷ್ಕರಿಸಿದೆ.

ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಪ್ರಾತ್ಯಕ್ಷಿಕೆ ನೀಡಿದ ಬಳಿಕ ಸಂಸ್ಥೆಯ ಹಿರಿಯ ಯೋಜನಾ ವ್ಯವಸ್ಥಾಪಕ ಡಾ.ಧವಮಣಿ ಅವರು ಕಾರ್ಯವಿಧಾನದ ಬಗ್ಗೆ ಮಾಹಿತಿ ನೀಡಿದರು.

‘ಇದು ಸುಲಭವಾಗಿ ಕಾರ್ಯನಿರ್ವಹಿಸುವ ಪುಟ್ಟ ಸಾಧನವಾಗಿದೆ. ಮೊಬೈಲ್ ಅಥವಾ ಕಂಪ್ಯೂಟರ್ ಮೂಲಕ ಇದನ್ನು ನೇರವಾಗಿ ಸಂಪರ್ಕಿಸಬಹುದು. ಇದಕ್ಕೆ ನೆಟ್‌ವರ್ಕ್, ಜಿಪಿಎಸ್, ಬ್ಲೂಟೂತ್ ಅಗತ್ಯವಿದೆ. ರೋಗಿಯ ದೇಹವನ್ನು ಸಂಪರ್ಕಿಸುವ ವೈರ್ ಕಾರ್ಡ್‌ಗಳನ್ನು ನೇರವಾಗಿ ಮೊಬೈಲ್‌ಗೆ ಸಂಪರ್ಕಿಸಲಾಗುತ್ತದೆ. ನಂತರ ಸಾಧನವು ರೋಗಿಯ ಹೃದಯ ಬಡಿತದ ಸ್ಪಷ್ಟ ಚಿತ್ರಣವನ್ನು ದಾಖಲಿಸುತ್ತದೆ. ವರದಿ ಹಾಗೂ ಇಸಿಜಿಯ ಭಾವಚಿತ್ರವನ್ನು ಸಾಮಾನ್ಯ ಯಂತ್ರದ ಮೂಲಕ ಮುದ್ರಿಸಿ ಪಡೆಯಬಹುದು. ಜೊತೆಗೆ ಪಿಡಿಎಫ್ ಮೂಲಕವೂ ರವಾನಿಸಬಹುದಾಗಿದೆ. ಇದರಿಂದ ಪರಿಣತ ವೈದ್ಯರಿಂದ ಚಿಕಿತ್ಸೆಯ ಬಗ್ಗೆ ಸಮಾಲೋಚನೆ ನಡೆಸಬಹುದಾಗಿದೆ’ ಎಂದು ಅವರು ಹೇಳಿದರು.

‘ಗ್ರಾಮೀಣ ಪ್ರದೇಶಗಳಲ್ಲಿ ಇಸಿಜಿ ಸಾಧನ ಮತ್ತು ತಂತ್ರಜ್ಞರ ಕೊರತೆ ಇದೆ. ಈ ಸಾಧನದಿಂದ ಸಾಮಾನ್ಯ ವೈದ್ಯರಲ್ಲದೆ, ಶುಷ್ರೂಷಕಿಯರೂ ಇದನ್ನು ಬಳಸಬಹುದು. ಪ್ರಸ್ತುತ ಈ ಇಸಿಜಿ ಉಪಕರಣವನ್ನು ನೇರಲಗುಂಟೆ, ನಾಯಕನಹಟ್ಟಿ, ದೊಡ್ಡಉಳ್ಳಾರ್ತಿ ಸೇರಿ ಹಲವು ಕೇಂದ್ರಗಳಿಗೆ ಉಚಿತವಾಗಿ ನೀಡಲಾಗುತ್ತಿದೆ’ ಎಂದು ಕೇಂದ್ರದ ಆಡಳಿತ ವಿಭಾಗದ ನರೇಶ್ ಬಂಡೇಕರ್ ತಿಳಿಸಿದರು.

ಯೋಜನಾ ಉಪ ವ್ಯವಸ್ಥಾಪಕ ಎ.ಕೆ.ತಿವಾರಿ, ಲಕ್ಷ್ಮೀನಾರಾಯಣ, ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ವಿಕಾಸ್, ಡಾ.ಮಧುರ, ಡಾ.ಸಣ್ಣಓಬಣ್ಣ, ಸಿಬ್ಬಂದಿ ಅಫ್ರೋಜ್, ಧನಲಕ್ಷ್ಮಿ ಇದ್ದರು.

> ಗ್ರಾಮೀಣ ಪ್ರದೇಶಗಳಿಗೆ ಕಡಿಮೆ ಹಣ ಹಾಗೂ ಗುಣಮಟ್ಟದ ವೈದ್ಯಕೀಯ ಉಪಕರಣ ನೀಡಬೇಕು ಎಂಬ ಉದ್ದೇಶದಿಂದ ಈ ಉಪಕರಣವನ್ನು ಆವಿಷ್ಕರಿಸಲಾಗಿದೆ.
> **ಡಾ.ಧವಮಣಿ,** ಹಿರಿಯ ಯೋಜನಾ ವ್ಯವಸ್ಥಾಪಕ, ಬಿ.ಎ.ಆರ್.ಸಿ

ಅಕ್ಷರ ದಾಸೋಹ ● 6 ಸಾವಿರಕ್ಕೂ ಹೆಚ್ಚು ನೌಕರರ ವಜಾಕ್ಕೆ ಆಕ್ರೋಶ ● ₹1 ಲಕ್ಷ ಇಡುಗಂಟಿಗೆ ಆಗ್ರಹ

ಅನಿರ್ದಿಷ್ಟಾವಧಿ ಪ್ರತಿಭಟನೆ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಸಿಯೂಟ ತಯಾರಿಸುವ 6 ಸಾವಿರಕ್ಕೂ ಹೆಚ್ಚು ಮಹಿಳೆಯರನ್ನು 60 ವರ್ಷ ವಯೋಮಿತಿ ನೆಪವೊಡ್ಡಿ ಏಕಾಏಕಿ ಕೆಲಸದಿಂದ ಬಿಡುಗಡೆ ಮಾಡಲಾಗಿದ್ದು, ಇವರಿಗೆ ನಿವೃತ್ತಿ ವೇತನ ಹಾಗೂ ₹ 1 ಲಕ್ಷ ಇಡುಗಂಟು ನೀಡಬೇಕು' ಎಂದು ಒತ್ತಾಯಿಸಿ ಮಹಿಳೆಯರು ನಗರದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಮಂಗಳವಾರ ನಗರಕ್ಕೆ ಬಂದ ಮಹಿಳೆಯರು, ಸಿಐಟಿಯು ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಕುಳಿತಿದ್ದಾರೆ. ಅಹೋರಾತ್ರಿಯೂ ಪ್ರತಿಭಟನೆ ಮುಂದುವರಿಯಿತು.

'ಮಹಿಳೆಯರನ್ನು ಕೆಲಸದಿಂದ ಏಕಾಏಕಿ ಬಿಡುಗಡೆ ಮಾಡಿರುವುದನ್ನು ರದ್ದುಪಡಿಸಬೇಕು ಸೇರಿ ವಿವಿಧ ಬೇಡಿಕೆ ಈಡೇರಿಕೆಗಾಗಿ ಇತ್ತೀಚೆಗೆ ಪ್ರತಿಭಟನೆ ನಡೆಸಲಾಗಿತ್ತು. ಮುಖಂಡರ ನಿಯೋಗದ ಜೊತೆ ಮಾತುಕತೆ ನಡೆಸಿದ್ದ ಸರ್ಕಾರದ ಅಧಿಕಾರಿಗಳು, ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ಆದರೆ, ಇದುವರೆಗೂ ಬೇಡಿಕೆ ಈಡೇರಿಲ್ಲ. ಹೀಗಾಗಿ, ಪುನಃ ಧರಣಿ ಆರಂಭಿಸಿದ್ದೇವೆ' ಎಂದು ಪ್ರತಿಭಟನಕಾರರು ಹೇಳಿದ್ದಾರೆ.

'ಮಹಿಳೆಯರನ್ನು ಕೆಲಸದಿಂದ ಬಿಡುಗಡೆ ಮಾಡಿ ಅಮಾನವೀಯವಾಗಿ ನಡೆಸಿಕೊಳ್ಳಲಾಗಿದೆ. ಅವರ ಕುಟುಂಬಗಳು ಕಷ್ಟಕ್ಕೆ ಸಿಲುಕಿವೆ. ಸದ್ಯ ಕೆಲಸ ಮಾಡುತ್ತಿರುವ ಮಹಿಳೆಯರಿಗೂ ಆತಂಕ ಶುರುವಾಗಿದ್ದು, ಸೇವಾ ಭದ್ರತೆಯೇ ಇಲ್ಲದಂತಾಗಿದೆ. ಬಿಡುಗಡೆ ಮಾಡಿರುವ ಮಹಿಳೆಯರಿಗೆ ಸೂಕ್ತ ಪರಿಹಾರ ನೀಡುವವರೆಗೂ ಹಾಗೂ ಇತರೆ ಬೇಡಿಕೆ ಈಡೇರಿಸುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ' ಎಂದೂ ಪಟ್ಟು ಹಿಡಿದಿದ್ದಾರೆ.

'ಮಕ್ಕಳಿಗೆ ಬಿಸಿಯೂಟ ತಯಾರಿಸುತ್ತಿರುವ ಮಹಿಳೆಯರು, ಶಿಕ್ಷಣದ ಅಭಿವೃದ್ಧಿಗೂ ಕೊಡುಗೆ ನೀಡುತ್ತಿದ್ದಾರೆ. ಬಿಸಿಯೂಟ ತಯಾರಿಸುವ ಮಹಿಳೆಯರಿಗೆ ಬಜೆಟ್‌ನಲ್ಲಿ ಹೆಚ್ಚಳ ಮಾಡಿರುವ ₹ 1,000 ವೇತನವನ್ನು 2022ರ ಜನವರಿಯಿಂದ ಅನ್ವಯಗೊಳಿಸಬೇಕು. ಬಿಸಿಯೂಟ ಯೋಜನೆ ಕಾಯಂಗೊಳಿಸಬೇಕು. ಅಲ್ಲಿಯವರೆಗೂ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಬೇಕು. ಬೇಸಿಗೆ ಮತ್ತು ದಸರಾ ರಜೆಗಳಲ್ಲಿ ವೇತನ ನೀಡಬೇಕು. ಪ್ರತಿ ಶಾಲೆಗೆ ಇಬ್ಬರು ಅಡುಗೆಯವರನ್ನು ನಿಯೋಜಿಸಬೇಕು. ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವೇತನ ಪಾವತಿಸಬೇಕು' ಎಂದೂ ಪ್ರತಿಭಟನಕಾರರು ಆಗ್ರಹಿಸಿದ್ದಾರೆ.



ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಮಹಿಳೆಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ನಗರದಲ್ಲಿ ಅಹೋರಾತ್ರಿ ಪ್ರತಿಭಟನೆ
- ಸರ್ಕಾರದಿಂದ ಈಡೇರದ ಭರವಸೆ
- ಪ್ರತಿ ತಿಂಗಳ 5ರೊಳಗೆ ವೇತನ ಪಾವತಿಗೆ ಆಗ್ರಹ

19ರಿಂದ ರಾಜ್ಯದಾದ್ಯಂತ ಪ್ರವಾಸ

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನ ಸಭಾ ಚುನಾವಣೆ ಮೇಲೆ ದೃಷ್ಟಿನೆಟ್ಟು, ಇದೇ 19ರಿಂದ ರಾಜ್ಯದಾದ್ಯಂತ ಪ್ರವಾಸ ಕೈಗೊಳ್ಳಲು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ನಿರ್ಧರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ಪ್ರಚಾರ ಸಮಿತಿಯ ಕಾರ್ಯಾಲಯ ಆರಂಭಿಸಲಾಗಿದೆ. ಸಮಿತಿಯ ಪದಾಧಿಕಾರಿಗಳ ಪಟ್ಟಿ ಬಹುತೇಕ ಅಂತಿಮವಾಗಿದ್ದು, ಕೆಲವೇ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು' ಎಂದರು.

'ಮೊದಲ ಹಂತದ ಪ್ರವಾಸ ವನ್ನು ಕಲಬುರಗಿಯಿಂದ 19ರಂದು ಆರಂಭಿಸಿ, 20ರಂದು ಹುಬ್ಬಳ್ಳಿ, ಧಾರವಾಡ, 23ರಂದು ಚಿತ್ರದುರ್ಗ, 24ರಂದು ಶಿವಮೊಗ್ಗ, 26ರಂದು ಮೈಸೂರು, 27ರಂದು ಚಾಮರಾಜನಗರ, ಸೆ. 1ರಂದು ಮಂಗಳೂರು, 2ರಂದು ಉಡುಪಿ, 3ರಂದು ತುಮಕೂರು, 5ರಂದು ಕೊಪ್ಪಳ, 6 ಬಳ್ಳಾರಿ, ವಿಜಯನಗರ, 7ರಂದು ರಾಯಚೂರು, 8ರಂದು ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳಿಗೆ ಹೋಗುತ್ತೇನೆ. ರಾಜ್ಯದಲ್ಲಿ ಸೆ. 27ರಿಂದ ಭಾರತ್ ಜೋಡೊ ಕಾರ್ಯಕ್ರಮ ನಡೆಯಲಿದೆ. ಆ ಬಳಿಕ ಮುಂದಿನ ಹಂತದ ಪ್ರವಾಸ ಹಮ್ಮಿಕೊಳ್ಳುತ್ತೇನೆ' ಎಂದರು.



ಎಂ.ಬಿ. ಪಾಟೀಲ

'ಪ್ರವಾಸದ ವೇಳೆ ಆಯಾ ಜಿಲ್ಲೆಗಳಲ್ಲಿ ಶಾಸಕರು, ಮಾಜಿ ಸಚಿವರು, ವಿಧಾನ ಪರಿಷತ್ ಸದಸ್ಯರು, ಸಂಸದರು, ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು, ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರ ಜತೆ ಸಭೆ ಮಾಡಿ ಅಭಿಪ್ರಾಯ ಸಂಗ್ರಹಿಸುತ್ತೇನೆ. ಸಿದ್ದರಾಮಯ್ಯ ಸರ್ಕಾರದ ಅವಧಿಯ ಕೊಡುಗೆಗಳನ್ನು ಜನರಿಗೆ ತಿಳಿಸಲು ಕಾರ್ಯಕ್ರಮ ರೂಪಿಸುತ್ತೇನೆ. ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಕೊಟ್ಟಿದ್ದ ಮಾತು, ಸರ್ಕಾರದ ವೈಫಲ್ಯ, ಶೇ 40 ಕಮಿಷನ್ ವಿಚಾರ ಹೀಗೆ ಎಲ್ಲವನ್ನೂ ಜನರ ಮುಂದಿಡುತ್ತೇನೆ. ನೋಟು ಅಮಾನ್ಯೀಕರಣ, ಅವೈಜ್ಞಾನಿಕ ಜಿಎಸ್‌ಟಿಯಿಂದ ಆಗುತ್ತಿರುವ ತೊಂದರೆ ವಿಚಾರಗಳ ಬಗ್ಗೆಯೂ ಜಾಗೃತಿ ಮೂಡಿಸುತ್ತೇನೆ' ಎಂದರು.

'2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎನ್ನುವುದು ಗುರಿ. ಅಧಿಕಾರ ಅನುಭವಿಸುವುದಕ್ಕಿಂತ ರಾಜ್ಯವನ್ನು ನಂ.1 ಮಾಡಲು, ಕುವೆಂಪು ಹೇಳಿದಂತೆ ಸರ್ವ ಜನಾಂಗದ ಶಾಂತಿಯ ತೋಟ ಮಾಡಲು ಪಕ್ಷ ಅಧಿಕಾರಕ್ಕೆ ಬರಬೇಕು. ಹದಗೆಟ್ಟಿರುವ ರಾಜ್ಯದ ಆರ್ಥಿಕ ಸ್ಥಿತಿಯನ್ನು ಸರಿದಾರಿಗೆ ತರಲು, ಕಾನೂನು ಸುವ್ಯವಸ್ಥೆ ಕಾಪಾಡಲು, ಆಡಳಿತ ಯಂತ್ರ ಸರಿಪಡಿಸಲು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು' ಎಂದರು.

'ಚುನಾವಣಾ ತಂತ್ರಜ್ಞ ಸುನೀಲ್ ಕುನುಗೋಳ್ ಅವರಿಂದ ಕಾಂಗ್ರೆಸ್ ನಾಯಕರು ಸಲಹೆ ಪಡೆಯುವ ಸ್ಥಿತಿ ಬಂದಿದೆಯೇ' ಎಂಬ ಪ್ರಶ್ನೆಗೆ, '2018ರಲ್ಲಿ ಚುನಾವಣೆಯಲ್ಲಿ ಬಿಜೆಪಿಗೆ ಸುನೀಲ್ ನೆರವು ನೀಡಿದ್ದಾಗ ಯಾರೂ ಆಕ್ಷೇಪ ವ್ಯಕ್ತಪಡಿಸಿರಲಿಲ್ಲ. ಈಗ ಯಾಕೆ? ಆಗ ಅವರು ವಾಣಿಜ್ಯ ಉದ್ದೇಶದಿಂದ ಸಲಹೆ ನೀಡಿದ್ದರು. ಈಗ ಅವರು ಕಾಂಗ್ರೆಸ್ ಸೇರಿ, ಪಕ್ಷದವರಾಗಿ ಮಾಡುತ್ತಿದ್ದಾರೆ' ಎಂದು ಸಮರ್ಥಿಸಿದರು.

ಪೌಲ್ ಜಾಮೀನು ಅರ್ಜಿ ವಜಾ

ಬೆಂಗಳೂರು: ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್‌ಗೆ ಜಾಮೀನು ನೀಡಲು ಸೆಷನ್ಸ್ ಕೋರ್ಟ್ ನಿರಾಕರಿಸಿದೆ.

ಬೆಂಗಳೂರು ನಗರ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಯಶವಂತ ಕುಮಾರ್ ಅವರು ಮಂಗಳವಾರ ಪೌಲ್ ಅವರ ಜಾಮೀನು ಅರ್ಜಿ ವಜಾಗೊಳಿಸಿ ಆದೇಶಿಸಿದರು. 'ಗಂಭೀರ ಸ್ವರೂಪದ ಈ ಪ್ರಕರಣ ಇನ್ನೂ ತನಿಖಾ ಹಂತದಲ್ಲಿರುವಾಗ ಜಾಮೀನು ನೀಡುವುದು ಉಚಿತವಲ್ಲ' ಎಂಬ ಪ್ರಾಸಿಕ್ಯೂಷನ್ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರ ವಾದವನ್ನು ನ್ಯಾಯಾಧೀಶರು ಮನ್ನಿಸಿದ್ದಾರೆ.

ಪೌಲ್, ಈ ಹಗರಣದ 35ನೇ ಆರೋಪಿಯಾಗಿದ್ದು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಮೊದಲು ಜಾಮೀನು ಕೋರಿ ಅಮ್ರಿತ್ ಪೌಲ್ ಸಲ್ಲಿಸಿದ್ದ ಅರ್ಜಿಯನ್ನು ಒಂದನೇ ಎಸಿಎಂಎಂ ನ್ಯಾಯಾಲಯ ವಜಾಗೊಳಿಸಿತ್ತು.

'ಪ್ರಿಯಾಂಕ್‌ಗೆ ನೋಟಿಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಬ್ಬ ಜನಪ್ರತಿನಿಧಿ ಸರ್ಕಾರಿ ಕೆಲಸ ಮಾಡುತ್ತಿರುವ ಯುವತಿಯರ ಬಗ್ಗೆ ಇಂತಹ ಕೀಳು ಮಟ್ಟದ ಹೇಳಿಕೆ ನೀಡಿರುವುದು ಖಂಡನೀಯ. ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆಗೆ ನೋಟಿಸ್ ನೀಡಲಾಗುವುದು' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಹೇಳಿದರು.

'ಯುವತಿಯರು ಸರ್ಕಾರಿ ಕೆಲಸ ಪಡೆಯಲು ಮಂಚ ಹತ್ತಬೇಕು ಎಂದು ವಿವಾದಾತ್ಮಕ ಹೇಳಿಕೆ ನೀಡಿರುವ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಮಹಿಳಾ ಘಟಕವು ಮಹಿಳಾ ಆಯೋಗಕ್ಕೆ ಮಂಗಳವಾರ ದೂರು ನೀಡಿದೆ.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಪ್ರಮೀಳಾ ನಾಯ್ಡು, 'ಪ್ರಿಯಾಂಕ್ ಅವರು ಹತ್ತು ದಿನಗಳಲ್ಲಿ ಉತ್ತರ ನೀಡುವುದರ ಜೊತೆಗೆ ಅವರು ರಾಜ್ಯದ ಮಹಿಳೆಯರಲ್ಲಿ ಕ್ಷಮೆ ಯಾಚಿಸಬೇಕು' ಎಂದರು.

'ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಪ್ರಿಯಾಂಕ್, ಮಹಿಳೆಯರ ವಿರುದ್ಧ ನಾಲಿಗೆ ಹರಿಬಿಟ್ಟಿದ್ದಾರೆ. ಇದು ಲಂಚ-ಮಂಚದ ಸರ್ಕಾರ, ಸರ್ಕಾರಿ ನೌಕರಿ ಪಡೆಯಲು ಯುವಕರು ಲಂಚ ನೀಡಬೇಕು. ಯುವತಿಯರು ಮಂಚ ಹತ್ತಬೇಕು ಎಂದಿದ್ದರು. ಇದು ಉದ್ಯೋಗಸ್ಥ, ಉದ್ಯೋಗಾಕಾಂಕ್ಷಿ ಮಹಿಳೆಯರಿಗೆ ಮಾಡಿರುವ ಅವಮಾನ. ಆದ್ದರಿಂದ ಮಹಿಳಾ ಆಯೋಗ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಎಎಪಿ ನಗರ ಮಹಿಳಾ ಘಟಕದ ಅಧ್ಯಕ್ಷೆ ಕುಶಲಸ್ವಾಮಿ ಆಗ್ರಹಿಸಿದರು.

ಎಎಪಿ ಮಾಧ್ಯಮ ವಕ್ತಾರೆ ಉಷಾ ಮೋಹನ್ ಇದ್ದರು.

'ಮಹಿಳೆಯರಿಗೆ ಗೌರವ ನೀಡಬೇಕು'

'75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಮಹಿಳೆಯರಿಗೆ ಎಲ್ಲರೂ ಗೌರವ ನೀಡಬೇಕು. ಕರ್ನಾಟಕ ರಾಜ್ಯ ಮಹಿಳಾ ಆಯೋಗ ರಾಜ್ಯದಲ್ಲಿ ಪ್ರವಾಸ ಮಾಡಿ ಪ್ರತಿ ಹೆಣ್ಣು ವಿದ್ಯಾವಂತರಾಗಿ ಆರ್ಥಿಕವಾಗಿ ಸ್ವಾವಲಂಬಿ ಆಗಬೇಕು ಎಂದು ಜಾಗೃತಿ ಮೂಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಯಾರಾದರೂ ಮಹಿಳೆಯರ ಬಗ್ಗೆ ಮಾತನಾಡಬೇಕಾದರೆ ಎಚ್ಚರಿಕೆಯಿಂದ ಮಾತನಾಡಬೇಕು' ಎಂದು ಪ್ರಮೀಳಾ ನಾಯ್ಡು ಒತ್ತಾಯಿಸಿದರು.

ಖಾಸಗಿ ವಿವಿ ಮಾನ್ಯತೆ; ಕಡಿವಾಣಕ್ಕೆ ಚಿಂತನೆ

ಬೆಂಗಳೂರು: ಖಾಸಗಿ ಕಾಲೇಜುಗಳಿಗೆ ಡೀಮ್ಡ್ ವಿಶ್ವವಿದ್ಯಾಲಯದ ಮಾನ್ಯತೆ ನೀಡುವ ಪ್ರಕ್ರಿಯೆಗೆ ತಾತ್ಕಾಲಿಕವಾಗಿ ಕಡಿವಾಣ ಹಾಕಲು ಸರ್ಕಾರ ಚಿಂತನೆ ನಡೆಸಿದೆ.

ರಾಜ್ಯದಲ್ಲಿ ಪ್ರಸ್ತುತ 34 ಸರ್ಕಾರಿ, 23 ಖಾಸಗಿ ವಿಶ್ವವಿದ್ಯಾಲಯಗಳಿವೆ. ವಿಶ್ವವಿದ್ಯಾಲಯದ ಮಾನ್ಯತೆ ಕೋರಿ ಸಲ್ಲಿಕೆಯಾಗಿರುವ 5 ಅರ್ಜಿಗಳು ಪ್ರಕ್ರಿಯೆ ಹಂತದಲ್ಲಿವೆ. 3 ಅರ್ಜಿಗಳು ಹೊಸದಾಗಿ ಸಲ್ಲಿಕೆಯಾಗಿವೆ. ಪ್ರತಿ ವರ್ಷವೂ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆ ಹೆಚ್ಚುತ್ತಿದ್ದು, ಶಿಕ್ಷಣದ ಗುಣಮಟ್ಟ ಕುಸಿಯುವ ಆತಂಕದಿಂದಾಗಿ ಹೊಸ ಅರ್ಜಿಗಳನ್ನು ಸದ್ಯಕ್ಕೆ ಪುರಸ್ಕರಿಸದೆ ಇರಲು ಚಿಂತನೆ ನಡೆದಿದೆ ಎಂದು ಉನ್ನತ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

'ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಆಡಳಿತ ಮಂಡಳಿ ಮಧ್ಯದ ವಿವಾದ, ವಿದ್ಯಾರ್ಥಿಗಳಿಗೆ ಆಗುವ ಅನನುಕೂಲ ಮತ್ತಿತರ ಸಮಯದಲ್ಲಿ ಸರ್ಕಾರ ಮಧ್ಯಪ್ರವೇಶಿಸಿ, ನಿರ್ಧಾರ ತೆಗೆದುಕೊಳ್ಳುವ ಅವಕಾಶ ಕಡಿಮೆ ಇವೆ. ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ಪ್ರತ್ಯೇಕ ಮಸೂದೆ ರೂಪಿಸುವ ಪ್ರಕ್ರಿಯೆ ನಡೆಯುತ್ತಿದೆ. ಅಲ್ಲಿಯವರೆಗೂ ಹೊಸ ಅರ್ಜಿಗಳನ್ನು ಪರಿಗಣಿಸದಿರಲು ನಿರ್ಧರಿಸಲಾಗಿದೆ' ಎನ್ನುವುದು ಅಧಿಕಾರಿಗಳ ವಿವರಣೆ.

ಸಹಕಾರ ಮಾರಾಟ ಮಹಾಮಂಡಳಕ್ಕೆ ₹24.74 ಕೋಟಿ ಲಾಭ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು 2021–22ನೇ ಸಾಲಿನಲ್ಲಿ ₹24.74 ಕೋಟಿ ನಿವ್ವಳ ಲಾಭ ಗಳಿಸಿದೆ.

'ಮಾರಾಟ ಮಹಾ ಮಂಡಳವು ಒಟ್ಟು ₹1,679.21 ಕೋಟಿ ವಹಿವಾಟು ನಡೆಸಿ ಪ್ರಗತಿಯ ಹಾದಿಯಲ್ಲಿ ಸಾಗಿದೆ. ಮಂಡಳಿಯು ಪ್ರಸ್ತುತ ₹9.02 ಕೋಟಿ ಷೇರು ಬಂಡವಾಳ ಹೊಂದಿದೆ' ಎಂದು ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಮಹಾಮಂಡಳವು ವಿವಿಧ ಯೋಜನೆಗಳನ್ನು ರೂಪಿಸಿದೆ. ಮುಂದಿನ ದಿನಗಳಲ್ಲಿ ರಾಜ್ಯದ 50 ಸ್ಥಳಗಳಲ್ಲಿ ಚಿಲ್ಲರೆ ರೂಪದಲ್ಲಿ ರಸಗೊಬ್ಬರ, ಕ್ರಿಮಿನಾಶಕ, ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಮಳಿಗೆಗಳನ್ನು ತೆರೆಯಲು ಉದ್ದೇಶಿಸಿದೆ' ಎಂದು ವಿವರಿಸಿದರು.

'ಮಹಾಮಂಡಳದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ನಿವೃತ್ತಿ ಪಿಂಚಣಿ ಸೌಲಭ್ಯ ಯೋಜನೆಯನ್ನು ಜಾರಿಗೊಳಿಸುವ ಚಿಂತನೆ ಇದೆ. ಜತೆಗೆ, ಜನರಿಕ್ ಔಷಧದ ಸಗಟು ಮತ್ತು ಮಾರಾಟ ಮಳಿಗೆಗಳನ್ನು ತೆರೆಯಲಾಗುವುದು ಹಾಗೂ ಲಾಜಿಸ್ಟಿಕ್ ವೇರ್‌ಹೌಸ್ ಮತ್ತು ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಲಾಗುವುದು ಮತ್ತು ರೈತರಿಗೆ ಅನುಕೂಲ ಕಲ್ಪಿಸಲು ಇ–ಮಾರುಕಟ್ಟೆ ಘಟಕಗಳನ್ನು ಸ್ಥಾಪಿಸಲಾಗುವುದು' ಎಂದು ತಿಳಿಸಿದರು.

'ಶಿಕ್ಷಣ ಮತ್ತು ತರಬೇತಿ ಕಾರ್ಯಗಳನ್ನು ಕೈಗೊಳ್ಳಲು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ₹2ಕೋಟಿ ಶಿಕ್ಷಣ ನಿಧಿ ನೀಡಲಾಗಿದೆ' ಎಂದು ತಿಳಿಸಿದರು.



ಬೆಂಗಳೂರಿನಲ್ಲಿ ಮಂಗಳವಾರ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ. ಟಿ. ದೇವೇಗೌಡ ಅವರಿಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ಅಧ್ಯಕ್ಷ ಎಂ.ಎನ್. ರಾಜೇಂದ್ರಕುಮಾರ್ ಅವರು ₹2 ಕೋಟಿ ಮೊತ್ತದ ಶಿಕ್ಷಣ ನಿಧಿ ಚೆಕ್ ನೀಡಿದರು. ಸಹಕಾರ ಸಚಿವ ಎಸ್. ಟಿ ಸೋಮಶೇಖರ್, ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಆರ್. ಶ್ರೀಧರ್, ಉಪಾಧ್ಯಕ್ಷ ಬಸಗೌಡ ರಾಮಗೌಡ ಪಾಟೀಲ, ನಿರ್ದೇಶಕ ಡಿ.ಜಿ. ಶಾಂತನಗೌಡ ಇದ್ದರು.

ಏಳು ಕೆಎಸ್‌ಪಿಎಸ್ ಅಧಿಕಾರಿಗಳಿಗೆ ಐಪಿಎಸ್‌ಗೆ ಬಡ್ತಿ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಸೇವೆಯ (ಕೆಎಸ್‌ಪಿಎಸ್) ಏಳು ಅಧಿಕಾರಿಗಳಿಗೆ ಭಾರತೀಯ ಪೊಲೀಸ್ ಸೇವೆಗೆ (ಐಪಿಎಸ್) ಬಡ್ತಿ ನೀಡಲಾಗಿದೆ.

ಸಚಿನ್ ಘೋರ್ಪಡೆ, ಅಮಟೆ ವಿಕ್ರಂ, ಸಜಿತ್ ವಿ. ಜೆ, ರಾಮ್ ಲಕ್ಷ್ಮಣಸಾ ಅರಸಿದ್ದಿ, ಬಾಬಾಸಾಬ್ ನೇಮಗೌಡ, ಗೋಪಾಲ್ ಬಿ. ಬ್ಯಾಕೋಡ, ಮಹಾನಿಂಗ ನಂದಗಾನ್ವಿ ಬಡ್ತಿ ಪಡೆದವರು.

2021ನೇ ಸಾಲಿನ ಆಯ್ಕೆ ಪಟ್ಟಿಯಲ್ಲಿ ಬಡ್ತಿ ನೀಡಲು ಜುಲೈ 25ರಂದು ಆಯ್ಕೆ ಸಮಿತಿ ಸಭೆ ನಡೆದಿತ್ತು. ಇದೀಗ ಕೇಂದ್ರ ಲೋಕಸೇವಾ ಆಯೋಗ ಈ ಎಲ್ಲ ಅಧಿಕಾರಿಗಳಿಗೆ ಐಪಿಎಸ್ ಶ್ರೇಣಿಗೆ ಬಡ್ತಿ ನೀಡಿ ಅಧಿಸೂಚನೆ ಹೊರಡಿಸಿದೆ. ಈ ಅಧಿಕಾರಿಗಳು ಕರ್ನಾಟಕ ರಾಜ್ಯ ಕೇಡರ್‌ನಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಲೋಕ ಅದಾಲತ್ ಬಗ್ಗೆ ಅಪಪ್ರಚಾರ: ನ್ಯಾಯಮೂರ್ತಿ ಬಿ.ವೀರಪ್ಪ ಎಚ್ಚರಿಕೆ

ಬೆಂಗಳೂರು: 'ಕ್ಷುಲ್ಲಕ ಮತ್ತು ಸಂಚಾರ ನಿಯಮ ಉಲ್ಲಂಘನೆ ಕೇಸುಗಳನ್ನು ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ಅವಕಾಶವಿಲ್ಲ ಎಂದು ಕೆಲ ವಕೀಲರು, ನ್ಯಾಯಾಧೀಶರು, ಮಾಹಿತಿ ಹಕ್ಕು (ಆರ್‌ಟಿಐ) ಕಾರ್ಯಕರ್ತರು ಮತ್ತು ಪಟ್ಟಭದ್ರ ಹಿತಾಸಕ್ತಿ ಹೊಂದಿದವರು ಅಪಪ್ರಚಾರ ನಡೆಸುತ್ತಿದ್ದಾರೆ' ಎಂದು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಕಾರ್ಯಕಾರಿ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಅಕ್ರೋಶ ವ್ಯಕ್ತಪಡಿಸಿದ್ದಾರೆ.

ಇದೇ 13ರಂದು ರಾಜ್ಯಾದಾದ್ಯಂತ ನಡೆದ ರಾಷ್ಟ್ರೀಯ ಲೋಕ ಅದಾಲತ್ ಕುರಿತಂತೆ ಮಾಧ್ಯಮಗೋಷ್ಠಿಯಲ್ಲಿ ಅಂಕಿ ಅಂಶ ನೀಡಿ ಮಾತನಾಡಿದ ಅವರು, 'ಇಂತಹ ಅಪಪ್ರಚಾರದಿಂದ ಸಾರ್ವಜನಿಕರಿಗೆ ಅದರಲ್ಲೂ ಬಡ ಕಕ್ಷಿದಾರರಿಗೆ ತೊಂದರೆಯಾಗಲಿದೆ. ಹಾಗಾಗಿ, ಯಾರೂ ಈ ರೀತಿಯ ಅಪಪ್ರಚಾರದಲ್ಲಿ ತೊಡಗಿಸಿಕೊಳ್ಳಬಾರದು' ಎಂದು ಎಚ್ಚರಿಸಿದ್ದಾರೆ.

'ಆರಂಭಿಕ ಹಂತದಲ್ಲೇ ಪ್ರಕರಣಗಳನ್ನು ಇತ್ಯರ್ಥಪಡಿಸುವುದರಿಂದ ಕೋರ್ಟ್ ಮೆಟ್ಟಿಲೇರುವ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಲಿದೆ. ಆದ್ದರಿಂದ, ಅಪಪ್ರಚಾರದಲ್ಲಿ ತೊಡಗಿರುವವರ ಬಗ್ಗೆ ಮಾಹಿತಿ ಸಂಗ್ರಹಿಸಿ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಲೋಕ ಅದಾಲತ್‌ನಲ್ಲಿ ಯಾವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅವಕಾಶವಿದೆ ಎಂಬ ಪಟ್ಟಿಯನ್ನು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಈಗಾಗಲೇ ಬಿಡುಗಡೆ ಮಾಡಿದೆ. ಈ ಬಗ್ಗೆ ಏನಾದರೂ ಅನುಮಾನಗಳಿದ್ದರೆ ಕೆಎಸ್‌ಎಲ್‌ಎಸ್‌ಎ ಅನ್ನು ಸಂಪರ್ಕಿಸಬಹುದು' ಎಂದು ಅವರು ತಿಳಿಸಿದರು.



ಬಿ.ವೀರಪ್ಪ

ಇದೇ 13ರಂದು ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ದಾಖಲೆಯ ಒಟ್ಟು 8.34 ಲಕ್ಷ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ. ಒಟ್ಟು 1009 ಬೈಠಕ್‌ಗಳನ್ನು ನಡೆಸಿ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿಯಿದ್ದ 1,53,024 ಮತ್ತು ವ್ಯಾಜ್ಯಪೂರ್ವ 6,81,596 ಸೇರಿದಂತೆ ಒಟ್ಟು 8,34,620 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ವಿಲೇವಾರಿ ಮಾಡಲಾಗಿದೆ' ಎಂದರು.

'ಈ ಅದಾಲತ್‌ನಲ್ಲಿ 1,380 ವೈವಾಹಿಕ ವಿವಾದ ಪ್ರಕರಣಗಳನ್ನು ಇತ್ಯರ್ಥಪಡಿಸಿ, 120 ಜೋಡಿಗಳನ್ನು ಒಂದುಗೂಡಿಸಲಾಗಿದೆ. ಮೈಸೂರಿನಲ್ಲಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದ 27 ದಂಪತಿ ಹಾಗೂ ಬೆಂಗಳೂರಿನ 12 ದಂಪತಿ ಪುನರ್ ದಾಂಪತ್ಯಕ್ಕೆ ಅನುವು ಮಾಡಿಕೊಡಲಾಗಿದೆ' ಎಂದು ನ್ಯಾ. ವೀರಪ್ಪ ವಿವರಿಸಿದರು.

ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಉಡುಪಿ ಜಿಲ್ಲಾ ಎಸ್ಪಿ ಎನ್.ವಿಷ್ಣುವರ್ಧನ್ ಅವರನ್ನು ಗುಪ್ತದಳದ ಎಸ್ಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಎಚ್.ಅಕ್ಷಯ್ ಮಚ್ಚೀಂದ್ರ–ಉಡುಪಿ ಎಸ್ಪಿ ಮತ್ತು ಕೋನ ವಂಶಿ ಕೃಷ್ಣ ಅವರನ್ನು ಕಮಾಂಡೆಂಟ್ 1 ಬೆಟಾಲಿಯನ್, ಕೆಎಸ್‌ಆರ್‌ಪಿ, ಬೆಂಗಳೂರು ಇಲ್ಲಿಗೆ ವರ್ಗಾಯಿಸಲಾಗಿದೆ.

ವಿಮರ್ಶಕ ಜಿ.ಎಂ. ಹೆಗಡೆಗೆ 'ವಿ.ಕೃ. ಗೋಕಾಕ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಹಾಗೂ ಭಾರತೀಯ ವಿದ್ಯಾಭವನ ನೀಡುವ 2022ನೇ ಸಾಲಿನ 'ವಿ.ಕೃ. ಗೋಕಾಕ್ ಪ್ರಶಸ್ತಿ'ಗೆ ಧಾರವಾಡದ ವಿಮರ್ಶಕ ಜಿ.ಎಂ. ಹೆಗಡೆ ಆಯ್ಕೆಯಾಗಿದ್ದಾರೆ.

ಟ್ರಸ್ಟ್ ಅಧ್ಯಕ್ಷ ಬಿ.ಎಸ್. ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ಅನಿಲ್ ಗೋಕಾಕ್, ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ನ. ರವಿಕುಮಾರ್ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.



ಜಿ.ಎಂ. ಹೆಗಡೆ

ಸೆಪ್ಟೆಂಬರ್ ಎರಡನೇ ವಾರ ಭಾರತೀಯ ವಿದ್ಯಾಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕಣಿವೆಗೆ ಬಸ್ ಉರುಳಿ ಐಟಿಬಿಪಿಯ 7 ಯೋಧರ ಸಾವು

ಒಂದನೇ ಪುಟದಿಂದ

'ಬಸ್‌ನಲ್ಲಿ ಐಟಿಬಿಪಿಯ 37 ಮಂದಿ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಇಲಾಖೆಯ ಇಬ್ಬರು ಸಿಬ್ಬಂದಿ ಇದ್ದರು. ಚಂದನವಾಡಿ ಹಾಗೂ ಪಹಲ್ಗಾಮ್ ನಡುವೆ ಇರುವ ಆಳವಾದ ಕಣಿವೆಗೆ ಬಸ್ ಉರುಳಿದೆ. ಇಬ್ಬರು ಯೋಧರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಐವರು ಚಿಕಿತ್ಸೆಗೆ ಸ್ಪಂದಿಸದೆ ಅಸುನೀಗಿದ್ದಾರೆ' ಎಂದು ಹೇಳಿದ್ದಾರೆ.

'ಗಾಯಗೊಂಡಿರುವವರ ಪೈಕಿ ಎಂಟು ಮಂದಿಯ ಸ್ಥಿತಿ ಗಂಭೀರವಾಗಿದೆ. ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಮಾನದ ಮೂಲಕ ಶ್ರೀನಗರಕ್ಕೆ ಕೊಂಡೊಯ್ಯಲಾಗಿದೆ. ಉಳಿದವರಿಗೆ ಅನಂತನಾಗ್ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ತಿಳಿಸಿದ್ದಾರೆ.

'ಬಸ್‌ನ 'ಬ್ರೇಕ್' ವಿಫಲವಾಗಿ ಈ ದುರ್ಘಟನೆ ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಐಟಿಬಿಪಿ ವಕ್ತಾರರೊಬ್ಬರು ಹೇಳಿದ್ದಾರೆ.


ಗಾಯಾಳುಗಳಿಗೆ ಅಗತ್ಯವಿರುವ ಎಲ್ಲಾ ನೆರವು ಒದಗಿಸುವುದಾಗಿ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಟ್ವೀಟ್ ಮಾಡಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.





ಸ್ಮಾರ್ಟ್ ಮನೆಯ ಕನಸುಗಳು



ಉದಯ ಶಂಕರ ಪುರಾಣಿಕ

> ನೀವು ಬೆಳಿಗ್ಗೆ ಏಳುವ ಮೊದಲೇ ಮನೆಯ ಕಸ ಗುಡಿಸಿ, ಸಾರಿಸಿ ಶುಭ್ರಗೊಳಿಸಿರುತ್ತದೆ, ರೋಬೋ ಕ್ಲೀನರ್. ರಾತ್ರಿ ಕಳೆದು ಸೂರ್ಯೋದಯವಾಗುತ್ತಿರುವಂತೆ ನೀವು ರಾತ್ರಿ ಮನೆಯ ಮುಂದೆ ಹಾಕಿದ ದೀಪ, ತಾನಾಗಿಯೇ ಆಫ್ ಆಗಿರುತ್ತದೆ...

ಸ್ಮಾರ್ಟ್ ಫೋನ್, ಸ್ಮಾರ್ಟ್ ಟಿ.ವಿ, ಸ್ಮಾರ್ಟ್ ಸಿಟಿ – ಹೀಗೆ ಅನೇಕ ರೀತಿಯಲ್ಲಿ ಅಧುನಿಕ ಡಿಜಿಟಲ್ ತಂತ್ರಜ್ಞಾನದ ಬಳಕೆ ಜನಪ್ರಿಯವಾಗುತ್ತಿದೆ. ಇವುಗಳೊಡನೆ ಬಂದಿದೆ ಸ್ಮಾರ್ಟ್ ಕಟ್ಟಡ ಮತ್ತು ಸ್ಮಾರ್ಟ್ ಮನೆಗಳು. ವಿಶೇಷವಾಗಿ ಕಟ್ಟಡ ಮತ್ತು ಗೃಹನಿರ್ಮಾಣದಲ್ಲಿ ತೊಡಗಿರುವ ಸಂಸ್ಥೆಗಳು, ವಾಸ್ತುಶಿಲ್ಪಿಗಳು, ಸಿವಿಲ್ ಎಂಜಿನಿಯರಿಂಗ್ ಪದವಿ ಅಥವಾ ಡಿಪ್ಲೊಮಾ ಪಡೆದು ನೌಕರಿ ಅಥವಾ ಸ್ವಯಂ ಉದ್ಯೋಗ ಮಾಡಲು ಇಚ್ಛಿಸುವವರು ಮತ್ತು ನವೋದ್ಯಮಿಗಳಿಗೆ ಈ ಕ್ಷೇತ್ರದಲ್ಲಿ ಬಹಳ ಅವಕಾಶಗಳಿವೆ. ವರ್ಷ 2025ರ ಹೊತ್ತಿಗೆ ವಿಶ್ವದಾದಂತ್ಯ ಸ್ಮಾರ್ಟ್ ಮನೆಗಳ ಮಾರುಕಟ್ಟೆ ಐದು ಲಕ್ಷ ಕೋಟಿ ರೂಪಾಯಿಗಳಾಗುತ್ತದೆ ಎಂದು ಅಂತರರಾಷ್ಟ್ರೀಯ ಖ್ಯಾತಿಯ ಸಂಸ್ಥೆಯೊಂದು ನಡೆಸಿದ ಅಧ್ಯಯನ ವರದಿಯಲ್ಲಿ ಹೇಳಲಾಗಿದೆ. ಭಾರತದಲ್ಲಿ ಕೂಡ ಬಹಳ ಶ್ರೀಮಂತರು ಮಾತ್ರ ಇಂತಹ ಮನೆಗಳನ್ನು ಕಟ್ಟಿಸಬಹುದು ಎನ್ನುವ ಭಾವನೆ ದೂರವಾಗಿ, ಸ್ವಂತ ಮನೆ ಕಟ್ಟಲು ಮುಂದಾಗುವ ಮಧ್ಯಮ ವರ್ಗದ ಜನರಿಗೂ ಅತ್ಯಾಧುನಿಕ ಸೌಲಭ್ಯಗಳಿರುವ ಸ್ಮಾರ್ಟ್ ಮನೆಯನ್ನು ಹೊಂದುವುದು ಸಾಧ್ಯವಿದೆ ಎಂದು ವಿಶ್ವವಿಖ್ಯಾತ ಸ್ಯಾಮ್ ಸಂಗ್ ಸಂಸ್ಥೆಯ ಉಪಾಧ್ಯಕ್ಷರೊಬ್ಬರು ಹೇಳಿದ್ದಾರೆ.

ಭಾರತದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚು ಜನಪ್ರಿಯವಾಗುತ್ತಿರುವ ಸ್ಮಾರ್ಟ್ ಮನೆಗಳಿಗೆ ಅಗತ್ಯವಾದ ಸೇವೆಗಳನ್ನು ನೀಡಲು ರಿಲಯನ್ಸ್ ಜಿಯೋ, ಏರ್‌ಟೆಲ್ ಮೊದಲಾದ ಟೆಲಿಕಾಮ್ ಸಂಸ್ಥೆಗಳು ಮುಂದಾಗಿವೆ. ಮುಂಬರುವ ದಿನಗಳಲ್ಲಿ ಭಾರತದಲ್ಲಿ 5ಜಿ ಸೇವೆಗಳು ಪ್ರಾರಂಭವಾಗುವುದರಿಂದ, ಸ್ಮಾರ್ಟ್ ಮನೆಗಳ ಬೇಡಿಕೆ ಹಲವು ಪಟ್ಟು ಹೆಚ್ಚಾಗುವ ನಿರೀಕ್ಷೆ ಇದೆ.



ಸ್ಮಾರ್ಟ್ ಮನೆಯಲ್ಲಿ ಏನುಂಟು, ಏನಿಲ್ಲ?

ನೀವು ಬೆಳಿಗ್ಗೆ ಏಳುವ ಮೊದಲೇ ಮನೆಯ ಕಸ ಗುಡಿಸಿ, ಸಾರಿಸಿ ಶುಭ್ರಗೊಳಿಸಿರುತ್ತದೆ, ರೋಬೋ ಕ್ಲೀನರ್. ರಾತ್ರಿ ಕಳೆದು ಸೂರ್ಯೋದಯವಾಗುತ್ತಿದ್ದಂತೆ ನೀವು ರಾತ್ರಿ ಮನೆಯ ಮುಂದೆ ಹಾಕಿದ ದೀಪ, ತಾನಾಗಿಯೇ ಆಫ್ ಆಗಿರುತ್ತದೆ. ರಾತ್ರಿ ನಿಮ್ಮ ಮನೆಯಿರುವ ಪ್ರದೇಶದಲ್ಲಿ ವಿದ್ಯುತ್ ಬಳಕೆ ಕಡಿಮೆ ಇರುವ ಸಮಯದಲ್ಲಿ ನೀರಿನ ಸಂಪ್‌ನಿಂದ ಮನೆಯ ಮೇಲಿನ ಟ್ಯಾಂಕಿಗೆ ನೀರು ಭರ್ತಿಯಾಗಿರುತ್ತದೆ. ಅದೇ ಸಮಯದಲ್ಲಿ ವಾಷಿಂಗ್ ಮಶಿನ್‌ನಲ್ಲಿರುವ ಬಟ್ಟೆಗಳನ್ನು ಒಗೆಯಲಾಗಿರುತ್ತದೆ.

ಇನ್ನು ನೀವು ಬೆಳಿಗ್ಗೆ ಎದ್ದು, ಪ್ರಾತಃವಿಧಿಗಳನ್ನು ಪೂರೈಸಲು ಬಾತ್‌ರೂಮಿಗೆ ಹೋಗುವಿರಿ. ನಿಮಗೆ ಇಷ್ಟವಾದಷ್ಟು ಹದಕ್ಕೆ ಮಾತ್ರ ಬಿಸಿಯಾಗಿರುವ ನೀರು ನಿಮಗಾಗಿ ಕಾದಿರುತ್ತದೆ. ಈಗ ತಾನೆ ಎದ್ದಿರುವುದು, ಬಾಯ್ಲರ್ ಆನ್ ಕೂಡ ಮಾಡಿಲ್ಲ, ಆದರೂ ನೀರು ಹೇಗೆ ಬಿಸಿಯಾಗಿದೆ? ಬಿಸಿ ನೀರಿಗೆ ಮತ್ತೆ ತಣ್ಣೀರು ಬೆರೆಸಿ ಬಳಸುವ ಅಗತ್ಯವೂ ಇಲ್ಲ. ನಿಮಗೆ ಇಷ್ಟವಾದ ಹದಕ್ಕೆ ಬಿಸಿಯಾಗಿರುವ ನೀರು ರೆಡಿಯಾಗಿದೆ. ಅಷ್ಟು ಮಾತ್ರವಲ್ಲ, ನಿಮ್ಮ ಕುಟುಂಬದ ಪ್ರತಿಯೊಬ್ಬ ಸದಸ್ಯರು ಬಾತ್‌ರೂಮಿಗೆ ಹೋದಾಗ ಅವರಿಗೆ ಇಷ್ಟವಾದ ಹದಕ್ಕೆ ಬಿಸಿನೀರು ಲಭ್ಯವಿರುತ್ತದೆ.

ಮುಂದೆ ನೀವು ಪೂಜೆಯ ಕೊಠಡಿಗೆ ಬರುವಿರಿ. ಆಗ, ನಿಮಗೆ ಇಷ್ಟವಾದ ಪ್ರಾರ್ಥನೆಯನ್ನು ಮತ್ತು ಮಂತ್ರಗಳನ್ನು ಅಲೆಕ್ಸಾದಂತಹ ಡಿಜಿಟಲ್ ಅಸಿಸ್ಟೆಂಟ್ ಕೇಳಿಸುತ್ತದೆ. ನೀವು ಪೂಜೆ ಮಾಡುತ್ತಿರುವಾಗ ಯೋಗ ಮಾಡುತ್ತಿರುವ ಮಡದಿ, ವ್ಯಾಯಾಮ ಮಾಡುತ್ತಿರುವ ಮಗಳಿಗೆ ಮಾತ್ರ ಕೇಳುವಂತೆ ಅವರಿಗೆ ಇಷ್ಟವಾದ ಹಿನ್ನಲೆ ಸಂಗೀತವನ್ನು ಡಿಜಿಟಲ್ ಅಸಿಸ್ಟೆಂಟ್ ಕೇಳಿಸುತ್ತದೆ.

ಇನ್ನು ಅಡುಗೆಮನೆಗೆ ಬಂದರೆ, ತಿಂಡಿ ಕಾಫಿಗೆ ಏನು ಮಾಡುವುದು ಎನ್ನುವ ಯೋಚನೆ ಬೇಡ. ನಿಮ್ಮ ರೆಫ್ರಿಜರೇಟರ್‌ನಲ್ಲಿ ಎಷ್ಟು ಹಾಲಿದೆ, ಯಾವ ತರಕಾರಿಗಳಿವೆ ಎನ್ನುವ ವಿವರಗಳನ್ನು, ಕಾಫಿಪುಡಿ, ಸಕ್ಕರೆ ಡಬ್ಬಗಳಲ್ಲಿ ಎಷ್ಟು ಕಾಫಿಪುಡಿ, ಸಕ್ಕರೆ ಇದೆ ಮೊದಲಾದ ವಿವರಗಳನ್ನು ಡಿಜಿಟಲ್ ಅಸಿಸ್ಟೆಂಟ್ ನಿಮಗೆ ತಿಳಿಸುತ್ತದೆ. ಅಷ್ಟೇ ಅಲ್ಲ, ಮನೆಯಲ್ಲಿರುವ ತರಕಾರಿಗಳನ್ನು ಬಳಸಿ ಉಪಾಹಾರಕ್ಕೆ ಏನು ತಿಂಡಿ ಮಾಡಬಹುದು, ಯಾವ ತಿಂಡಿ ಮಾಡಲು ಎಷ್ಟು ಸಮಯ ಬೇಕು, ಈ ತಿಂಡಿಗಳನ್ನು ಮಾಡುವುದು ಹೇಗೆ ಎನ್ನುವ ವಿವರಗಳನ್ನು ಈ ಡಿಜಿಟಲ್ ಅಸಿಸ್ಟೆಂಟ್ ನೀಡಬಲ್ಲದು. ಇನ್ನು ನೀವು ಕಾಫಿ, ತಿಂಡಿ ತಯಾರಿಸಲು ಎಷ್ಟು ಕಾಫಿಪುಡಿ, ಸಕ್ಕರೆ, ಹಾಲು, ದಿನಸಿಗಳನ್ನು ಬಳಸಿದಿರಿ ಎಂದು ಗಮನಿಸುವ ಸ್ಮಾರ್ಟ್ ಕಿಚನ್ ವ್ಯವಸ್ಥೆ, ಯಾವ ವಸ್ತುಗಳು ಖಾಲಿಯಾಗಿವೆ ಅಥವಾ ಖಾಲಿಯಾಗುವ ಹಂತಕ್ಕೆ ಬಂದಿವೆ ಎಂದು ಗುರುತಿಸಿ, ಅವುಗಳನ್ನು ಖರೀದಿಸಲು ಆನ್‌ಲೈನ್ ಶಾಪಿಂಗ್ ಮಾಡುತ್ತದೆ. ಹೀಗೆ ಆನ್‌ಲೈನ್ ಶಾಪಿಂಗ್‌ನಲ್ಲಿ ಖರೀದಿಸಲಾದ ವಸ್ತುಗಳಿಗೆ ಹಣ ಪಾವತಿಯನ್ನು ನೀವು ಸ್ಮಾರ್ಟ್ ಫೋನ್ ಬಳಸಿ ಮಾಡಬಹುದು.

ಇನ್ನು ನೀವು ತಿಂಡಿ, ಕಾಫಿ ಸೇವಿಸಿದ ನಂತರ ಅಥವಾ ಮೊದಲು ಔಷಧಗಳನ್ನು ತಗೆದುಕೊಳ್ಳವವರಾದರೆ, ಅದನ್ನು ನಿಮಗೆ ಜ್ಞಾಪಿಸುವ ಕೆಲಸವನ್ನೂ ಡಿಜಿಟಲ್ ಅಸಿಸ್ಟೆಂಟ್ ಮಾಡುತ್ತದೆ.

ನೀವು ಮತ್ತು ನಿಮ್ಮ ಕುಟುಂಬ ಸದಸ್ಯರು ಕಾರ್ಯನಿಮಿತ್ತ ಮನೆಯಿಂದ ಹೊರಡುವಿರಿ. ಬಾಯ್ಲರ್‌ನ ಸ್ವಿಚ್ ಆರಿಸಿಲ್ಲ, ರೂಮಿನಲ್ಲಿ ಫ್ಯಾನ್ ತಿರುಗುತ್ತಿದೆ, ಲೈಟ್ ಆರಿಸಿಲ್ಲ ಎನ್ನುವ ಚಿಂತೆ ಬೇಡ. ನಿಮ್ಮ ಸ್ಮಾರ್ಟ್ ಫೋನ್‌ನಿಂದ ಸೂಚನೆ ನೀಡಿದರೆ ಸಾಕು, ಮನೆಯಲ್ಲಿರುವ ವಿದ್ಯುತ್ ದೀಪಗಳು, ಟಿ.ವಿ ಮೊದಲಾದ ಗೃಹೋಪಕರಣಗಳನ್ನು ಆನ್ ಅಥವಾ ಆಫ್ ಮಾಡಬಹುದು. ಈ ಕಷ್ಟವೂ ಬೇಡವೆಂದರೆ ಮನೆಯಲ್ಲಿರುವ ಸ್ಮಾರ್ಟ್ ವ್ಯವಸ್ಥೆ ನೀವು ಮರೆತು ಹೋದ ಬಾಯ್ಲರ್, ಟಿ.ವಿ, ದೀಪಗಳನ್ನು ಆರಿಸುವ ಕೆಲಸವನ್ನು ಮಾಡುತ್ತದೆ. ಯಾರೋ ಮರೆತು ನಲ್ಲಿಯಲ್ಲಿ ನೀರು ಬಿಟ್ಟಿದ್ದರೆ ಅದನ್ನು ಗುರುತಿಸಿ, ನೀರು ಪೋಲಾಗುವುದನ್ನು ಕೂಡ ಈ ವ್ಯವಸ್ಥೆ ತಡೆಯಬಲ್ಲದು. ಮನೆಯಲ್ಲಿ ಯಾರೂ ಇಲ್ಲ, ಆದರೆ ಮನೆಗೆ ಯಾರೋ ಬಂದಿದ್ದಾರೆ ಏನು ಮಾಡುವುದು ಎನ್ನುವ ಚಿಂತೆ ಬೇಡ. ನಿಮ್ಮ ಮನೆಯಲ್ಲಿರುವ ಸ್ಮಾರ್ಟ್ ಕ್ಯಾಮೆರಾ ಮತ್ತು ತಂತ್ರಾಂಶದ ಸಹಾಯದಿಂದ, ಮನೆಗೆ ಬಂದವರು ಯಾರು ಎಂದು ನಿಮ್ಮ ಸ್ಮಾರ್ಟ್ ಫೋನ್‌ನಲ್ಲಿ ನೋಡಬಹುದು. ಬಂದವರ ಜೊತೆ ಮಾತನಾಡುವುದಿದ್ದರೆ, ನಿಮ್ಮ ಸ್ಮಾರ್ಟ್ ಫೋನ್ ಮೂಲಕವೇ ಮಾತನಾಡಬಹುದು ಕೂಡ. ಯಾರಾದರೂ ಕಳ್ಳತನದಂತಹ ಅಪರಾಧ ಮಾಡಲು ಬಂದರೆ, ಸ್ಮಾರ್ಟ್ ವ್ಯವಸ್ಥೆ ತಕ್ಷಣ ನಿಮಗೆ ಮತ್ತು ಹತ್ತಿರದ ಪೊಲೀಸ್ ಠಾಣೆಗೆ ತುರ್ತು ಕರೆಯ ಮೂಲಕ ಎಚ್ಚರಿಕೆಯನ್ನು ನೀಡುತ್ತದೆ. ಅಪರಾಧಕೃತ್ಯಕ್ಕೆ ಯತ್ನಿಸುತ್ತಿರುವಾಗಲೇ ಅಪರಾಧಿಗಳನ್ನು ಬಂಧಿಸಲು ಪೋಲಿಸರಿಗೂ ಸಹಾಯವಾದಂತಾಗುತ್ತದೆ.

ಈವರೆಗೆ ನೀಡಿದ ವಿವರಗಳು ಸಾಮಾನ್ಯವಾಗಿ ಸ್ಮಾರ್ಟ್ ಮನೆಗಳಲ್ಲಿ ಕಾಣುವ ವ್ಯವಸ್ಥೆ ಮತ್ತು ಸೌಲಭ್ಯಗಳು. ನಿಮಗೆ ಇಷ್ಟವಾದಂತೆ ಸ್ಮಾರ್ಟ್ ಮನೆಯ ಸೌಲಭ್ಯಗಳನ್ನು ಮಾಡಿಕೊಳ್ಳಬಹುದು ಕೂಡ. ದಿನಬಳಕೆಯ ವಿದ್ಯುತ್, ನೀರು ಮೊದಲಾದ ಸೌಲಭ್ಯಗಳಲ್ಲಿ ಮಿತವ್ಯಯ ಸಾಧಿಸಬೇಕು ಎಂದು ಕೆಲವರು ಅದ್ಯತೆ ನೀಡಿದರೆ, ಮನೆಯ ಸುರಕ್ಷತೆಗೆ ಕೆಲವರು ಅದ್ಯತೆ ನೀಡುತ್ತಾರೆ, ಮನೆಯಲ್ಲಿ ಅತ್ಯಾಧುನಿಕ ಮನರಂಜನೆ ಸೌಲಭ್ಯಗಳಿರಬೇಕು ಎಂದು ಕೆಲವರು ಬಯಸಿದರೆ, ಸ್ಮಾರ್ಟ್ ವ್ಯವಸ್ಥೆ ಇರುವ ಅಡುಗೆಮನೆ ಕೆಲವರಿಗೆ ಇಷ್ಟವಾಗುತ್ತದೆ. ❖

ಕಾಂಪ್ಲೆಕ್ಸಿಟಿ ಸೈನ್ಸ್

ಸಂಕೀರ್ಣ ವ್ಯವಸ್ಥೆಗೆ ಸರಳ ಪರಿಹಾರ!



ಸುಧೀರ ಎಚ್. ಎಸ್.

ಪಕ್ಷಿಗಳು ಹಾರುವಾಗ ಅವು ಹೇಗೆ ಒಂದು ಸಂಯೋಜಿತ ಗುಂಪಿನಲ್ಲಿ ಹಾರುವುದು ಎಂದು ಯೋಚಿಸಿದ್ದೀರಾ? ಇರುವೆಗಳು ಒಂದು ಸಾಲಿನಲ್ಲಿ ಒಂದರ ಹಿಂದೆ ಒಂದರಂತೆ ಹೇಗೆ ಹಿಂಬಾಲಿಸಿಕೊಂಡು ಸಾಗುವುದು ಎಂದು ಗಮನಿಸಿದ್ದೀರಾ? ಕುರಿಗಳು ಗುಂಪಿನಲ್ಲೇ ಹೇಗೆ ಸಾಗುವುದು ಎಂದು ನೋಡಿದ್ದೀರಾ?

ಇವುಗಳ ವಿಶೇಷವೆಂದರೆ ಇಂತಹ ನಡವಳಿಕೆಗಳ ಹಿಂದೆ ಯಾವುದೇ ನಿರ್ದಿಷ್ಟ ವ್ಯವಸ್ಥೆಯೇನೂ ಇರುವುದಿಲ್ಲ. ಇವು ಕೆಲವೊಂದು ಸರಳ ನಿಯಮಗಳನ್ನು ಪಾಲಿಸುವುದರಿಂದ ಇಂಥ 'ವ್ಯವಸ್ಥೆ' ತನ್ನಷ್ಟಕ್ಕೆ ತಾನೇ ರೂಪುಗೊಳ್ಳುತ್ತಿರುತ್ತವೆ. ಈಗ ವಿಜ್ಞಾನಿಗಳು ಇಂತಹ ಪರಿಣಾಮಗಳನ್ನು ಅನುಕರಿಸಲು ಮತ್ತು ಇಂತಹ ಸನ್ನಿವೇಶಗಳಲ್ಲಿ ಯಾವ ಯಾವ ನಿಯಮಗಳು ಅನ್ವಯಿಸುತ್ತವೆ ಎಂಬುದಕ್ಕೆ ಮಾಡೆಲ್‌ಗಳನ್ನು ರೂಪಿಸಲು 'ಕಾಂಪ್ಲೆಕ್ಸಿಟಿ ಸೈನ್ಸ್' ಎಂಬ ನವೀನ ಕ್ಷೇತ್ರದ ಮೊರೆ ಹೋಗಿದ್ದಾರೆ.

ಅಂದಹಾಗೆ, ಪಕ್ಷಿಗಳು ಈ ಬಗೆಯ ಗುಂಪಿನಲ್ಲಿ ಹಾರುವುದಕ್ಕೆ 'ಫ್ಲಾಕಿಂಗ್' ಎನ್ನುತ್ತಾರೆ.

ಲುಡ್ವಿಗ್ ವಾನ್ ಬರ್ಟಾಲನ್ಫಿ ಎಂಬ ಒಬ್ಬ ಜೀವಶಾಸ್ತ್ರಜ್ಞ 1950ರಲ್ಲಿ ಜನರಲ್ 'ಸಿಸ್ಟಮ್ಸ್ ಥಿಯರಿ' ಎಂಬ ಸಿದ್ಧಾಂತವನ್ನು ಮಂಡಿಸಿದ್ದರು. ಇದನ್ನು ಆಧರಿಸಿ ಸಾಮಾಜಿಕ ಮತ್ತು ಪರಿಸರ ವ್ಯವಸ್ಥೆಗಳನ್ನು 'ಸಿಸ್ಟಮ್' ಎಂದು ಪರಿಗಣಿಸಲು ಸಾಧ್ಯವಾಯಿತು. ಇದು ಇತರ ವಿಭಾಗಗಳಲ್ಲೂ ಮನ್ನಣೆ ಪಡೆಯಿತು. ಪ್ರಮುಖವಾಗಿ ಇದು ಯಾಂತ್ರಿಕ ಚೌಕಟ್ಟಿನಲ್ಲಿ ಮತ್ತು ಸೀಮಿತ ಊಹೆಗಳ ನೆಲೆಯಲ್ಲಿ ಪರಿಣಾಮಗಳು ಮತ್ತು ಗುಣಲಕ್ಷಣಗಳನ್ನು ಅಧ್ಯಯನ ಮಾಡುವ ಸಾಂಪ್ರದಾಯಿಕ ವೈಜ್ಞಾನಿಕ ವಿಧಾನಗಳ ಮಿತಿಗಳಿಗೆ ಪ್ರತಿಕ್ರಿಯೆಯಾಗಿ ತಲೆ ಎತ್ತಿದೆಯೆನ್ನಬಹುದು. ಸಿಸ್ಟಮ್ಸ್ ಸಿದ್ಧಾಂತವು ಈ ಸಾಂಪ್ರದಾಯಿಕ ಚೌಕಟ್ಟಿನಿಂದ ಆಚೆ ಅಧ್ಯಯನ ನಡೆಸಲು ಅವಕಾಶ ಮಾಡಿಕೊಟ್ಟಿತು.

ಜೇ ಫಾರೆಸ್ಟರ್ ಮತ್ತು ಡೊನೆಲ್ಲಾ ಮೆಡೋಸ್ ಇದನ್ನು ಸಾಮಾಜಿಕ ವ್ಯವಸ್ಥೆಗಳಿಗೆ ವ್ಯಾಪಕವಾಗಿ ಅಳವಡಿಸಿದರು. ಇದು 'ಸಿಸ್ಟಮ್ ಡೈನಾಮಿಕ್ಸ್' ಎಂದು ಹೆಸರಾಯಿತು.

ವ್ಯವಸ್ಥೆಯ ಭಾಗಗಳು ಹೇಗೆ ಒಂದರ ಜೊತೆ ಇನ್ನೊಂದು ಅವುಗಳ ಸ್ಥಳ ಮತ್ತು ಸಮಯದ ಸೀಮೆಯಲ್ಲಿ ಹೇಗೆ ಪರಸ್ಪರ ಸಂವಹನ ನಡೆಸುತ್ತವೆ ಎಂದು ಅರಿಯುವುದು ಪ್ರಮುಖವಾಗಿ ಸಿಸ್ಟಮ್ಸ್ ಸಿದ್ಧಾಂತ ವಿಧಾನ. ಈ ಭಾಗಗಳು ಜೀವಕೋಶಗಳು, ಅಣುಗಳು, ಜೀವಿಗಳು ಅಥವಾ ಜನರು ಆಗಬಹುದು. ಪರಸ್ಪರ ಸಂಪರ್ಕದಲ್ಲಿರುವ ಭಾಗಗಳ ನಡುವಿನ ಕ್ರಿಯಾತ್ಮಕ ಪರಸ್ಪರ ಕ್ರಿಯೆ–ಪ್ರಕ್ರಿಯೆಗಳಿಂದ ಕಾಲಾನಂತರದಲ್ಲಿ ಯಾವ ಬಗೆಯ ಪರಿಣಾಮಕಾರಿ ನಡವಳಿಕೆ ಹೊರಹೊಮ್ಮುವುದು ಎಂದು ತಿಳಿಯಲು ಸಾಧ್ಯವಾಗುತ್ತದೆ.

ಬಹು ಮುಖ್ಯವಾಗಿ, ಈ ಪರಸ್ಪರ ಕ್ರಿಯೆಗಳು ಎಲ್ಲ ಭಾಗಗಳ ಪ್ರತ್ಯೇಕ ಪರಿಣಾಮಗಳ ಮೊತ್ತಕ್ಕಿಂತ ದೊಡ್ಡದಾದ ಪರಿಣಾಮಗಳನ್ನು ಉಂಟುಮಾಡುತ್ತವೆ.

'ಕಾಂಪ್ಲೆಕ್ಸಿಟಿ ಸೈನ್ಸ್' ಅಥವಾ 'ಕಾಂಪ್ಲೆಕ್ಸಿಟಿ ಥಿಯರಿ' – 'ಕಾಂಪ್ಲೆಕ್ಸಿಟಿ ಸೈನ್ಸ್ ಸಿಸ್ಟಮ್ಸ್' ಸಿದ್ಧಾಂತದಿಂದ ಮೂಡಿ ಬಂದಿದೆ. ಸ್ವಯಂಸಂಘಟನೆ, ಹೊಂದಾಣಿಕೆ, ಕ್ರಿಯಾತ್ಮಕತೆ ಮತ್ತು ಅಭಿವ್ಯಕ್ತಿಗಳಿರುವ ಯಾವುದೇ ವ್ಯವಸ್ಥೆಯನ್ನು 'ಕಾಂಪ್ಲೆಕ್ಸ್ ಸಿಸ್ಟಮ್ಸ್' ಎಂದು ಪರಿಗಣಿಸಬಹುದು. ಇದು ನಮ್ಮ ಸಾಮಾಜಿಕ ಮತ್ತು ಪರಿಸರ ವ್ಯವಸ್ಥೆಗಳನ್ನು ಅರ್ಥೈಸಿಕೊಳ್ಳಲು ಸಮರ್ಪಕವಾಗಿದೆ. ಅವುಗಳಲ್ಲಿ ಗಮನಾರ್ಹವಾದುದು – ಸ್ಟಾಕ್‌ಗಳು ಮತ್ತು ಫ್ಲೋ (ಸಿಸ್ಟಮ್ ಡೈನಾಮಿಕ್ಸ್‌ನಲ್ಲಿರುವಂತೆ) ಅಥವಾ ಏಜೆಂಟ್-ಆಧಾರಿತ ಮಾಡೆಲ್‌ಗಳು. ಏಜೆಂಟ್-ಆಧಾರಿತ ಮಾಡೆಲ್‌ಗಳ ಮೂಲವು ಕೃತಕ ಬುದ್ಧಿಮತ್ತೆಯಲ್ಲಿದೆ. ಇವುಗಳನ್ನು ಆಧರಿಸಿ ನೈಜವಾದ ವ್ಯವಸ್ಥೆಗಳನ್ನು ಅನುಕರಿಸುವ ಮಾಡೆಲ್‌ಗಳನ್ನು ನಿರ್ಮಿಸಲು ಸಂಶೋಧಕರಿಗೆ ಅವಕಾಶವಾಗಿದೆ.

ಸಾಮಾಜಿಕ ವ್ಯವಸ್ಥೆಗಳಲ್ಲಿ ಐತಿಹಾಸಿಕ ಪರಿಣಾಮದ ಅವಲಂಬನೆಯ ಒಂದು ಶ್ರೇಷ್ಠ ಉದಾಹರಣೆಯೆಂದರೆ, ನಾವೆಲ್ಲ ಬಳಸುವ ಟೈಪ್ ರೈಟರ್. 'ಮೆಕ್ಯಾನಿಕಲ್' ಟೈಪ್ ರೈಟರ್ ಆವಿಷ್ಕಾರವಾದಾಗ ಇಂಗ್ಲಿಷ್‌ನಲ್ಲಿ ಟೈಪ್ ಮಾಡುವಾಗ ಜಾಮ್ ಆಗದಂತೆ ಅಕ್ಷರಗಳು ಬೇರೆ ಬಗೆಯಲ್ಲಿ ಜೋಡಿಸಬೇಕಾಯಿತು. ಇದೇ 'QWERTY ಕೀಬೋರ್ಡ್'. ಆದರೆ ಕಳೆದ ಮೂರು ದಶಕಗಳಲ್ಲಿ ನಾವು ಅಂತಹ ಯಾವುದೇ ಯಾಂತ್ರಿಕ ನಿರ್ಬಂಧಗಳನ್ನು ಹೊಂದಿರದ ಎಲೆಕ್ಟ್ರಾನಿಕ್ ಕೀಬೋರ್ಡ್‌ಗಳನ್ನು ಹೊಂದಿದ್ದೇವೆ. ಆದರೂ ಇನ್ನೂ ನಾವು QWERTY ಕೀಬೋರ್ಡ್‌ನ ಬಳಕೆಯನ್ನೇ ಮುಂದುವರಿಸಿದ್ದೇವೆ. ಪೂರ್ವಜ್ಞಾನದ ಪ್ರಭುತ್ವವು ಈ ಹಿಮ್ಮುಖ ಸ್ಥಿತಿಗೆ ಕಾರಣವಾಗುತ್ತದೆ. ಇದನ್ನೇ 'ಐತಿಹಾಸಿಕ ಪರಿಣಾಮದ ಅವಲಂಬನೆ'.

ಐತಿಹಾಸಿಕ ಪರಿಣಾಮದ ಅವಲಂಬನೆಗೆ ಇನ್ನೊಂದು ಉದಾಹರಣೆಯೆಂದರೆ, ಕೆಲವು ದೇಶಗಳಲ್ಲಿ ನಾವು ವಾಹನಗಳನ್ನು ಎಡ ಭಾಗದಲ್ಲಿ ಓಡಿಸುತ್ತೇವೆ. ಆದರೆ ಇನ್ನು ಕೆಲವು ದೇಶಗಳಲ್ಲಿ ಅವರು ಬಲಭಾಗದಲ್ಲಿ ಚಾಲನೆ ಮಾಡುತ್ತಾರೆ.

ಐತಿಹಾಸಿಕ ಪರಿಣಾಮದ ಅವಲಂಬನೆಯ ಅನೇಕ ಉದಾಹರಣೆಗಳನ್ನು ನಮ್ಮ ಸುತ್ತಲು ಕಾಣುತ್ತೇವೆ. ಜಾತಿಗಳ ವಿಕಾಸದ ಹಿಂದೆ 'ಐತಿಹಾಸಿಕ ಪರಿಣಾಮ'ದ ಪ್ರಭಾವವನ್ನು ಸಂಶೋಧಕರು ಗುರುತಿಸುತ್ತಾರೆ. ಇದೀಗ ಸಂಶೋಧಕರು ಈ ಸಿದ್ಧಾಂತವನ್ನು ಬಳಸಿಕೊಂಡು ಪರಿಸರದ ರಕ್ಷಣೆ–ಬಳಕೆಗಳ ನಡುವೆ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಜಾಗತಿಕ ಹವಾಮಾನ ಬದಲಾವಣೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಸಂದರ್ಭದಲ್ಲಿ, ವ್ಯವಸ್ಥೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಕುರಿತು ನಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಲು ಕೂಡ ಈ ಸಿದ್ಧಾಂತ ನೆರವಾದೀತು. ❖



ಸಾವನ್ನು ಓಡಿಸುವ ಸಂಜೀವನೀ ಯಂತ್ರ ಬಂದೀತೆ?



ಕೊಳ್ಳೇಗಾಲ ಶರ್ಮ

ನಮ್ಮ ಪುರಾಣಗಳಲ್ಲಿ ಶುಕ್ರಾಚಾರ್ಯರ ಕಥೆ ಬರುತ್ತದೆ. ಕಠಿಣ ತಪಸ್ಸಿನಿಂದ ಮಹಾಶಿವನನ್ನು ಒಲಿಸಿಕೊಂಡ ದಾನವರ ಗುರು ಶುಕ್ರಾಚಾರ್ಯ ಸಂಜೀವನೀ ಮಂತ್ರವನ್ನು ಶಿವನಿಂದ ಪಡೆಯುತ್ತಾನೆ. ದೇವತೆಗಳು ಕೊಂದ ತನ್ನ ಶಿಷ್ಯರಿಗೆ ಮರಳಿ ಜೀವ ಕೊಡುವುದು ಅವನ ಉದ್ದೇಶವಾಗಿರುತ್ತದೆ. ಕೊನೆಗೆ ಅದೇ ಮಂತ್ರದ ಪಠಣದಿಂದ ತಾನೇ ಸಾವನ್ನಪ್ಪುವಂತೆ ಆಗುತ್ತದೆ ಎನ್ನುವುದು ಕಥೆ. ರೋಚಕ ಕಥೆ. ಸಾವನ್ನು ಹಿಮ್ಮೆಟ್ಟಿಸಬಹುದು, ಅದು ಬರುವುದನ್ನು ತಡ ಮಾಡಬಹುದು, ಆದರೆ ಸತ್ತ ಜೀವಕ್ಕೆ ಮರಳಿ ಚೈತನ್ಯ ಕೊಡುವುದು ಸಾಧ್ಯವೇ? ಇಂತಹುದೊಂದು ಪ್ರಶ್ನೆಯನ್ನು ಇತ್ತೀಚೆಗೆ 'ನೇಚರ್' ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯೊಂದು ಮುಂದಿಟ್ಟಿದೆ. ಹಂದಿಯೊಂದು ಸತ್ತು ಒಂದು ಗಂಟೆಯಾದ ಮೇಲೆ ಅದರಲ್ಲಿರುವ ಹಲವು ಅಂಗಗಳಿಗೆ ಅಮೆರಿಕೆಯ ಯೇಲ್ ವೈದ್ಯಕೀಯ ಕಾಲೇಜಿನ ನರವಿಜ್ಞಾನಿ ನೆನಾದ್ ಸೆಸ್ತಾನ್ ಮತ್ತು ಸಂಗಡಿಗರು ಜೀವಕಳೆಯನ್ನು ಮರಳಿಸಿದ್ದಾರಂತೆ. ಇದು 'ಸಾವು' ಎನ್ನುವುದರ ವ್ಯಾಖ್ಯಾನವನ್ನು ಬದಲಿಸಲಿದೆಯಂತೆ.

ಸಾವು ಎಂದರೇನು – ಎನ್ನುವ ಪ್ರಶ್ನೆ ಬಹಳ ಗಹನವಾದದ್ದು. ಕಳೆದ ನೂರು, ನೂರೈವತ್ತು ವರ್ಷಗಳಲ್ಲಿ ಜೀವಿಗಳ ಬಗ್ಗೆ, ಹಾಗೂ ವೈದ್ಯಕೀಯದಲ್ಲಿ ನಡೆದ ಸಂಶೋಧನೆಗಳು ಜೀವಿಗಳ ಹುಟ್ಟು, ಮರಣದ ಬಗ್ಗೆ ಶತಮಾನಗಳಿಂದ ಇದ್ದಂತಹ ನಂಬಿಕೆಗಳನ್ನು ದೂರಗೊಳಿಸಿವೆ. ಹಾಗಿದ್ದೂ ಸಾವು ಎಂದರೇನು ಎನ್ನುವುದನ್ನು 'ಇದಮಿತ್ಥಂ' ಎಂದು ಹೇಳುವ ವೈದ್ಯರಿಲ್ಲ. ಅದಕ್ಕೆ ವಿವರಣೆ ಇಲ್ಲ. ಸುತ್ತಲಿನ ವಿದ್ಯಮಾನಗಳಿಗೆ ಸ್ಪಂದಿಸದಂತೆ ದೇಹ ನಿಷ್ಕ್ರಿಯವಾಗಿಬಿಡುವುದನ್ನೇ ಸಾವು ಎಂದು ಒಮ್ಮೆ ಹೇಳಲಾಗಿತ್ತು. ಆದರೆ ಅಂತಹ ವ್ಯಕ್ತಿಯಲ್ಲಿಯೂ ಜೀವ ಇರುತ್ತದೆ. ಅವನ ಅಂಗಗಳು ಇನ್ನೂ ಬದುಕಿರುತ್ತವೆ. ಅವಕಾಶ ದೊರಕಿದರೆ ಬೇರೆ ವ್ಯಕ್ತಿಯಲ್ಲಿ ಆ ಅಂಗಗಳು ಕಾರ್ಯನಿರ್ವಹಿಸಬಲ್ಲುವು ಎನ್ನುವ ಅರಿವು ಬಂದಿದೆ. ಜೊತೆಗೇ ಹಾಗೆ ನಿಶ್ಚಲ ಸ್ಥಿತಿಗೆ, ಅರ್ಥಾತ್ ಕೋಮಾವಸ್ಥೆಗೆ ಹೋದ ವ್ಯಕ್ತಿಯ ಅಂಗಗಳನ್ನು ದಾನ ಮಾಡುವ, ಅಗತ್ಯವಿರುವವರಿಗೆ ಕಸಿ ಮಾಡುವ ಪದ್ಧತಿಯೂ ಹೆಚ್ಚಾಗುತ್ತಿದೆ. ಇಂತಹ ಅಂಗಗಳನ್ನು ದೀರ್ಘ ಕಾಲ ಜೀವಂತವಾಗಿಡುವ ಪ್ರಯತ್ನದಲ್ಲಿ ತೊಡಗಿಕೊಂಡ ಸೆಸ್ತಾನ್ ತಂಡ, ಸತ್ತ ಹಂದಿಯ ಜೀವಕೋಶಗಳು ಮರಳಿ ಜೀವಕಳೆ ತೋರಬಲ್ಲುವು ಎಂದು ನಿರೂಪಿಸಿದೆ.

ವೈದ್ಯರು ಎರಡು ಬಗೆಯ ಸಾವನ್ನು ಗುರುತಿಸುತ್ತಾರೆ. ನಿಶ್ಚಲ ಸ್ಥಿತಿಗೆ ಹೋದ ವ್ಯಕ್ತಿಯನ್ನು 'ಮಿದುಳು-ಸತ್ತವರು' ಎಂದು ವೈದ್ಯರು ಹೇಳುವ ಪ್ರಕರಣಗಳೂ ಮೊದಲನೆಯ ವಿಧ. ಮಿದುಳಿಗೆ ನಾಲ್ಕೇ ನಾಲ್ಕು ನಿಮಿಷ ರಕ್ತ ಹರಿಯದಿದ್ದರೂ, ಅಲ್ಲಿನ ನರಕೋಶಗಳು ಸತ್ತು ಮಿದುಳಿನ ಕೆಲಸಗಳು ಸ್ಥಗಿತಗೊಳ್ಳುತ್ತವೆ; ಬ್ರೈನ್‌ಡೆಡ್ ಅಥವಾ ಮಿದುಳಿನ ಸಾವುಂಟಾಗುತ್ತದೆ. ಮಿದುಳಿನ ನರಕೋಶಗಳು ಚೈತನ್ಯಹೀನವಾಗಿದ್ದರ ಫಲ ಇದು. ಇಂತಹ ವ್ಯಕ್ತಿಗಳಲ್ಲಿ ರಕ್ತದ ಹರಿವು, ಹೃದಯದ ಚಟುವಟಿಕೆಗಳು ಸಾಮಾನ್ಯವಾಗಿರುತ್ತವೆಯಾದ್ದರಿಂದ ಅಂಗಗಳು ಸತ್ತಿರುವುದಿಲ್ಲ. ಆದರೆ ಇಂತಹವರು ಸ್ವತಃ ಆಹಾರವನ್ನು ಸೇವಿಸಲಾರರಾದ್ದರಿಂದ ಕೃತಕವಾಗಿ ಉಣಿಸಬೇಕಾಗುತ್ತದೆ. ಸದಾ ಕಾಲ ಐಸಿಯುವಿನಲ್ಲಿಯೇ ಇರಿಸಬೇಕಾಗುತ್ತದೆ. ಮಿದುಳನ್ನು ಚೇತರಿಸಲು ಅಸಾಧ್ಯ ಎನ್ನಿಸಿದಾಗ, ಸಂಬಂಧಿಗಳ ಒಪ್ಪಿಗೆಯ ಮೇರೆಗೆ ಆಹಾರ ನಿಲ್ಲಿಸಿ, ಉಸಿರಾಟ ಕಡಿಮೆಯಾಗಿ ತನ್ನಂತಾನೇ ರಕ್ತದ ಹರಿವು ನಿಲ್ಲುವಂತೆ ಮಾಡುತ್ತಾರೆ. ಸಾವು ಬರುತ್ತದೆ. ತಕ್ಷಣವೇ ಅಂಗಗಳನ್ನು ತೆಗೆದರೆ ಕಸಿ ಮಾಡಲು ಒದಗುವುದು.

ಎರಡನೆಯದು, ಹೃದಯದ ಹಾಗೂ ಶ್ವಾಸಕೋಶದ ಚಟುವಟಿಕೆಗಳು ನಿಂತು ರಕ್ತವೇ ಹರಿಯದೆ ಹೋಗುವುದು. ಇದರಿಂದಾಗಿ, ಪ್ರಾಣವಾಯು ಎನ್ನಿಸಿದ ಆಕ್ಸಿಜನ್ ಸರಬರಾಜು ಇಲ್ಲದಾಗಿ ಮಿದುಳಷ್ಟೆ ಅಲ್ಲ, ದೇಹದ ಇತರೆ ಅಂಗಗಳಲ್ಲಿನ ಜೀವಕೋಶಗಳೂ ಕ್ರಮೇಣ ಸಾಯುತ್ತವೆ. ವ್ಯಕ್ತಿ ಜೀವ ಕಳೆದುಕೊಳ್ಳುತ್ತಾನೆ. ಹೃದಯಾಘಾತವಾದ ನಂತರ ಆಗುವ ಸಾವು ಇದು. 'ಮಿದುಳು ಸತ್ತ'ವರಲ್ಲಿ ಬೇರೆ ಅಂಗಗಳು ಸತ್ತಿರದಿರಬಹುದು. ರಕ್ತದ ಸರಬರಾಜನ್ನು ಹಾಗೆಯೇ ಪೂರೈಸಿಕೊಂಡು ಅವನ್ನು ಜೀವಂತ ಉಳಿಸಿಕೊಳ್ಳಬಹುದು. ಅಂತಹ ಅಂಗಗಳನ್ನು ಇತರರಿಗೆ ಕಸಿ ಮಾಡಬಹುದು.

ಮಿದುಳು ಸತ್ತವರ ಅಂಗಗಳನ್ನು ದೀರ್ಘಕಾಲ ಉಳಿಸಿಕೊಳ್ಳುವುದು ಹೇಗೆ? ಇದಕ್ಕೆ ದೇಹದ ರಕ್ತನಾಳಗಳಲ್ಲಿ ಕೃತಕವಾಗಿ ರಕ್ತವನ್ನು ಹರಿಸುವ ಉಪಾಯಗಳನ್ನು ವೈದ್ಯರು ಕಂಡುಕೊಂಡಿದ್ದಾರೆ. ಅವರದ್ದೇ ರಕ್ತವನ್ನೋ, ಅಥವಾ ರಕ್ತ ಹಾಗೂ ರಕ್ತದಂತೆಯೇ ಪೋಷಕಾಂಶಗಳನ್ನು ಒದಗಿಸುವ ಕೃತಕ ದ್ರವವನ್ನೋ ದೇಹದೊಳಗೆ ಪಂಪು ಮಾಡಿ, ಹೊರತೆಗೆಯುತ್ತಾ ವಿವಿಧ ಅಂಗಗಳು ಸಾಯದಂತೆ ಕಾಪಾಡಲು ಯತ್ನಿಸುತ್ತಾರೆ. ಪರ್ಫ್ಯೂಶನ್ ತಂತ್ರ ಎನ್ನುವ ಈ ಉಪಾಯವನ್ನು ಬಳಸಿ ಅಮೆರಿಕವೊಂದರಲ್ಲಿಯೇ ಕಳೆದ ಮೂವತ್ತು ವರ್ಷಗಳಲ್ಲಿ ತೊಂಬತ್ತೈದು ಸಾವಿರ ಮಂದಿಯನ್ನು ಸಾವಿನ ದವಡೆಯಿಂದ ಬದುಕಿಸಲಾಗಿದೆ. ಇದು ದುಬಾರಿ ತಂತ್ರ. ಅಗ್ಗದ ತಂತ್ರವೆಂದರೆ ಅಂಗಗಳನ್ನು ಕಿತ್ತು ತೆಗೆದು, ಕೃತಕ ದ್ರವದಲ್ಲಿಟ್ಟು ಕಾಪಾಡುವುದು. ಆದರೆ ಇದನ್ನು ರಕ್ತದ ಹರಿವು ನಿಂತ ಎರಡರಿಂದ ಇಪ್ಪತ್ತು ನಿಮಿಷಗಳೊಳಗೆ ಮಾಡಬೇಕಾಗುತ್ತದೆ. ಅನಂತರ ಅಂಗಗಳನ್ನು ಶೈತ್ಯೀಕರಿಸಿ ಕಾಪಾಡಬೇಕಾಗುತ್ತದೆ.

ಸೆಸ್ತಾನ್ ತಂಡ ಇಪ್ಪತ್ತು ನಿಮಿಷವಲ್ಲ, ಒಂದು ಗಂಟೆ ಕಳೆದ ಮೇಲೂ ಹೊಸದೊಂದು ತಂತ್ರವನ್ನು ಬಳಸಿ ಅಂಗಗಳನ್ನು ಕಾಪಾಡಬಹುದೆನ್ನುವ ಆಸೆಯನ್ನು ಹುಟ್ಟಿಸಿದೆ. ಪರ್ಫ್ಯೂಶನ್ ತಂತ್ರವನ್ನು ಸುಧಾರಿಸುವ ನಿಟ್ಟಿನಲ್ಲಿ ಸೆಸ್ತಾನ್ ತಂಡ ಕೆಲವು ವರ್ಷಗಳ ಹಿಂದೆ ಹೊಸದೊಂದು ಯಂತ್ರವನ್ನು ಹುಟ್ಟು ಹಾಕಿತ್ತು. ಇವು ಮಿದುಳು ಸತ್ತವರಲ್ಲಿ ಅಂಗಗಳನ್ನು ಕಾದಿಡುವುದಕ್ಕಾಗಿ ಬಳಸಲಾಗುತ್ತಿತ್ತಾದರೂ, ಹೃದಯ ಹಾಗೂ ಶ್ವಾಸಕೋಶಗಳು ಸತ್ತು ಆಗಬಹುದಾದ ಸಾವಿನಿಂದ ವ್ಯಕ್ತಿಗಳನ್ನು ಉಳಿಸಲೂ ಇದನ್ನು ಬಳಸುವ ಉದ್ದೇಶವಿತ್ತು. ತಲೆಯನ್ನು ತುಂಡರಿಸಿ, ಕೇವಲ ತಲೆಗಷ್ಟೆ ಈ ಯಂತ್ರದಿಂದ ಪೋಷಣೆ ನೀಡಿ, ನರಕೋಶಗಳು ಉಳಿಯುತ್ತವೆಯೋ ಎಂದು ಕೆಲವು ವರ್ಷಗಳ ಹಿಂದೆ ಸೆಸ್ತಾನ್ ತಂಡ ಪರಿಶೀಲಿಸಿತ್ತು.

ಇದೀಗ ಹಂದಿಯೊಂದಕ್ಕೆ ಕೃತಕವಾಗಿ ಹೃದಯಾಘಾತ ಮಾಡಿ, ಅದು ಸತ್ತು ಒಂದು ಗಂಟೆಯಾದ ಹಂದಿಯ ವಿವಿಧ ಅಂಗಗಳನ್ನು 'ಆರ್ಗನ್-ಎಕ್ಸ್' ಎನ್ನುವ ತಮ್ಮ ಯಂತ್ರದ ಮೂಲಕ ಕಾಪಾಡಲು ಈ ತಂಡ ಪ್ರಯತ್ನಿಸಿದೆ. ಈ ಯಂತ್ರ ಅಥವಾ ತಂತ್ರ ಕೃತಕವಾದೊಂದು ದ್ರವವನ್ನು ನಿಯತವಾಗಿ, ಹೃದಯ ಮಾಡಿದಂತೆಯೇ, ಅಂಗಗಳೊಳಗೆ ಪಂಪು ಮಾಡುತ್ತದೆ. ಈ ದ್ರವವೂ ವಿಶೇಷ. ಕೇವಲ ಹೀಮೋಗ್ಲೋಬಿನ್ ಅಣುವಷ್ಟೆ ಇರುವ, ಜೀವಕೋಶಗಳೇ ಇಲ್ಲದ, ಶಬ್ದಾತೀತ ತರಂಗಗಳಿಗೆ ಸ್ಪಂದಿಸುವಂತಹ ವಿಶೇಷ ದ್ರವ. ಇದು ಸತ್ತ ಜೀವಕೋಶಗಳು ಊದಿಕೊಳ್ಳದಂತೆ ನೋಡಿಕೊಳ್ಳುತ್ತದೆಯಂತೆ. ಇಂತಹ ದ್ರವವನ್ನು ಅಂಗಗಳೊಳಗೆ ಹರಿಸುತ್ತಾ, ಅಂಗಗಳಲ್ಲಿನ ಜೀವಕೋಶಗಳ ಚಟುವಟಿಕೆಯನ್ನು ಎಂ.ಆರ್.ಐ. ತಂತ್ರ ಹಾಗೂ ಇತರೆ ಪರೀಕ್ಷೆಗಳಿಗೆ ಒಳಪಡಿಸಿದ್ದಾರೆ. ಕೃತಕವಾಗಿ ಹೃದಯಾಘಾತ ಮಾಡಿದ ಇನ್ನೊಂದು ಹಂದಿಯ ಎಲ್ಲ ಅಂಗಗಳನ್ನೂ ಒಂದು ಗಂಟೆಯ ನಂತರ ಗಮನಿಸಿದ್ದಾರೆ. ಹಾಗೆಯೇ ಇದೀಗ ಬಳಸುವ ಪರ್ಫ್ಯೂಶನ್ ತಂತ್ರಗಳನ್ನೂ ಬಳಸಿ ಕಾದಿಟ್ಟ ಹಂದಿಯ ಅಂಗಗಳನ್ನೂ ಆರ್ಗನ್ ಎಕ್ಸ್ ಬಳಸಿದ ಹಂದಿಗಳದ್ದರ ಜೊತೆಗೆ ವಿವಿಧ ಸಮಯಗಳಲ್ಲಿ ಅಧ್ಯಯನ ಮಾಡಿದ್ದಾರೆ.

ಸತ್ತು ಒಂದು ಗಂಟೆಯಾದ ಮೇಲೆ ಹಾಗೆಯೇ ಇಟ್ಟ ಅಂಗಗಳಲ್ಲಿನ ಜೀವಕೋಶಗಳ ವಿದ್ಯುತ್ ಚಟುವಟಿಕೆಗಳು ಕುಗ್ಗಿದ್ದುವು. ಅವುಗಳೊಳಗಿನ ಸೂಕ್ಷ್ಮ ರಕ್ತನಾಳಗಳಲ್ಲಿ ಹರಿವು ನಿಂತಿತ್ತು. ಅಲ್ಲಲ್ಲಿ ಮಿದುಳಿನ ಜೀವಕೋಶಗಳು ಸಾಯುತ್ತಿದ್ದುವು. ಸತ್ತ ಜೀವಕೋಶಗಳ ಸುತ್ತಲೂ ಊತ ಕಾಣಿಸುತ್ತಿತ್ತು. ಕೆಲವೆಡೆ ರಕ್ತನಾಳಗಳು ಒಡೆದು ರಕ್ತಸ್ರಾವ ಕಾಣಿಸುತ್ತಿತ್ತು. ಸಾವಿನ ಈ ಎಲ್ಲ ಲಕ್ಷಣಗಳೂ ಕೂಡ ಆರ್ಗನ್ ಎಕ್ಸ್ ಬಳಸಿದ ಹಂದಿಯ ಅಂಗಗಳಲ್ಲಿ ಕಡಿಮೆಯಾಗುತ್ತ ಬಂತೆಂದು ಇವರು ವರದಿ ಮಾಡಿದ್ದಾರೆ. ಅಂದರೆ ರಕ್ತದ ಹರಿವು ನಿಂತು ಸತ್ತ ಅಂಗಕ್ಕೆ ಪುನಶ್ಚೇತನಗೊಳ್ಳುವ ಸಾಮರ್ಥ್ಯ ಇದೆ ಎನ್ನುವುದು ಸೆಸ್ತಾನ್ ತಂಡದ ತೀರ್ಮಾನ. ಈ ಹಿಂದೆ ಮಿದುಳಿನಲ್ಲಿಯೂ ಇದೇ ರೀತಿ ಚಟುವಟಿಕೆಗಳನ್ನು ಉಳಿಸಿಕೊಳ್ಳಬಹುದು ಎಂದು ಸೆಸ್ತಾನ್ ತಂಡ ತೋರಿಸಿತ್ತು. ಆದರೆ ಇದೀಗ ಸತ್ತ ಒಂದು ಗಂಟೆಯ ನಂತರವೂ ಅಂಗಗಳನ್ನು ಪುನಶ್ಚೇತನಗೊಳಿಸಬಹುದು ಎನ್ನುವುದು ವಿಶೇಷ.

ಇದರರ್ಥ ಇಷ್ಟೆ. ನಾವೀಗ ಸಾವು ಎಂದು ಹೇಳುವ ವಿದ್ಯಮಾನ ಶಾಶ್ವತವಿರಲಿಕ್ಕಿಲ್ಲ. ಅದನ್ನು ಹಿನ್ನಡೆಸಬಹುದು. ಸತ್ತ ಜೀವಕೋಶಗಳಲ್ಲಿ ಮರಳಿ ಚೈತನ್ಯವನ್ನು ತುಂಬಬಹುದು. ಆದರೆ ಇದು ಸತ್ತ ವ್ಯಕ್ತಿಯನ್ನು ಮರಳಿ ಓಡಾಡುವಂತೆ ಮಾಡೀತೇ? ಶುಕ್ರಾಚಾರ್ಯರ ಸಂಜೀವನೀ ಮಂತ್ರದಂತೆ ಅಂತಹುದನ್ನು ಮಾಡುವ ಯಂತ್ರ ಅಥವಾ ತಂತ್ರ ಸಾಧ್ಯವೋ? ಗೊತ್ತಿಲ್ಲ. ಸದ್ಯಕ್ಕೆ ಸತ್ತ ಪ್ರಾಣಿಗಳ ಅಂಗಗಳನ್ನು ಮರುಬಳಕೆಗೆ ಯೋಗ್ಯವಾಗುವಂತೆ ಕಾದಿಡುವ ತಂತ್ರವೊಂದು ಸಿಕ್ಕಿದೆ ಎನ್ನಬಹುದಷ್ಟೆ. ❖

ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

ನೀರಿನ ಮಡಕೆ ಮುಟ್ಟಿದ್ದಕ್ಕೆ ಥಳಿತಕ್ಕೊಳಗಾಗಿ ಬಾಲಕ ಮೃತಪಟ್ಟ ಪ್ರಕರಣ

ಕೋಟ, ರಾಜಸ್ಥಾನ (ಪಿಟಿಐ): ಕುಡಿಯುವ ನೀರಿನ ಮಡಕೆ ಮುಟ್ಟಿದ್ದಕ್ಕಾಗಿ ದಲಿತ ಬಾಲಕನೊಬ್ಬ ಶಿಕ್ಷಕರಿಂದ ಥಳಿತಕ್ಕೊಳಗಾಗಿ ಮೃತಪಟ್ಟಿದ್ದನ್ನು ಖಂಡಿಸಿ ರಾಜಸ್ಥಾನದ ಬಾರಾನ್ ನಗರಸಭೆಯ 12 ಮಂದಿ ಕಾಂಗ್ರೆಸ್ ಸದಸ್ಯರು ಮಂಗಳವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಶಾಸಕ ಪನಾ ಚಂದ್ ಮೇಘವಾಲ್ ಅವರು ಸೋಮವಾರ ರಾಜೀನಾಮೆ ನೀಡಿದ್ದರು. ಇದರ ಬೆನ್ನಲ್ಲೇ ನಗರಸಭೆ ಸದಸ್ಯರೂ ಕೂಡ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ರಾಜೀನಾಮೆ ಪತ್ರಗಳನ್ನು ರವಾನಿಸಿದ್ದಾರೆ.

'ಶಾಸಕ ಪನಾ ಚಂದ್ ನಿರ್ಧಾರವನ್ನು ನಾವು ಸ್ವಾಗತಿಸುತ್ತೇವೆ. ದಲಿತರ ಹಿತ ಕಾಯಲು ರಾಜ್ಯ ಸರ್ಕಾರ ವಿಫಲವಾಗಿದೆ. ಹೀಗಾಗಿ ನಾವೂ ರಾಜೀನಾಮೆ ಹಾದಿ ತುಳಿದಿದ್ದೇವೆ' ಎಂದು 29ನೇ ವಾರ್ಡ್‌ನ ಸದಸ್ಯ ಯೋಗೇಂದ್ರ ಮೆಹ್ತಾ ಹೇಳಿದ್ದಾರೆ.

ಕಾಂಗ್ರೆಸ್‌ನ 25 ಸದಸ್ಯರ ಪೈಕಿ ರೋಹಿತಾಶ್ವ ಸಕ್ಸೇನಾ, ರಾಜಾರಾಮ್ ಮೀನಾ, ರೇಖಾ ಮೀನಾ, ಲೀಲಾಧರ್ ನಗರ್, ಹರಿರಾಜ್ ಏರ್ವಾಲ, ಪಿಯೂಷ್ ಸೋನಿ, ಊರ್ವಶಿ ಮೇಘವಾಲ್, ಯಶವಂತ ಯಾದವ್, ಅನ್ವರ್ ಅಲಿ, ಜ್ಯೋತಿ ಜಾತವ್ ಮತ್ತು ಮಯಂಕ್ ಮಥೋಡಿಯಾ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

ರಾಜೀನಾಮೆ ಪತ್ರದ ಪ್ರತಿಯನ್ನು ಕೋಟ ವಿಭಾಗೀಯ ಆಯುಕ್ತರಿಗೆ ಬುಧವಾರ ಸಲ್ಲಿಸುವುದಾಗಿ ಮೆಹ್ತಾ ತಿಳಿಸಿದ್ದಾರೆ.

ಶಾಸಕ ಗರ್ಗ್ ಹೇಳಿಕೆ: 'ಬಾಲಕನು ಮೇಘವಾಲ್ ಸಮುದಾಯಕ್ಕೆ ಸೇರಿದವನು. ಕುಡಿಯುವ ನೀರಿನ ಮಡಕೆ ಮುಟ್ಟಿದ್ದಕ್ಕಾಗಿಯೇ ಶಿಕ್ಷಕರು ಆತನಿಗೆ ಥಳಿಸಿದ್ದಾರೆ ಎಂಬುದು ಅನುಮಾನಕ್ಕೆ ಎಡೆಮಾಡಿಕೊಡುವಂತಿದೆ. ಪ್ರಕರಣದ ತನಿಖೆ ಪೂರ್ಣಗೊಂಡ ನಂತರ ಘಟನೆಯ ನೈಜ ಕಾರಣ ಬಹಿರಂಗವಾಗಲಿದೆ' ಎಂದು ಜಲೋರ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಜೋಗೇಶ್ವರ್ ಗರ್ಗ್ ಅವರು ಹೇಳಿದ್ದಾರೆ.

ರಾಜಸ್ಥಾನದ ಉಪಮುಖ್ಯಮಂತ್ರಿ ಸಚಿನ್ ಪೈಲಟ್, 'ಇಂತಹ ಘಟನೆಗಳು ಖಂಡನಾರ್ಹವಾದುವು. ಇವುಗಳಿಗೆ ಕಡಿವಾಣ ಹಾಕುವುದು ಅತ್ಯಗತ್ಯ. ಆರೋಪಿಗಳ ವಿರುದ್ಧ ಕಾನೂನಿನಡಿ ಕ್ರಮ ಕೈಗೊಂಡರೆ ಸಾಲದು. ನಾವು ನೊಂದವರ ಜೊತೆಗೆ ಇದ್ದೇವೆ ಎಂಬ ಸಂದೇಶ ರವಾನಿಸಬೇಕು. ಆ ಮೂಲಕ ದಲಿತ ಸಮುದಾಯದವರ ನಂಬಿಕೆ ಗಳಿಸಬೇಕು. ಹೀಗಾಗಿ ಬಾಲಕನ ಕುಟುಂಬದವರನ್ನು ಭೇಟಿಯಾಗುತ್ತಿದ್ದೇನೆ' ಎಂದು ಜೋಧಪುರದಲ್ಲಿ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ಕುಟುಂಬಕ್ಕೆ ₹20 ಲಕ್ಷ ನೆರವು

ಜೈಪುರ (ಪಿಟಿಐ): ಮೃತ ಇಂದ್ರ ಮೇಘವಾಲ್ ಕುಟುಂಬಕ್ಕೆ ರಾಜಸ್ಥಾನ ಕಾಂಗ್ರೆಸ್ ಮಂಗಳವಾರ ₹20 ಲಕ್ಷ ಪರಿಹಾರ ಪ್ರಕಟಿಸಿದೆ.

ಸಚಿವರಾದ ಮಮತಾ ಭೂಪೇಶ್, ಭಜನ್‌ಲಾಲ್ ಜಾತವ್ ಮತ್ತು ಗೋವಿಂದ ರಾಮ್ ಮೇಘವಾಲ್ ಅವರೊಂದಿಗೆ ಸಂತ್ರಸ್ತರ ಮನೆಗೆ ಭೇಟಿ ನೀಡಿದ್ದ ರಾಜಸ್ಥಾನ ಕಾಂಗ್ರೆಸ್ ಘಟಕದ ಅಧ್ಯಕ್ಷ ಗೋವಿಂದ ಸಿಂಗ್ ದೊತಾಸ್ರಾ ಅವರು ಪಕ್ಷದ ವತಿಯಿಂದ ₹20 ಲಕ್ಷ ಪರಿಹಾರ ನೀಡುವುದಾಗಿ ತಿಳಿಸಿದ್ದಾರೆ.

ಆರೋಪಿ ವಿರುದ್ಧ ಕಠಿಣ ಕ್ರಮ:ಆಗ್ರಹ

ನವದೆಹಲಿ (ಪಿಟಿಐ): ಪ್ರಕರಣದ ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ ರಾಷ್ಟ್ರೀಯ ಆಯೋಗ (ಎನ್‌ಸಿಪಿಸಿಆರ್) ರಾಜಸ್ಥಾನ ಸರ್ಕಾರಕ್ಕೆ ಆಗ್ರಹಿಸಿದೆ.

ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಪತ್ರ ಬರೆದಿರುವ ಎನ್‌ಸಿಪಿಸಿಆರ್, 'ಪ್ರಕರಣವು ಗಂಭೀರ ಸ್ವರೂಪದ್ದಾಗಿದೆ. ಇದಕ್ಕೆ ಸಂಬಂಧಿಸಿದ ಎಫ್‌ಐಆರ್ ಪ್ರತಿ, ಆರೋಪಿ ವಿರುದ್ಧ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳ ಕುರಿತ ವರದಿಯನ್ನು ಒಂದು ವಾರದೊಳಗೆ ತನಗೆ ಸಲ್ಲಿಸಬೇಕು' ಎಂದು ಸೂಚಿಸಿದೆ.

ಹಿರಿಯ ನಾಗರಿಕರಿಗೆ ಒಡನಾಟ ಸೇವೆಗೆ ಟಾಟಾ ಸಮೂಹ ಒತ್ತು

ನವೋದ್ಯಮದಲ್ಲಿ ಹೂಡಿಕೆ: ರತನ್

ಮುಂಬೈ (ಪಿಟಿಐ): ಹಿರಿಯ ನಾಗರಿಕರಿಗೆ ಒಡನಾಟ ಸೇವೆ ಒದಗಿಸುವ ನವೋದ್ಯಮಗಳ ಮೇಲೆ ಬಂಡವಾಳ ಹೂಡಲಾಗುವುದು ಎಂದು ಉದ್ಯಮಿ ರತನ್ ಟಾಟಾ ಮಂಗಳವಾರ ಪ್ರಕಟಿಸಿದರು.

ಟಾಟಾ ಸಮೂಹದಿಂದ ನಿವೃತ್ತಿ ಪಡೆದ ಬಳಿಕ ರತನ್ ಟಾಟಾ ಅವರು ನವೋದ್ಯಮಗಳಿಗೆ ಉತ್ತೇಜನವನ್ನು ನೀಡುವ ಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ.

ಇದುವರೆಗೂ 50 ನವೋದ್ಯಮಗಳ ಮೇಲೆ ಅವರು ಬಂಡವಾಳ ಹೂಡಿಕೆ ಮಾಡಿದ್ದಾರೆ.

ಈಗ ಹಿರಿಯ ನಾಗರಿಕರಿಗೆ ಒಡನಾಟ ಸೇವೆ ಒದಗಿಸುವ ನವೋದ್ಯಮಗಳ ಮೇಲೆ ಟಾಟಾ ಸಮೂಹದ ಶಂತನು ನಾಯ್ಡು ಹೂಡಿಕೆ ಮಾಡುವರು. 33 ವರ್ಷದ ನಾಯ್ಡು, ಟಾಟಾ ಕಚೇರಿಯಲ್ಲಿ ಪ್ರಧಾನ ವ್ಯವಸ್ಥಾಪಕರಾಗಿದ್ದು, ರತನ್ ಟಾಟಾ ಅವರಿಗೆ ನೆರವಾಗಿ 2018ರಿಂದಲೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಒಡನಾಟ ಬೇಕು ಎನ್ನಿಸುವಂತೆ ಏಕಾಂಗಿಯಾಗಿ ಇರಬೇಕಾದ ಕಾಲ ಬರುವವರೆಗೂ ಏಕಾಂಗಿತನದ ಪರಿವೆ



ಇರುವುದಿಲ್ಲ ಎಂದು ಪ್ರತಿಕ್ರಿಯಿಸಿದ ರತನ್ ಟಾಟಾ ಅವರು, ಹೊಸ ರೀತಿಯ ನವೋದ್ಯಮದಲ್ಲಿ ಹೂಡಿಕೆ ಮಾಡುವ ನಾಯ್ಡು ಅವರ ನಿರ್ಧಾರಕ್ಕೆ ಮೆಚ್ಚುಗೆ ಸೂಚಿಸಿದರು.

'ವಯಸ್ಸಾಗುವವರೆಗೂ ಯಾರೊಬ್ಬರು ಅಂತಹ ಸ್ಥಿತಿಯ ಬಗ್ಗೆ ಚಿಂತನೆ ಮಾಡುವುದಿಲ್ಲ. ಆ ಸಂದರ್ಭದಲ್ಲಿ ಒಡನಾಟ ಒದಗಿಸುವುದು ಸವಾಲಿನ ಕೆಲಸ. ಆದರೆ, ನಾವು ಹೇಗೋ ಆಗುತ್ತದೆ ಎಂಬಂತೆ ಪರಿಗಣಿಸಿದ್ದೇವೆ' ಎಂದು ಪ್ರತಿಕ್ರಿಯಿಸಿದರು.

ಪ್ರಸ್ತುತ ಒಂದು ಅಂದಾಜಿನ ಪ್ರಕಾರ, 1.5 ಕೋಟಿ ಹಿರಿಯ ನಾಗರಿಕರಿದ್ದಾರೆ. ಹೊಸ ನವೋದ್ಯಮಕ್ಕೆ ಉತ್ತಮ ಅವಕಾಶಗಳಿವೆ ಎಂದು ಅಭಿಪ್ರಾಯಪಟ್ಟರು.

ದೆಹಲಿ: ಕೋವಿಡ್ ಹೆಚ್ಚಳ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಕೋವಿಡ್–19 ಏರುಗತಿಯಲ್ಲಿದ್ದು, ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗುತ್ತಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಆಸ್ಪತ್ರೆಗೆ ದಾಖಲಾಗುತ್ತಿರುವವರ ಪೈಕಿ ಶೇ 90ರಷ್ಟು ಮಂದಿ ಕೋವಿಡ್ ಲಸಿಕೆಯ ಎರಡು ಡೋಸ್ ಪಡೆದವರು. ಶೇ 10ರಷ್ಟು ಮಂದಿ ಮುನ್ನೆಚ್ಚರಿಕಾ ಡೋಸ್ ಪಡೆದವರು ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ತಿಳಿಸಿದ್ದಾರೆ.

'ಮುನ್ನೆಚ್ಚರಿಕಾ ಡೋಸ್ ಪಡೆದವರು ಇತರರಿಗಿಂತ ಹೆಚ್ಚು ಸುರಕ್ಷಿತ ಎಂಬುದನ್ನು ಕಂಡುಕೊಳ್ಳಲಾಗಿದೆ. ಹೀಗಾಗಿ ಮುನ್ನೆಚ್ಚರಿಕೆ ಲಸಿಕಾ ಡೋಸ್ ನೀಡುವ ಕಾರ್ಯ ಚುರುಕುಗೊಳಿಸಲಾಗುವುದು' ಎಂದು ಅವರು ಹೇಳಿದ್ದಾರೆ.

ಮಂಗಳವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ತಾಸಿನಲ್ಲಿ 1,227 ಜನರಲ್ಲಿ ಹೊಸದಾಗಿ ಕೋವಿಡ್–19 ದೃಢಪಟ್ಟಿದ್ದು, ಎಂಟು ಜನರು ಮೃತಪಟ್ಟಿದ್ದಾರೆ. ಕಳೆದ 12 ದಿನಗಳಲ್ಲಿ ನಿತ್ಯ 2000ಕ್ಕೂ ಹೆಚ್ಚು ಹೊಸ ಪ್ರಕರಣಗಳು ದೆಹಲಿಯಲ್ಲಿ ದಾಖಲಾಗಿವೆ ಎಂದು ಆರೋಗ್ಯ ಸಚಿವಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಕೋವಿಡ್ ಪ್ರಕರಣಗಳ ಪಾಸಿಟಿವಿಟಿ ದರವೂ ಹೆಚ್ಚಾಗುತ್ತಿದ್ದು, ಹಿಂದೆ ಸೋಂಕಿಗೆ ತುತ್ತಾದವರು ಮತ್ತೆ ಸೋಂಕಿಗೆ ತುತ್ತಾಗುತ್ತಿದ್ದಾರೆ. ಸಾಂಕ್ರಾಮಿಕ ರೋಗ ಹೋಗಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ' ಎಂದು ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ತಿಳಿಸಿದ್ದಾರೆ.

'ಎಂಎಸ್‌ಪಿ ಸಭೆಗೆ ಹಾಜರಾಗಲ್ಲ'

ನವದೆಹಲಿ (ಪಿಟಿಐ): 'ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ಕುರಿತ ಸಮಿತಿ ಮುಂದಿನವಾರ (ಆ.22 ರಂದು) ಕರೆದಿರುವ ಸಭೆಗೆ ಹಾಜರಾಗಲ್ಲ. ರೈತ ವಿರೋಧಿ ಸಮಿತಿ ತಿರಸ್ಕರಿಸಿದ್ದೇವೆ' ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ನಾಯಕರು ಹೇಳಿದ್ದಾರೆ.

ನವದೆಹಲಿಯ ರಾಷ್ಟ್ರೀಯ ಕೃಷಿ ವಿಜ್ಞಾನ ಸಂಕೀರ್ಣದಲ್ಲಿ (ಎನ್‌ಎಎಸ್‌ಸಿ) ಸಮಿತಿಯ ಮೊದಲ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಗುರೂಜಿ ವೇಷದಲ್ಲಿ ಕ್ರಿಕೆಟಿಗ ಧೋನಿ



ಬೆಂಗಳೂರು: ಮೈಸೂರ್ ದೀಪ್ ಪರ್ಫ್ಯೂಮರಿ ಹೌಸ್ (ಎಂಡಿಪಿಎಚ್) ಕಂಪನಿಯ ಬ್ರ್ಯಾಂಡ್ ಆಗಿರುವ 'ಜೆಡ್ ಬ್ಲ್ಯಾಕ್' ಅಗರಬತ್ತಿಯ ಟಿ.ವಿ. ಜಾಹೀರಾತಿನಲ್ಲಿ ಮಾಜಿ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಗುರೂಜಿಯ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ.

ಧೋನಿ ಅವರು ಜೆಡ್ ಬ್ಲ್ಯಾಕ್ 3ಇನ್1 ಅಗರಬತ್ತಿ ಬ್ರ್ಯಾಂಡ್ ಅನ್ನು ಟಿ.ವಿ., ಮುದ್ರಣ, ಸಾಮಾಜಿಕ ಜಾಲತಾಣ ಮಾಧ್ಯಮಗಳ ಮೂಲಕ ಸತತ ಐದು ವರ್ಷಗಳಿಂದ ಅನುಮೋದಿಸಿಕೊಂಡು ಬಂದಿದ್ದಾರೆ. ಈ ಅವಧಿಯಲ್ಲಿ ಕಂಪನಿಯ ಜನಪ್ರಿಯತೆಯು ಜಗತ್ತಿನ ಎಲ್ಲೆಡೆ ಹೆಚ್ಚಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಧೋನಿ ಅವರು ಕ್ರಿಕೆಟ್ ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಗೌರವ ಸಂಪಾದಿಸಿದವರಲ್ಲಿ ಒಬ್ಬರು. ಕ್ರಿಕೆಟಿಗರಾಗಲು ಬಯಸುವವರಿಗೆ ಧೋನಿ ಮಾದರಿ' ಎಂದು ಜೆಡ್ ಬ್ಲ್ಯಾಕ್ ನಿರ್ದೇಶಕ ಅಂಕಿತ್ ಅಗರ್ವಾಲ್ ತಿಳಿಸಿದ್ದಾರೆ.

ಬಾಬ್ಬಿ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): ಸ್ಪೈಸ್‌ಜೆಟ್ ವಿಮಾನದ ಒಳಗೆ ಸಿಗರೆಟ್ ಹೊತ್ತಿಸಿದ ಸಾಮಾಜಿಕ ಜಾಲತಾಣ 'ಇನ್‌ಫ್ಲುಯೆನ್ಸರ್' ಬಾಬ್ಬಿ ಕಟಾರಿಯ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

2022ರ ಜನವರಿಯಲ್ಲಿ ಕಟಾರಿಯ ದುಬೈನಿಂದ ದೆಹಲಿಗೆ ಪ್ರಯಾಣಿಸುವಾಗ ನಿಯಮ ಉಲ್ಲಂಘಿಸಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




❦ ಸುಭಾಷಿತ ❦

ತುಕ್ಕು ಹಿಡಿದು ಹೋಗಬೇಡ, ತೇದು ಹೋಗು.
-ಸರ್ ಎಂ.ವಿಶ್ವೇಶ್ವರಯ್ಯ

ವರವರ ರಾವ್‌ಗೆ ಕೊನೆಗೂ ಜಾಮೀನು ವಿಳಂಬವಾದರೂ ಸಮಾಧಾನ ತಂದ ಕ್ರಮ

ಭೀಮಾ- ಕೋರೆಗಾಂವ್ ಪ್ರಕರಣದ ಪ್ರಮುಖ ಆರೋಪಿ, 82 ವರ್ಷ ವಯಸ್ಸಿನ ಕವಿ, ಚಳವಳಿಗಾರ ವರವರ ರಾವ್ ಅವರಿಗೆ ಕೊನೆಗೂ ಸುಪ್ರೀಂ ಕೋರ್ಟ್‌ನಿಂದ ಶಾಶ್ವತ ಜಾಮೀನು ಸಿಕ್ಕಿದೆ. ಈ ಜಾಮೀನನ್ನು ಪಡೆಯಲು ಸುದೀರ್ಘ ಹಾಗೂ ಅಷ್ಟೇ ಕಠಿಣವಾದ ಕಾನೂನು ಹೋರಾಟವನ್ನೇ ಅವರು ನಡೆಸಬೇಕಾಯಿತು. 2018ರಲ್ಲಿ ಅವರನ್ನು ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯಡಿ (ಯುಎಪಿಎ) ಬಂಧಿಸಲಾಗಿತ್ತು ಮತ್ತು 2021ರಲ್ಲಿ ಅವರಿಗೆ ವೈದ್ಯಕೀಯ ನೆಲೆಯಲ್ಲಿ ಜಾಮೀನನ್ನು ನೀಡಲಾಗಿತ್ತು. ರಾವ್ ಅವರ ಆರೋಗ್ಯದ ಸ್ಥಿತಿಯನ್ನು ನೋಡಿಕೊಂಡು ಕಾಲಕಾಲಕ್ಕೆ ಜಾಮೀನು ಅವಧಿಯನ್ನು ವಿಸ್ತರಿಸುತ್ತಾ ಬರಲಾಗಿತ್ತು. ಈಗ, ಸುಪ್ರೀಂ ಕೋರ್ಟ್ ಕೆಲವು ಷರತ್ತುಗಳನ್ನು ವಿಧಿಸಿ ಶಾಶ್ವತ ಜಾಮೀನನ್ನು ಮಂಜೂರು ಮಾಡಿದೆ. 'ಜಾಮೀನು ಮಂಜೂರು ಮಾಡಲು ವಯಸ್ಸು ಮಾನದಂಡವಾಗಬಾರದು ಮತ್ತು ರಾವ್ ಅವರು ಯಾವುದೇ ಗಂಭೀರವಾದ ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿಲ್ಲ' ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಾದಿಸಿತ್ತು. ಆದರೆ, ಈ ವಾದವನ್ನು ಕೋರ್ಟ್ ಪುರಸ್ಕರಿಸಿಲ್ಲ. ಇದೇ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯಾಗಿದ್ದ, ಎಂಬತ್ತು ವರ್ಷಕ್ಕಿಂತ ಹೆಚ್ಚಿನ ಪ್ರಾಯದ ಹಿರೀಕರಾಗಿದ್ದ ಮತ್ತು ಬುಡಕಟ್ಟು ಹಕ್ಕುಗಳ ಹೋರಾಟಗಾರರೂ ಆಗಿದ್ದ ಸ್ಟ್ಯಾನ್ ಸ್ವಾಮಿ ಅವರು ಜಾಮೀನಿನ ನಿರೀಕ್ಷೆಯಲ್ಲಿಯೇ ಕಳೆದ ವರ್ಷದ ಜುಲೈನಲ್ಲಿ ಜೈಲಿನಲ್ಲೇ ಕೊನೆಯುಸಿರು ಎಳೆದಿದ್ದರು.



ಜಾಮೀನು ಪಡೆಯುವ ಪ್ರಕ್ರಿಯೆಯೇ ಹಲವರ ಪಾಲಿಗೆ ಶಿಕ್ಷೆಯಾಗಿ ಪರಿಣಮಿಸುತ್ತಿದೆ

ಜಾಮೀನು ಎನ್ನುವುದು ಯಾವುದೇ ಆರೋಪಿಯ ಸಹಜ ಹಕ್ಕು ಎಂದೇ ಪರಿಗಣಿತ. 'ಅನಿವಾರ್ಯ ಸಂದರ್ಭ ಹೊರತುಪಡಿಸಿ ಮಿಕ್ಕೆಲ್ಲ ಪ್ರಕರಣಗಳಲ್ಲಿ ಜಾಮೀನು ನೀಡುವುದೇ ಆದ್ಯತೆಯಾಗಬೇಕು' ಎಂದು ಸುಪ್ರೀಂ ಕೋರ್ಟ್‌ನ ಸ್ಪಷ್ಟ ಸೂಚನೆ ಇದ್ದರೂ ವಿವಿಧ ಕಾರಣಗಳಿಗಾಗಿ ಸಾಮಾನ್ಯ ಪ್ರಕರಣಗಳಲ್ಲೂ ಜಾಮೀನು ಪಡೆಯುವುದು ಕಠಿಣವಾಗಿರುವುದು ವಾಸ್ತವ. ಅದರಲ್ಲಿಯೂ ಯುಎಪಿಎ ಅಡಿ ಪ್ರಕರಣ ಎದುರಿಸುವವರು ಜಾಮೀನು ಪಡೆಯುವುದು ಹೆಚ್ಚು-ಕಡಿಮೆ ಅಸಾಧ್ಯ ಎನ್ನುವಂತಹ ವಾತಾವರಣವಿದೆ. ಸ್ಟ್ಯಾನ್ ಸ್ವಾಮಿ ಮತ್ತು ಇದೇ ರೀತಿಯ ಆರೋಪ ಎದುರಿಸಿದ ಇತರರ ಪ್ರಕರಣಗಳಲ್ಲಿ ಇದು ನಿರೂಪಿತ. ಯುಎಪಿಎ ಅಡಿ ಆರೋಪ ಎದುರಿಸುತ್ತಿರುವ ರಾವ್ ಅವರಿಗೆ ಜಾಮೀನು ಮಂಜೂರು ಮಾಡುವ ನಿರ್ಧಾರದಲ್ಲಿ ಕೋರ್ಟ್‌ನ ದೃಷ್ಟಿಕೋನ ಕೂಡ ಪ್ರತಿಬಿಂಬಿತವಾಗಿದೆ. ಆರೋಪಿಯ ವಯಸ್ಸು, ಆರೋಗ್ಯದ ಸ್ಥಿತಿ, ಆರೋಪ ನಿಗದಿಯ ಮತ್ತು ವಿಚಾರಣೆಯಲ್ಲಿನ ವಿಳಂಬ ಈ ಎಲ್ಲವನ್ನೂ ಅದು ಗಣನೆಗೆ ತೆಗೆದುಕೊಂಡಿದೆ. ಆದರೆ, ಈ ಜಾಮೀನನ್ನು ಪಡೆಯುವಲ್ಲಿ ತುಂಬಾ ದೀರ್ಘವಾದ ಹಾದಿಯನ್ನೇ ಸವೆಸಬೇಕಾಯಿತು. ಸುಪ್ರೀಂ ಕೋರ್ಟ್‌ವರೆಗೂ ಹೋಗಿ ದೀರ್ಘ ಅವಧಿಯವರೆಗೆ ಕಾನೂನು ಸಮರ ನಡೆಸುವುದು ಎಲ್ಲರಿಗೂ ಸಾಧ್ಯವಾಗುವ ಕೆಲಸವಲ್ಲ. ಹೀಗಾಗಿ ಜಾಮೀನು ಪಡೆಯುವ ಈ ಪ್ರಕ್ರಿಯೆಯೇ ಹಲವರ ಪಾಲಿಗೆ ಶಿಕ್ಷೆಯಾಗಿ ಪರಿಣಮಿಸುತ್ತದೆ ಮತ್ತು ಸ್ಟ್ಯಾನ್ ಸ್ವಾಮಿ ಅವರಂಥವರು ಜಾಮೀನು ಸಿಗುವವರೆಗೆ ಬದುಕುಳಿಯುವುದು ಕೂಡ ಕಷ್ಟವಾಗುತ್ತದೆ.

ಯುಎಪಿಎ ಅಡಿ ದಾಖಲಾದ ಪ್ರಕರಣಗಳಲ್ಲಿ ಹುರುಳಿದೆ ಎಂದು ನ್ಯಾಯಾಧೀಶರಿಗೆ ಮೇಲ್ನೋಟಕ್ಕೆ ಅನಿಸಿದರೂ ಸಾಕು, ಆರೋಪಿಗೆ ಜಾಮೀನು ನೀಡುವಂತಿಲ್ಲ ಎನ್ನುತ್ತದೆ ನಿಯಮ. ಹೀಗಾಗಿ ತನ್ನ ಮೇಲಿನ ಆರೋಪಗಳೆಲ್ಲ ಸುಳ್ಳು ಎಂದು ನಿರೂಪಿಸುವತನಕ ಆರೋಪಿ ಜೈಲಿನಲ್ಲೇ ಕಾಲ ಕಳೆಯಬೇಕಾಗುತ್ತದೆ. ಕೆಳಹಂತದ ಕೋರ್ಟ್‌ಗಳಲ್ಲಿ ನ್ಯಾಯಾಧೀಶರು ಸಾಮಾನ್ಯವಾಗಿ ಆರೋಪ ನಿಗದಿ ಆಗುವತನಕ ಪೊಲೀಸರ ವಾದವನ್ನು ಪ್ರಶ್ನಿಸಲು ಹೋಗುವುದಿಲ್ಲ. ಒಮ್ಮೆ ಆರೋಪ ನಿಗದಿಯಾದ ಬಳಿಕ ಜಾಮೀನು ಪಡೆಯುವ ಪ್ರಕ್ರಿಯೆ ಇನ್ನೂ ಜಟಿಲವಾಗುತ್ತದೆ. ವಿಚಾರಣೆ ನಡೆಸುವಲ್ಲಿ ಆಗಿರುವ ವಿಳಂಬವನ್ನು ಕೂಡ ಜಾಮೀನು ನೀಡುವುದಕ್ಕೆ ಮಾನದಂಡವಾಗಿ ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿರುವುದು, ಕೆಲವು ಪ್ರಕರಣಗಳ ಜಾಮೀನು ಅರ್ಜಿಗಳನ್ನು ಇತ್ಯರ್ಥ ಮಾಡಲು ನೆರವಿಗೆ ಬರಬಹುದು. ಭೀಮಾ- ಕೋರೆಗಾಂವ್ ಪ್ರಕರಣವಂತೂ ಹೆಚ್ಚಿನ ಕಳವಳವನ್ನು ಉಂಟುಮಾಡುವಂಥದ್ದು. ಈ ಪ್ರಕರಣದಲ್ಲಿ ಹೊರಿಸಲಾದ ಆರೋಪಗಳು ನಂಬಲು ಅರ್ಹವಾಗಿಲ್ಲ ಮತ್ತು ಆರೋಪಗಳನ್ನು ಪುಷ್ಟೀಕರಿಸಲು ನೆರವಾಗಬಹುದಾದ ಸಾಕ್ಷ್ಯಗಳನ್ನು ಆರೋಪಿಗಳ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಸೇರಿಸಲಾಗಿದೆ ಎಂಬ ವರದಿಗಳೂ ಇವೆ. ಆರೋಪಿಗಳನ್ನು ಜೈಲಿಗೆ ಹಾಕಿ ನಾಲ್ಕು ವರ್ಷಗಳೇ ಕಳೆದಿದ್ದರೂ ಎಲ್ಲ ಪ್ರಕರಣಗಳಲ್ಲಿ ಇದುವರೆಗೆ ದೋಷಾರೋಪ ನಿಗದಿಯಾಗಿಲ್ಲ. ವಿಚಾರಣೆ ಸಹ ನಡೆಯುತ್ತಿಲ್ಲ. ಪರಿಹಾರದ ಯಾವ ಮಾರ್ಗವನ್ನೂ ತೆರೆಯದೆ ಜನರನ್ನು ಇಷ್ಟೊಂದು ದೀರ್ಘಾವಧಿವರೆಗೆ ಸೆರೆಯಲ್ಲಿ ಇಡುವುದು ಘೋರ ಅನ್ಯಾಯ ಮತ್ತು ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಆಗಿದೆ.

ದಿನದ ಟ್ವೀಟ್

ನಿಂದಿಸುವುದು ಬಿಡಿ



ಕಾಂಗ್ರೆಸ್ ಪಕ್ಷವು ಸಾವರ್ಕರ್ ನಿಂದನೆ, ಬಿಜೆಪಿಯು ನೆಹರೂ ನಿಂದನೆ ಮಾಡುವುದನ್ನು ಬಿಡಬೇಕು. ನೀವುಗಳು ಹೇಳುವುದು ಸರಿ, ತಪ್ಪು ಎಂಬುದನ್ನು ಸಮರ್ಥಿಸಿಕೊಳ್ಳಲು ಅಥವಾ ಅಲ್ಲಗಳೆಯಲು ಇಬ್ಬರೂ ಬದುಕಿಲ್ಲ. ಅದನ್ನು ಬಿಟ್ಟು, ಬದುಕಿರುವವರು ಸಾಯದಂತೆ ಅವರ ಬವಣೆ ಅರಿತು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸಗಳನ್ನು ಮಾಡುವುದು ಉತ್ತಮ, ಅದರ ಬಗ್ಗೆ ಗಮನ ನೀಡಿ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಸ್ವಾತಂತ್ರ್ಯ ದಿನೋತ್ಸವವನ್ನು ನಾವು ಒಂದೆಡೆ, ಮಹಿಳಾ ಸಬಲೀಕರಣಕ್ಕೆ ಕರೆ ನೀಡುವುದರ ಮೂಲಕ ಹಾಗೂ ಮತ್ತೊಂದೆಡೆ, ಅತ್ಯಾಚಾರ ಎಸಗಿದ 11 ಅಪರಾಧಿಗಳನ್ನು ಬಿಡುಗಡೆ ಮಾಡುವ ಮತ್ತು ಅಭಿನಂದಿಸುವ ಮೂಲಕ ಆಚರಿಸಿದ್ದೇವೆ.



ದೀಕ್ಷಾ ನಿತಿನ್ ರಾವತ್, ಪೈಲಟ್

25 ವರ್ಷಗಳ ಹಿಂದೆ

ಭಾನುವಾರ, 17-8-1997

- **ಭ್ರಷ್ಟಾಚಾರ ದೂರುಗಳ ವಿಚಾರಣೆಗೆ ಪ್ರಧಾನಿ ಕಚೇರಿಯಲ್ಲಿ ಪ್ರತ್ಯೇಕ ಘಟಕ**

ನವದೆಹಲಿ, ಆ.16 (ಪಿಟಿಐ, ಯುಎನ್‌ಐ)- ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದೂರುಗಳ ವಿಚಾರಣೆಗೆ ತಮ್ಮ ಕಚೇರಿಯಲ್ಲಿ ವಿಶೇಷ ವಿಭಾಗವನ್ನು ಆರಂಭಿಸಲಾಗುವುದು ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ಇಲ್ಲಿ ಪ್ರಕಟಿಸಿದರು.

ಭಾರತದ ಕೈಗಾರಿಕಾ ಕ್ಷೇತ್ರ ಐವತ್ತು ವರ್ಷಕ್ಕೆ ಕಾಲಿಟ್ಟ ಸಂದರ್ಭಕ್ಕೆ ಭಾರತ ಕೈಗಾರಿಕಾ ಒಕ್ಕೂಟ ಸಂಘಟಿಸಿದ್ದ ಕೈಗಾರಿಕೋದ್ಯಮಿಗಳ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಗುಜ್ರಾಲ್ ಅವರು 'ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಎಲ್ಲ ದೂರುಗಳ ಬಗ್ಗೆ ನೇರವಾಗಿ ಕ್ರಮ ತೆಗೆದುಕೊಳ್ಳುವ ಉದ್ದೇಶದಿಂದ ಈ ವಿಭಾಗ ತೆರೆಯಲಾಗುತ್ತಿದೆ. ದಯವಿಟ್ಟು ಈ ವಿಷಯದಲ್ಲಿ ನನಗೆ ನೆರವಾಗಿ' ಎಂದು ಮನವಿ ಮಾಡಿದರು.

'ಯಾರು ಲಂಚ ಪಡೆಯುತ್ತಾರೆ ಎಂಬುದು ನಿಮಗೆ ತಿಳಿದಿದೆ, ಅವರು ಯಾರು ಎಂಬುದನ್ನು ನನಗೆ ತಿಳಿಸಿ. ನಿಮಗೆ ಬೆಂಬಲ ಹಾಗೂ ರಕ್ಷಣೆ ನೀಡುವ ಆಶ್ವಾಸನೆಯನ್ನು ನಾನು ನೀಡುತ್ತೇನೆ. ಕಿರುಕುಳಕ್ಕೆ ಒಳಗಾದವರು ಲಂಚ ತೆಗೆದುಕೊಳ್ಳುವವರ ಬಗ್ಗೆ ಯಾವುದೇ ಹೆದರಿಕೆ ಇಲ್ಲದೆ ಮಾಹಿತಿ ನೀಡಬೇಕು. ವೈಯಕ್ತಿಕವಾಗಿ ಹಾಗೆ ಮಾಡಲು ಸಾಧ್ಯವಾಗದಿದ್ದರೆ ಸಾಮೂಹಿಕವಾಗಿ ಯಾದರೂ ಮಾಹಿತಿ ಒದಗಿಸಿ' ಎಂದು ಅವರು ಹೇಳಿದರು.

- **ಕೃಷ್ಣಕಾಂತ್ ನೂತನ ಉಪರಾಷ್ಟ್ರಪತಿ**

ನವದೆಹಲಿ, ಆ.16 (ಯುಎನ್‌ಐ)- ದೇಶದ ಹನ್ನೊಂದನೇ ಉಪರಾಷ್ಟ್ರಪತಿಯಾಗಿ ಹಿರಿಯ ಗಾಂಧಿವಾದಿ ಹಾಗೂ ಆಂಧ್ರದ ರಾಜ್ಯಪಾಲ ಕೃಷ್ಣಕಾಂತ್ ಆಯ್ಕೆ ಆಗಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 17-8-1972

- **54 ಎಕರೆಗಿಂತ ಹೆಚ್ಚು ಭೂ ಹಿಡುವಳಿ ಮಿತಿ; ಕೇಂದ್ರದಿಂದ ಸೂಚನೆ**

ಬೆಂಗಳೂರು, ಆ. 16- ಮರಳುಗಾಡು, ಬೆಟ್ಟ-ಗುಡ್ಡ ಪ್ರದೇಶ ಮತ್ತು ಪದೇಪದೇ ಕ್ಷಾಮ ಪೀಡಿತವಾಗುವ ಪ್ರದೇಶಗಳಲ್ಲಿ ಜಮೀನು ಹಿಡುವಳಿ ಮಿತಿಯನ್ನು 54 ಎಕರೆಗಳಿಗಿಂತ ಹೆಚ್ಚಾಗಿಸಬೇಕೆಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.

'ಭೂ ಮಾಲೀಕರಿಂದ ಭೂಮಿ ಪಡೆದು ಭೂಮಿ ಇಲ್ಲದ ನತದೃಷ್ಟ ರೈತರಿಗೆ ಅದನ್ನು ಹಂಚುವ ಚರಿತ್ರಾರ್ಹ ಭೂ ಸುಧಾರಣಾ ಮಸೂದೆ'ಯನ್ನು ಇಂದು ವಿಧಾನಸಭೆಯಲ್ಲಿ ಮಂಡಿಸಿದ ಕಂದಾಯ ಸಚಿವ ಶ್ರೀ ಎನ್. ಹುಚ್ಚಮಾಸ್ತಿಗೌಡರು ಈ ವಿಚಾರವನ್ನು ತಿಳಿಸಿದರು.

ಮಸೂದೆಯನ್ನು ಜನಮತಗಣನೆಗಾಗಿ ಕಳುಹಿಸಬೇಕೆಂದು ಪಕ್ಷೇತರ ಸದಸ್ಯ ಶ್ರೀ ಟಿ. ಆರ್. ಶಾಮಣ್ಣನವರು ತಿದ್ದುಪಡಿ ಮಂಡಿಸಿದರು.

- **ಕೃಷ್ಣಾ ಮೇಲ್ದಂಡೆ ಯೋಜನೆಗೆ ಆದ್ಯತೆ ನೀಡಲು ಅರಸು ಷರತ್ತು**

ಬೆಂಗಳೂರು, ಆ. 16- ರಸ್ತೆ, ಕಟ್ಟಡ ಮತ್ತು ಸೇತುವೆ ಕಾಮಗಾರಿಗಳನ್ನು ನಿಲ್ಲಿಸಿ ಅವುಗಳ ಹಣವನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಳಸಲು ವಿಧಾನಸಭೆ ಒಪ್ಪುವುದಾದರೆ ಆ ಸಂಬಂಧದಲ್ಲಿ ತಾವು ಒಂದು ನಿರ್ಣಯ ಮಂಡಿಸಲು ಸಿದ್ಧವೆಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಹೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಾಂ) ಮತ್ತು ಶ್ರೀ ಡಿ.ಬಿ. ಕಲಮಣಕರ್ (ಕಾಂ) ಅವರ ಪ್ರಶ್ನೆಗಳಿಗೆ ಅರಸು ಉತ್ತರ ನೀಡಿದರು.

ಜಲಮೂಲ ಮಾಲಿನ್ಯ, ನೀರು ಶುದ್ಧಿ ಮಾಡುವ ಸವಾಲುಗಳು ಜನರನ್ನು ಹೈರಾಣಾಗಿಸುತ್ತಿವೆ!

ಅಮೃತಕಾಲದ ಜಲಾಮೃತ ಸವಾಲು



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಸ್ವಾತಂತ್ರ್ಯೋತ್ಸವದ ಅಮೃತ ಗಳಿಗೆಯ ಈ ಸಂಭ್ರಮದಲ್ಲೂ, ದೇಶದ ಮುಂದಿರುವ ಸವಾಲುಗಳು ನಮ್ಮನ್ನು ಎಚ್ಚರಿಸಬೇಕಿವೆ. ಕುಡಿಯಲು ಶುದ್ಧನೀರನ್ನು ಒದಗಿಸುವ ಸಂಗತಿಯನ್ನೇ ಒಮ್ಮೆ ಪರಿಶೀಲಿಸಿ. ಮೇಲ್ನೋಟಕ್ಕೆ ಸರಳವಾದ ಈ ವಿಷಯವೂ ಒಂದು ಗಂಭೀರ ಸವಾಲಾಗಿಬಿಟ್ಟಿದೆ. ರಾಜ್ಯಸಭೆಯಲ್ಲಿ ಕೇಂದ್ರ ಸರ್ಕಾರವೇ ಇತ್ತೀಚೆಗೆ ನೀಡಿದ ಮಾಹಿತಿಯಂತೆ, ದೇಶದ ಶೇ 80ಕ್ಕೂ ಮಿಕ್ಕಿ ಜನರು ಇಂದಿಗೂ ಅಶುದ್ಧ ನೀರನ್ನೇ ಕುಡಿಯುತ್ತಿದ್ದಾರೆ!

ಸ್ವಾತಂತ್ರ್ಯ ಬಂದಾಗಿನಿಂದಲೂ ಕುಡಿಯುವ ನೀರಿಗಾಗಿ ಸರ್ಕಾರಿ ಯೋಜನೆಗಳಿವೆ. ಆದರೂ ಹೀಗೇಕೆ? ಏರುತ್ತಿರುವ ಜನಸಂಖ್ಯೆ, ನಗರೀಕರಣ, ನೀರಿನ ಕೊರತೆ ಎಂದು ಸರ್ಕಾರ ಉತ್ತರಿಸೀತು. ಆದರೆ, ಈ ಕ್ಷೇತ್ರದ ಕುರಿತ ಅಧ್ಯಯನಗಳು ಹೇಳುವ ಸಂಗತಿಗಳೇ ಬೇರೆ. ಕುಡಿಯುವ ನೀರಿನ ಮೂಲಗಳಾದ ಬಾವಿ, ಕೆರೆ, ಹೊಳೆ, ನದಿ, ಕೊಳವೆಬಾವಿ- ಎಲ್ಲವೂ ಮಲಿನವಾಗುತ್ತಿವೆ. ಜನವಸತಿಗಳ ಕೊಳಚೆ, ಕೈಗಾರಿಕೆಗಳ ತ್ಯಾಜ್ಯ, ಕ್ರಿಮಿನಾಶಕಗಳ ಅಂಶಗಳಿರುವ ಕೃಷಿಜಮೀನಿನ ಹೊರಹರಿವು- ಇವೆಲ್ಲವೂ ನೀರು ವಿಷವಾಗಲು ಕಾರಣ. ಜಲಮೂಲ ರಕ್ಷಣೆಗೆ ಸೂಕ್ತ ನೀತಿ ರೂಪಿಸಿ, ಅಚ್ಚುಕಟ್ಟಾಗಿ ಅನುಷ್ಠಾನ ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನು, ಮನೆಮನೆಗೆ ನೀರು ಪೂರೈಸುವ ಸರ್ಕಾರಿ ವಿತರಣಾ ವ್ಯವಸ್ಥೆಗಳಂತೂ ಭ್ರಷ್ಟಾಚಾರದಿಂದಾಗಿ ಕುಸಿಯುತ್ತಿವೆ. ಇವುಗಳಿಂದಾಗಿ, ಬಹುಪಾಲು ಜನರು ಮಲಿನ ನೀರು ಕುಡಿಯುವುದು ಅನಿವಾರ್ಯವಾಗುತ್ತಿದೆ!

ಈ ಸವಾಲನ್ನು ಮಣಿಸಲೆಂದೇ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಯೋಜನೆ 'ಜಲಜೀವನ ಮಿಷನ್'. 2024ರ ವೇಳೆಗೆ, ದೇಶದ ಪ್ರತಿಮನೆಗೂ ನಲ್ಲಿ ಸಂಪರ್ಕ ಒದಗಿಸಿ, ಪ್ರತಿಯೊಬ್ಬರಿಗೂ ಪ್ರತಿದಿನ ಕನಿಷ್ಠ 55 ಲೀಟರ್ ಶುದ್ಧನೀರು ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಯಿದು. ರಾಜ್ಯ ಸರ್ಕಾರವು ಇದಕ್ಕೆ ತನ್ನ ಅನುದಾನವನ್ನೂ ಸೇರಿಸಿ, 'ಮನೆಮನೆಗೆ ಗಂಗೆ' ಯೋಜನೆಯ ರೂಪದಲ್ಲಿ ಜಾರಿಗೊಳಿಸುತ್ತಿದೆ. ಇವೆಲ್ಲ ಸ್ವಾಗತಾರ್ಹವೇ. ಆದರೆ, ವಿತರಿಸುವ ನೀರಿನ ಶುದ್ಧತೆ ಖಚಿತಪಡಿಸುವ ಮೂಲಭೂತ ಅಂಶವೇ ಈ ಯೋಜನೆಯಲ್ಲಿ ಇದ್ದಂತಿಲ್ಲ. ಏಕೆಂದರೆ, ಕೊಳವೆ-ಮಾರ್ಗದಲ್ಲಿ ಸಾಗಿಸುವ ಮುನ್ನ ಜಲಮೂಲಗಳನ್ನು ಶುದ್ಧಿಯಾಗಿಸುವ ಜವಾಬ್ದಾರಿ ಈ ಯೋಜನೆಯ ವ್ಯಾಪ್ತಿಗೇ ಬರುವುದಿಲ್ಲ. ಇನ್ನು, ಜಿಲ್ಲೆಗೆ ಒಂದರಂತೆ ಸ್ಥಾಪಿಸಲು ಉದ್ದೇಶಿಸಿರುವ ನೀರಿನ ಗುಣಮಟ್ಟ ಪರೀಕ್ಷಿಸುವ ಪ್ರಯೋಗಾಲಯಗಳ ತಾಂತ್ರಿಕ ಉತ್ಕೃಷ್ಟತೆ ಹಾಗೂ ನಿರ್ವಹಣಾ ಸಾಮರ್ಥ್ಯದ ಚಿತ್ರಣವೂ ಸ್ಪಷ್ಟವಾಗಿಲ್ಲ. ಈ ಅಂಶಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದಿದ್ದರೆ, ಇದು ಮತ್ತೊಂದು 'ಪೈಪ್ ಹಾಕುವ' ಯೋಜನೆಯಾಗಿ ಬದಲಾದೀತು!

ಹೀಗಾಗಿ, ಒಂದು ಮಾತು ಖಚಿತ. ಸರ್ಕಾರಿ ನಲ್ಲಿಯಿರಲಿ ಅಥವಾ ಖಾಸಗಿ ಬಾವಿಯಿರಲಿ, ಮನೆಗೆ ಬಂದ ಗಂಗೆಯನ್ನು ಶುದ್ಧಿ ಮಾಡಿಕೊಳ್ಳುವ ಹೊಣೆಯು ಬಳಸುವ ಕುಟುಂಬಗಳದ್ದೇ. ಇತ್ತೀಚಿನವರೆಗೂ ಹಳ್ಳಿಗಳಲ್ಲಿ ನೀರನ್ನು ಸ್ವಚ್ಛ ಬಟ್ಟೆಯಲ್ಲಿ ಸೋಸಿ, ಕುದಿಸಿ ಬಳಸುತ್ತಿದ್ದರು. ನಗರ-ಪಟ್ಟಣಗಳಲ್ಲಾದರೋ ಮರಳು ಅಥವಾ ಸಿಲಿಕಾದ ಪದರುಗಳ ಮೂಲಕ ನೀರು ಸೋಸುವ ತಂತ್ರದ ಶುದ್ಧೀಕರಣ ಘಟಕಗಳನ್ನು ಬಳಸುತ್ತಿದ್ದರು. ಕಸ-ದೂಳು, ಪ್ಲಾಸ್ಟಿಕ್-ಬಟ್ಟೆಗಳ ತುಂಡು ಇತ್ಯಾದಿಯನ್ನೆಲ್ಲ ಈ 'ಫಿಲ್ಟರ್-ಕ್ಯಾಂಡಲ್'ನಿಂದಲೇ ಬೇರ್ಪಡಿಸಬಹುದು. ಮನೆಯ ಬಾವಿ ಅಥವಾ ಕಾಡಿನ ಝರಿನೀರು ಮಾತ್ರ ಬಳಸುವವರಿಗೆ ಇದು ಕ್ಷೇಮಕರವೇ. ಆದರೆ, ಇಂದು ವ್ಯಾಪಕವಾಗಿ ಬಳಸುತ್ತಿರುವುದು ಕೆರೆ-ಹಳ್ಳ, ನದಿ, ಕೊಳವೆಬಾವಿ ನೀರು.

ಈ ಜಲಮೂಲಗಳ ಮಾಲಿನ್ಯ ಎಷ್ಟು ಸಂಕೀರ್ಣವಾಗುತ್ತಿದೆಯೆಂದರೆ, ಸರಳ ಶುದ್ಧೀಕರಣ ತಂತ್ರಗಳು ಸಾಲುತ್ತಿಲ್ಲ. ಅದರಲ್ಲಿ ಜನವಸತಿಯ ಕೊಳಚೆ ಅಥವಾ ಕೈಗಾರಿಕಾ ತ್ಯಾಜ್ಯಗಳಿಂದ ಬರುವ ವಿವಿಧ ಸಾವಯವ ಹಾಗೂ ನಿರವಯವ ರಾಸಾಯನಿಕ ಸಂಯುಕ್ತಗಳಿರುತ್ತವೆ. ಗಂಧಕ, ರಂಜಕ, ಕ್ಯಾಲ್ಸಿಯಂ, ಸೋಡಿಯಂ, ನೈಟ್ರೇಟ್, ಕ್ಲೋರೈಡ್ ಇತ್ಯಾದಿ. ಕೃಷಿಭೂಮಿಯಿಂದ ಹರಿದು ಜಲಮೂಲ ಸೇರುವ ನೀರಿನಲ್ಲಿ ಕ್ರಿಮಿನಾಶಕ ಹಾಗೂ ಕಳೆನಾಶಕಗಳ ಕೃತಕ ರಾಸಾಯನಿಕ ಅಂಶಗಳಿರುತ್ತವೆ. ಕೈಗಾರಿಕೆ ಅಥವಾ ನಗರತ್ಯಾಜ್ಯಗಳ ಸಂಪರ್ಕವಿರುವ ಜಲಮೂಲ ಹಾಗೂ ಕೊಳವೆಬಾವಿ ನೀರಿನಲ್ಲಿ ಕಬ್ಬಿಣ, ಸೀಸ, ಪಾದರಸಗಳಂಥ ಭಾರಲೋಹಗಳಿರಬಹುದು. ಕೊಳವೆಬಾವಿಗಳಲ್ಲಿ ಅಪಾಯಕಾರಿ ಮಟ್ಟದಲ್ಲಿ ಆರ್ಸೆನಿಕ್, ಫ್ಲೋರೈಡ್ ಅಂಶಗಳಿರುವುದಿದೆ.

ದೇಶದ ಹಲವೆಡೆ ಆಳದ ಕೊಳವೆಬಾವಿಯಲ್ಲಿ ವಿಕಿರಣಕಾರಿ ಯುರೇನಿಯಂಯುಕ್ತ ನೀರು ದೊರಕುತ್ತಿದೆ! ಬಣ್ಣ-ವಾಸನೆ ಇರದೆಯೂ ಇವು ನೀರಿನಲ್ಲಿ ಕರಗಿರಬಹುದು. ಈ ರಾಸಾಯನಿಕಗಳನ್ನೆಲ್ಲ ಒಟ್ಟಾಗಿ 'ಕರಗಿದ ದ್ರವ್ಯಗಳು' (ಟಿಡಿಎಸ್) ಎನ್ನುತ್ತಾರೆ. ಈಗಿನ ಅಂಗೀಕೃತ ವೈಜ್ಞಾನಿಕ ನಿಯಮಗಳ ಪ್ರಕಾರ, ಈ ಟಿಡಿಎಸ್ ಎಷ್ಟಿದೆ ಎಂಬುದು ನೀರಿನ ಶುದ್ಧತೆ ಅಳೆಯುವ ಪ್ರಮುಖ ಮಾನದಂಡಗಳಲ್ಲಿ ಒಂದು.

ಕುಡಿಯುವ ನೀರಲ್ಲಿ ಟಿಡಿಎಸ್ ಹೆಚ್ಚಾದಹಾಗೆ, ಗಂಭೀರ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ, ಆರ್ಸೆನಿಕ್ ಚರ್ಮದ ಕಾಯಿಲೆ ಹುಟ್ಟುಹಾಕಬಹುದು. ಅಧಿಕ ಕಬ್ಬಿಣ, ಸೀಸದ ಅಂಶಗಳು



ಮರೆವಿನ ರೋಗದಂಥ ನರಮಂಡಲದ ಕಾಯಿಲೆಗೆ ಕಾರಣವಾಗಬಹುದು. ಕ್ಯಾಡ್ಮಿಯಂ ಮೂತ್ರಪಿಂಡವನ್ನು ಗಾಸಿಗೊಳಿಸಿದರೆ, ಕ್ರೋಮಿಯಂ ಕರುಳಿನ ಊತ ಉಂಟುಮಾಡುವಂಥದ್ದು. ಯುರೇನಿಯಂ ಹಾಗೂ ಕ್ರಿಮಿನಾಶಕಗಳ ಸಂಯುಕ್ತಗಳಂತೂ ಕ್ಯಾನ್ಸರ್ ತರಹದ ರೋಗಗಳನ್ನೇ ಉದ್ದೀಪಿಸುತ್ತವೆ.

ಇದರ ಹೊರತಾಗಿ ನೀರಿನಲ್ಲಿ ಅಪಾರ ಸೂಕ್ಷ್ಮಾಣುಜೀವಿಗಳೂ ಇರುತ್ತವೆ. ಇವುಗಳಲ್ಲಿ ರೋಗ ಹುಟ್ಟಿಸಬಲ್ಲ ಅಥವಾ ಹರಡಬಲ್ಲ ಬ್ಯಾಕ್ಟೀರಿಯ, ವೈರಸ್, ಶಿಲೀಂಧ್ರ, ಸೂಕ್ಷ್ಮಕೀಟಗಳ ಪ್ರಭೇದಗಳೂ ಇರಬಹುದು. ಹೀಗಾಗಿ, ಕಸ, ಟಿಡಿಎಸ್ ಹಾಗೂ ಅಪಾಯಕಾರಿ ಸೂಕ್ಷ್ಮಾಣುಜೀವಿಗಳು- ಇವನ್ನೆಲ್ಲ ಬೇರ್ಪಡಿಸಿ ನೀರನ್ನು ಒದಗಿಸುವ ತಂತ್ರಜ್ಞಾನವು ಪ್ರತೀ ಅಡುಗೆಮನೆಗೂ ಇಂದು ಅಗತ್ಯವಿದೆ. ಹೀಗಾಗಿ, ಅದೆಷ್ಟೋ ಬಗೆಯ ನೀರು ಶುದ್ಧೀಕರಣ ಯಂತ್ರಗಳು ಮಾರುಕಟ್ಟೆಗೆ ಕಾಲಿಟ್ಟಿವೆ. ಅವುಗಳಲ್ಲಿ ನಮಗೆ ಯಾವುದು ಸೂಕ್ತ ಎಂದು ಅರಿಯುವುದೇ ದೊಡ್ಡ ಗೊಂದಲ!

ಅವನ್ನು ಮುಖ್ಯವಾಗಿ ಆರು ವಿಧಗಳಲ್ಲಿ ವರ್ಗೀಕರಿಸಬಹುದು. ಮೊದಲನೆಯದು, ಮರಳು ಅಥವಾ ಸಿಲಿಕಾ ಫಿಲ್ಟರ್ ಬಳಸುವ ತಂತ್ರ. ಎರಡನೆಯದು, ಹೆಚ್ಚು ಪರಿಣಾಮಕಾರಿಯಾದ ಸೂಕ್ಷ್ಮರಂಧ್ರಗಳ ಅಲ್ಟ್ರಾ-ಫಿಲ್ಟರುಗಳು. ಇವು ನೀರನ್ನು ಕಸ ಹಾಗೂ ಕೆಲವು ರಾಸಾಯನಿಕಗಳಿಂದ ಮುಕ್ತಗೊಳಿಸುತ್ತವಾದರೂ, ರೋಗಕಾರಕ ಸೂಕ್ಷ್ಮಾಣುಜೀವಿಗಳು ಹಾಗೂ ಕ್ರಿಮಿನಾಶಕಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಮೂರನೆಯದು, ಅತಿನೇರಳೆ ಕಿರಣ ಬಳಸುವ ವಿಧಾನ. ಇದರಲ್ಲಿ ಸೂಕ್ಷ್ಮಾಣುಜೀವಿಗಳು ನಾಶವಾದರೂ ಟಿಡಿಎಸ್ ಮಾತ್ರ ಉಳಿದುಬಿಡುತ್ತದೆ. ನಾಲ್ಕನೆಯದು, ಸಂಸ್ಕರಿಸಿದ ಇದ್ದಿಲಿನ ಫಿಲ್ಟರ್ ತಂತ್ರ. ಈ ಮೊದಲು ಪ್ರಸ್ತಾಪಿಸಿದ ವಿಧಾನಗಳಿಗಿಂತ ಇದು ಹೆಚ್ಚು ಪರಿಣಾಮಕಾರಿಯಾದ ತಂತ್ರಜ್ಞಾನ.

ಐದನೆಯದು, ಜೀವಕೋಶಗಳ ಆವರಣ ಹೋಲುವ ಕೃತಕ ಪದರುಗಳನ್ನು ಬಳಸಿ ನೀರು ಸೋಸುವ 'ರಿವರ್ಸ್ ಆಸ್ಮಾಸಿಸ್' ತಂತ್ರಜ್ಞಾನ. ಇಂದು ವ್ಯಾಪಕ ಬಳಕೆಯಲ್ಲಿರುವ ಕ್ಷಮತೆಯ ತಂತ್ರಜ್ಞಾನವಿದು. ಆದರೆ, ಈ ಯಂತ್ರಗಳು ದೇಹಕ್ಕೆ ಅಗತ್ಯವಿರುವ ಒಳ್ಳೆಯ ಲವಣಗಳನ್ನೂ ಸಂಪೂರ್ಣವಾಗಿ ಬೇರ್ಪಡಿಸುತ್ತವೆ ಎನ್ನುವ ಆರೋಪವಿದೆ. ಹಾಗಿದ್ದಲ್ಲಿ, ಅದರ ನೀರನ್ನು ದೀರ್ಘಕಾಲ ಕುಡಿದರೆ ದೇಹಕ್ಕೆ ಖನಿಜಾಂಶಗಳ ಕೊರತೆಯಾಗುತ್ತದೆ ಎನ್ನುವುದು ತಜ್ಞರ ವಾದ. ಹೀಗಾಗಿ, ಇದರ ಬಳಕೆಗೆ ಮಿತಿ ನಿರ್ಧರಿಸುವ ಸಂಗತಿಯೀಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಅಂತಿಮವಾಗಿ, ಗ್ರಾಫೈಟಿನಿಂದ ಉತ್ಪಾದಿಸುವ ಅತಿಸೂಕ್ಷ್ಮವಾದ ಇಂಗಾಲದ ನ್ಯಾನೊ-ಕೊಳವೆಗಳನ್ನು ಬಳಸಿ ನೀರು ಶುದ್ಧೀಕರಿಸುವುದು. ಇನ್ನಷ್ಟು ಅಭಿವೃದ್ಧಿ ಆಗಬೇಕಿರುವ ಈ ತಂತ್ರಜ್ಞಾನವು ಮಾರುಕಟ್ಟೆಗೆ ಇನ್ನೂ ಬರಬೇಕಿದೆ. ಆದ್ದರಿಂದ, ಇವೆಲ್ಲವುಗಳ ಸಾಧಕ-ಬಾಧಕಗಳ ಕುರಿತು ಗ್ರಾಹಕರಲ್ಲಿ ವ್ಯಾಪಕ ಜಾಗೃತಿಯಾಗಬೇಕಿದೆ.

ಜಲಮೂಲ ರಕ್ಷಣೆ, ಸೂಕ್ತ ಪೂರೈಕೆ ಹಾಗೂ ಎಲ್ಲರೂ ಶುದ್ಧನೀರನ್ನು ಕುಡಿಯುವುದು- ಈ ಮೂರನ್ನೂ ಸಾಧಿಸಲು ಸರ್ಕಾರ ಹಾಗೂ ಸಮಾಜದ ಜಂಟಿ ಯತ್ನ ಬೇಕು. ಸಕಲರಿಗೂ ಜಲಾಮೃತ ಪೂರೈಸುವ ಕನಸನ್ನು ಈ ಅಮೃತಕಾಲವು ಸಾಕಾರಗೊಳಿಸೀತೆ?

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಶಾಸಕರಿಗೆ ಶಾಕ್

• ಮಣ್ಣೆರಾಜು

'ಚುನಾವಣೆ ಹತ್ತಿರ ಬರುತ್ತಿದೆ, ಕ್ಷೇತ್ರದ ಕಡೆ ಹೆಜ್ಜೆ ಹಾಕಿ, ಜನರ ಸಮಸ್ಯೆ ಆಲಿಸಿ' ಎಂದು ಶಾಸಕರಿಗೆ ಆಪ್ತ ಸಹಾಯಕ ಮನವಿ ಮಾಡಿದ.

'ಮೊನ್ನೆ ನಡೆದೂ ನಡೆದೂ ಶಾಸಕರಿಗೆ ಕಾಲು ನೋವಾಗಿದೆ ಎಂದು ಜನರಿಗೆ ತಿಳಿಸಿ, ನನ್ನ ಪರವಾಗಿ ನೀನೇ ಬೆಂಬಲಿಗರೊಂದಿಗೆ ಕ್ಷೇತ್ರಯಾತ್ರೆ ಮಾಡು' ಎಂದರು ಶಾಸಕರು.

'ಕ್ಷೇತ್ರದಲ್ಲಿ ನಿಮ್ಮ ಬಗ್ಗೆ ಆಪಾದನೆ, ಅಪಸ್ವರ ಹೆಚ್ಚಾಗಿದೆ, ಜನರ ಸಿಟ್ಟು ಶಮನ, ಶತ್ರು ದಮನ ಮಾಡದೆ ಮುಂದಿನ ಚುನಾವಣೆ ಕಷ್ಟವಾಗುತ್ತದೆ' ಎಂದು ಎಚ್ಚರಿಸಿದ. ಶಾಸಕರು ಆಕಳಿಸಿದರು.

'ಮಳೆ ಬಂದು ರಸ್ತೆಗಳು ಕಿತ್ತುಹೋಗಿವೆ, ಚರಂಡಿಗಳು ಮುಚ್ಚಿಹೋಗಿವೆ, ರಿಪೇರಿಗೆ ಗುದ್ದಲಿಪೂಜೆ ಮಾಡಬೇಕು'.

'ಅಧಿಕಾರಿಗಳನ್ನು ಕರೆಸಿ ನೀನೇ ಕಾಮಗಾರಿ ಶುರು ಮಾಡಿಸು'.

'ಪಕ್ಷ ಬಿಟ್ಟು ಹೋಗಲು ಸಿದ್ಧರಾಗಿರುವವರ ಪಟ್ಟಿ ಇದೆ, ಇವರಿಗೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಟಿಕೆಟ್ ಕೊಡುಸ್ತೀವಿ ಅಂತ ಆಸೆ ಹುಟ್ಟಿಸಿ ಪಕ್ಷದಲ್ಲೇ ಉಳಿಸಿಕೊಳ್ಳಲು ಸಾಂತ್ವನ ಸಭೆ ಮಾಡಬೇಕಾಗಿದೆ. ಅದನ್ನೂ ನಾನೇ ಮಾಡಲಾ ಸಾರ್?'

ಶಾಸಕರಿಗೆ ಆಪ್ತ ಸಹಾಯಕನ ಬಗ್ಗೆ ಅಪಾರ ನಂಬಿಕೆ. ತಮ್ಮ ಪಾಲಿನ ಎಷ್ಟೋ ಸಮಸ್ಯೆಗಳನ್ನು ಚಾಣಾಕ್ಷತನದಿಂದ ಬಗೆಹರಿಸಿ ನೆರವಾಗಿದ್ದ. ಅವರ ಪತ್ನಿಗೂ ಗೊತ್ತಿಲ್ಲದ ಶಾಸಕರ ಗುಟ್ಟು, ಗಮ್ಮತ್ತುಗಳನ್ನು ತಿಳಿದಿದ್ದ. ಕ್ಷೇತ್ರದ ಜನರ ನಾಡಿಮಿಡಿತ, ಹಿಡಿತವನ್ನು ಅರಿತಿದ್ದ ಆಪ್ತ ಸಹಾಯಕ ಶಾಸಕರಿಗೆ ಪರಮಾಪ್ತನಾಗಿದ್ದ.

ಹೀಗಿರುವಾಗ... ಆಪ್ತ ಸಹಾಯಕ, ಪಕ್ಷದ ನಾಯಕರ ಮನಗೆದ್ದು ಚುನಾವಣೆ ಟಿಕೆಟ್ ಪಡೆದು ಇದೇ ಕ್ಷೇತ್ರದಲ್ಲಿ ಸ್ಪರ್ಧಿಸಲಿದ್ದಾನೆ ಎನ್ನುವ ಆಘಾತಕಾರಿ ಸುದ್ದಿಗೆ ಶಾಸಕರು ಬೆಚ್ಚಿಬಿದ್ದು ನಿದ್ರೆಯಿಂದ ಎಚ್ಚರಗೊಂಡರು.

'ಎಲೆಕ್ಷನ್ ಹತ್ತಿರ ಬಂದಾಗ ಕೆಟ್ಟ ಕನಸುಗಳು ಬೀಳುವುದು ಸಹಜ, ಆತಂಕಪಡಬೇಡಿ...' ಎಂದು ಶಾಸಕರಿಗೆ ಪತ್ನಿ ಸಮಾಧಾನ ಹೇಳಿದರು.

ಸಂಗತ

ಗ್ರಂಥಾಲಯ: ಯಾರ ಹಿತಕ್ಕಾಗಿ?

ತೀರಾ ಕಳಪೆ ಪುಸ್ತಕಗಳನ್ನೆಲ್ಲ ಖರೀದಿಸಿ ಗ್ರಂಥಾಲಯಗಳಲ್ಲಿ ಒಟ್ಟುವ ಬದಲಿಗೆ, ಗುಣಮಟ್ಟದ ಪುಸ್ತಕಗಳನ್ನು ಓದುಗರಿಗೆ ಲಭ್ಯವಾಗಿಸುವುದು ಆದ್ಯತೆಯಾಗಬೇಕು

• ಎಚ್.ಕೆ.ಶರತ್

ಸಾರ್ವಜನಿಕ ಗ್ರಂಥಾಲಯಗಳಿಗೆ ಯಾರ ಹಿತ ಕಾಯುವುದು ಆದ್ಯತೆಯಾಗಬೇಕು? ಓದುಗರು, ಉದ್ಯೋಗ ದಕ್ಕಿಸಿಕೊಳ್ಳುವ ಸಲುವಾಗಿ ಅಧ್ಯಯನ ನಡೆಸುವ ಯುವಜನರು, ಪುಸ್ತಕಗಳನ್ನು ಬರೆಯುವವರು ಹಾಗೂ ಪ್ರಕಟಿಸುವವರ ಪೈಕಿ ಯಾರ ಹಿತ ಕಾಯುವ ಸಲುವಾಗಿ ಸಾರ್ವಜನಿಕ ಗ್ರಂಥಾಲಯಗಳನ್ನು ರೂಪಿಸಲಾಯಿತು?

ಸಾರ್ವಜನಿಕ ಗ್ರಂಥಾಲಯಕ್ಕೆ ಸಂಬಂಧಿಸಿದ ಚರ್ಚೆ ಬಹುತೇಕ ಸಂದರ್ಭಗಳಲ್ಲಿ ಗ್ರಂಥಾಲಯ ಇಲಾಖೆ ನಡೆಸುವ ಪುಸ್ತಕಗಳ ಸಗಟು ಖರೀದಿಯ ಸುತ್ತಲೇ ಗಿರಕಿ ಹೊಡೆಯುವುದೇ ವಿನಾ ಗ್ರಂಥಾಲಯಗಳನ್ನು ಸಾಮಾನ್ಯ ಓದುಗಸ್ನೇಹಿಯಾಗಿಸುವ ಇಚ್ಛಾಶಕ್ತಿ ಯಾರಲ್ಲೂ ಇರುವಂತೆ ತೋರುತ್ತಿಲ್ಲ.

ಕನ್ನಡದ ಹಲವು ಬರಹಗಾರರು ಹಾಗೂ ಪ್ರಕಾಶಕರು, 'ಗ್ರಂಥಾಲಯ ಇಲಾಖೆಯು ಸಗಟು ಖರೀದಿಯನ್ನು ಸಕಾಲದಲ್ಲಿ ನಡೆಸಬೇಕು, ಖರೀದಿಸುವ ಪ್ರತಿಗಳ ಸಂಖ್ಯೆಯನ್ನು 300ರಿಂದ 500ಕ್ಕೆ ಏರಿಸಬೇಕು, ಪುಸ್ತಕಗಳ ಖರೀದಿ ದರ ನಿಗದಿಯನ್ನು ಮುದ್ರಣ ವೆಚ್ಚದಲ್ಲಿ ಆಗಿರುವ ಬೆಲೆ ಏರಿಕೆ ಪರಿಗಣಿಸಿ ಪರಿಷ್ಕರಿಸಬೇಕು' ಎಂದು ಆಗಾಗ ಆಗ್ರಹಿಸುತ್ತಿರುತ್ತಾರೆ. ಆದರೆ, ಓದುಗರಿಗೆ ಮತ್ತಷ್ಟು ಹತ್ತಿರವಾಗಿಸುವ ದಿಸೆಯಲ್ಲಿ ಗ್ರಂಥಾಲಯಗಳನ್ನು ಅಣಿಗೊಳಿಸುವ ಅಗತ್ಯದ ಕುರಿತು ಸಂಬಂಧಪಟ್ಟವರ ಗಮನಕ್ಕೆ ತರಲು, ಸರ್ಕಾರದ ಮೇಲೆ ಒತ್ತಡ ಹೇರಲು ಅಷ್ಟೇನೂ ಉತ್ಸಾಹ ತೋರುವುದಿಲ್ಲ.

ಗ್ರಂಥಾಲಯಗಳು ಇರುವುದು ಸಗಟು ಖರೀದಿಯ ಮೂಲಕ ಬರಹಗಾರರು ಹಾಗೂ ಪ್ರಕಾಶಕರನ್ನು ಪ್ರೋತ್ಸಾಹಿಸುವ ಸಲುವಾಗಿಯೋ ಅಥವಾ ಓದುಗರ ಅಗತ್ಯಗಳನ್ನು ಪೂರೈಸುತ್ತಾ ಸಾರ್ವಜನಿಕರಲ್ಲಿ ಓದುವ ಅಭಿರುಚಿ ಬೆಳೆಸಲೋ? ಓದುಗರ ಅಭಿರುಚಿಯನ್ನು ಬೆಳೆಸುವುದು, ಅವರ ಬೇಡಿಕೆಗೆ ಅನುಗುಣವಾಗಿ ಪುಸ್ತಕಗಳನ್ನು ಒದಗಿಸುವುದು ಕೂಡ ಗ್ರಂಥಾಲಯ ಇಲಾಖೆಯ ಆದ್ಯತೆಯಾಗಬೇಕಲ್ಲವೇ?

ಪುಸ್ತಕಗಳ ಗುಣಮಟ್ಟ ಅಳೆಯಲು ಗ್ರಂಥಾಲಯ ಇಲಾಖೆ ಅಳವಡಿಸಿಕೊಂಡಿರುವ ಮಾನದಂಡವನ್ನು ಗಮನಿಸಿದರೆ ಸಾಕು, ಸಗಟು ಪುಸ್ತಕ ಖರೀದಿಯ ವ್ಯವಸ್ಥೆ ಅದೆಷ್ಟು ಯಾಂತ್ರಿಕವಾಗಿದೆ ಎಂಬುದರ ಅರಿವಾಗಲಿದೆ. ಪುಸ್ತಕವೊಂದರ ಗುಣಮಟ್ಟವನ್ನು ಕೇವಲ ಅದರ ಮುದ್ರಣದ ಗುಣಮಟ್ಟ ಆಧರಿಸಿ ಅಳೆಯಲಾಗುತ್ತಿದೆ. ಸಾದಾ ಪ್ರತಿಗೆ (ಪೇಪರ್ ಬ್ಯಾಕ್) ಒಂದು ರೀತಿಯ ಬೆಲೆ ನಿಗದಿ ಮಾಡಿದರೆ, ಹಾರ್ಡ್‌ಬೌಂಡ್ ಪುಸ್ತಕಗಳಿಗೆ ಸ್ವಲ್ಪ ಹೆಚ್ಚು ಬೆಲೆ ನಿಗದಿ ಮಾಡಲಾಗುತ್ತಿದೆ. ಪುಸ್ತಕದ ಪ್ರಕಾರ ಯಾವುದೇ ಇರಲಿ, ಪುಸ್ತಕವೊಂದು ರೂಪುಗೊಳ್ಳುವ ಪ್ರಕ್ರಿಯೆಯಲ್ಲಿ ಅದೆಷ್ಟೇ ಹಣ ವ್ಯಯವಾಗಿರಲಿ, ಅದ್ಯಾವುದೂ ಇಲ್ಲಿ ಪರಿಗಣನೆಗೆ ಬರುವುದೇ ಇಲ್ಲ. ಪುಟಕ್ಕೆ ಇಷ್ಟು ಎಂದು ಬೆಲೆ ನಿಗದಿಪಡಿಸಲಾಗುತ್ತಿದೆ.

ಸಗಟು ಖರೀದಿ ಸರಿಯಾಗಿ ನಡೆಯುತ್ತಿಲ್ಲವೆಂದು ದೂರುವ ಬರಹಗಾರರು, ಈ ಹಿಂದೆ ಖರೀದಿಸಲಾದ ತಮ್ಮ ಪುಸ್ತಕಗಳು ಗ್ರಂಥಾಲಯಗಳ ಮೂಲಕ ಅದೆಷ್ಟು ಓದುಗರನ್ನು ತಲುಪುತ್ತಿವೆ ಎಂಬ ಕುರಿತು ಎಂದಾದರೂ ಚಿಂತಿಸಿದ್ದಾರೆಯೇ? ಪ್ರತಿವರ್ಷ ಸಾವಿರಾರು ಹೊಸ ಪುಸ್ತಕಗಳ 300ಕ್ಕೂ ಹೆಚ್ಚು ಪ್ರತಿಗಳನ್ನು ಖರೀದಿಸುತ್ತ ಬಂದಿರುವ ಗ್ರಂಥಾಲಯ ಇಲಾಖೆಯು ಅವುಗಳನ್ನು ವ್ಯವಸ್ಥಿತವಾಗಿ ಓದುಗರಿಗೆ ತಲುಪಿಸಲು ಮುತುವರ್ಜಿ ತೋರುತ್ತಿದೆಯೇ? ಹೊಸ ಪುಸ್ತಕಗಳನ್ನು ಜೋಡಿಸಿಡಲು ಗ್ರಂಥಾಲಯಗಳಲ್ಲಿ ಸ್ಥಳಾವಕಾಶ ಕಲ್ಪಿಸಲಾಗುತ್ತಿದೆಯೇ? ಸಗಟು ಖರೀದಿಗೂ ಓದುಗರ ಆಸಕ್ತಿ, ಅಭಿರುಚಿಗೂ ಹೊಂದಾಣಿಕೆ ಆಗುತ್ತಿದೆಯೇ? ಎಷ್ಟೋ ವರ್ಷಗಳಿಂದ ಗ್ರಂಥಾಲಯದ ಕಪಾಟುಗಳಲ್ಲಿದ್ದರೂ ಒಮ್ಮೆಯೂ ಓದುಗರು ಎರವಲು ಪಡೆಯದ ಪುಸ್ತಕಗಳು ಎಷ್ಟಿರಬಹುದು?

ಸಾರ್ವಜನಿಕ ಗ್ರಂಥಾಲಯವೆಂಬ ಅರಿವಿನ ಹೆದ್ದಾರಿಯಲ್ಲಿ ಪಯಣಿಸುವ ಸಾಮಾನ್ಯ ಓದುಗರ ಕುರಿತು ಕೂಡ ಬರಹಗಾರರು, ಪ್ರಕಾಶಕರು ಚಿಂತಿಸಬೇಕಲ್ಲವೇ? ಹೊಸ ಓದುಗರಾದ ವಿದ್ಯಾರ್ಥಿಗಳಿಗೆ ಪರಿಚಯಿಸಲು ಹೆಚ್ಚು ಮುತುವರ್ಜಿ ತೋರುವ ಅಗತ್ಯವಿಲ್ಲವೇ? ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ಯುವಜನರೇ ಹೆಚ್ಚಾಗಿ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಾಣಸಿಗುತ್ತಾರೆ.



ಗ್ರಂಥಾಲಯಗಳಿಗೆ ಹೊಸ ಓದುಗರನ್ನು ಸೆಳೆಯುವ ಹಾಗೂ ಸದ್ಯ ಇರುವ ಓದುಗರ ಅಗತ್ಯಗಳನ್ನು ಪೂರೈಸುವಲ್ಲಿ ಗಮನಾರ್ಹ ಕೆಲಸಗಳು ಆಗುತ್ತಿಲ್ಲ. ಎಷ್ಟೋ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರದ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯದಂತಹ ಮೂಲ ಸೌಕರ್ಯಗಳೂ ಇಲ್ಲ. ಈ ಸೌಲಭ್ಯಗಳಿರುವ ಹಲವೆಡೆ, ಅಸಮರ್ಪಕ ನಿರ್ವಹಣೆ ಹಾಗೂ ದುರ್ಬಳಕೆಯಿಂದ ಬಹುತೇಕ ವೇಳೆಯಲ್ಲಿ ಅವು ಬಳಸುವ ಸ್ಥಿತಿಯಲ್ಲಿ ಇರುವುದಿಲ್ಲ.

ಬೇಡಿಕೆಗೆ ತಕ್ಕಷ್ಟು ಮುದ್ರಿಸುವ (ಪ್ರಿಂಟ್ ಆನ್ ಡಿಮ್ಯಾಂಡ್) ಸೌಲಭ್ಯ ಬಳಸಿಕೊಂಡು ಬೇಡಿಕೆ ಮತ್ತು ಅಗತ್ಯಕ್ಕೆ ತಕ್ಕಷ್ಟು ಪುಸ್ತಕಗಳನ್ನು ಮುದ್ರಿಸುವ ಸಾಧ್ಯತೆ ತೆರೆದುಕೊಂಡಿರುವ ಪ್ರಸ್ತುತ ಸಂದರ್ಭದಲ್ಲಿ, ಲೇಖಕರು ಸಗಟು ಖರೀದಿಯ ಮೇಲೆ ಅವಲಂಬಿತರಾಗಬೇಕಾದ ಅನಿವಾರ್ಯ ಇಲ್ಲ. ಲೇಖಕರು ಹಾಗೂ ಪ್ರಕಾಶಕರ ಹಿತ ಕಾಯುವ ಹೆಸರಿನಲ್ಲಿ ತೀರಾ ಕಳಪೆ ಪುಸ್ತಕಗಳನ್ನೆಲ್ಲ ಖರೀದಿಸಿ ಗ್ರಂಥಾಲಯಗಳಲ್ಲಿ ಒಟ್ಟುವ ಬದಲಿಗೆ, ಗುಣಮಟ್ಟದ ಪುಸ್ತಕಗಳನ್ನು ಓದುಗರಿಗೆ ಲಭ್ಯವಾಗಿಸುವುದು ಆದ್ಯತೆಯಾಗಬೇಕು.

ಸಗಟು ಖರೀದಿಗೆ ಸಲ್ಲಿಸದ, ಆಯ್ಕೆ ಸಮಿತಿಯ ರಾಜಕೀಯ ಒಲವು ನಿಲುವಿನ ಕಾರಣಕ್ಕೆ ಆಯ್ಕೆ ಪಟ್ಟಿಯಿಂದ ಹೊರಗಿಡಲಾಗುವ ಉತ್ತಮ ಪುಸ್ತಕಗಳೂ ಓದುಗರಿಗೆ ಲಭ್ಯವಾಗಬೇಕಲ್ಲವೇ? ಕನ್ನಡ ಪುಸ್ತಕ ಲೋಕಕ್ಕೆ ಗ್ರಂಥಾಲಯಗಳು ಸಗಟು ಖರೀದಿಗಷ್ಟೇ ಇದ್ದರೆ ಸಾಕೆ? ಓದುವ ಅಭಿರುಚಿ ಬೆಳೆಸಲು ಗ್ರಂಥಾಲಯಗಳ ಸದ್ಬಳಕೆ ಆಗುವುದು ಬೇಡವೇ?

ವಾಚಕರ ವಾಣಿ

ದೇಶದ ಸವಾಲುಗಳ ಬಗ್ಗೆ ನಡೆಯಲಿ ಚಿಂತನೆ

ಶಿವಮೊಗ್ಗದಲ್ಲಿ ಸಾವರ್ಕರ್ ಮತ್ತು ಟಿಪ್ಪು ಸುಲ್ತಾನ್ ಅವರ ಫ್ಲೆಕ್ಸ್ ಅಳವಡಿಸುವ ವಿಚಾರದಲ್ಲಿ ಎರಡು ಗುಂಪುಗಳ ನಡುವೆ ವಾಗ್ವಾದ ನಡೆದು, ಅದು ಬಿಗುವಿನ ವಾತಾವರಣಕ್ಕೆ ಕಾರಣವಾಗಿದ್ದು ವಿಷಾದಕರ. ಫ್ಲೆಕ್ಸ್ ಹಾಕುವುದು ಅಥವಾ ಹಾಕದೇ ಇರುವುದರಿಂದ ಇಬ್ಬರೂ ನಾಯಕರ ಬಗೆಗಿನ ನಮ್ಮ ಅಭಿಪ್ರಾಯ ಬದಲಾಗುವುದಿಲ್ಲ. ಮೆಚ್ಚುಗೆ ಹಾಗೂ ವಿರೋಧವು ಪ್ರಜಾತಂತ್ರ ವ್ಯವಸ್ಥೆಯ ಲಕ್ಷಣವಾಗಿದ್ದು, ಭಿನ್ನಾಭಿಪ್ರಾಯಗಳನ್ನು ಪರಸ್ಪರ ಗೌರವಿಸುವಂತಾದರೆ ಆರೋಗ್ಯಯುತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

ದುರದೃಷ್ಟವೆಂದರೆ, ಇಂಥ ವಿಚಾರಗಳ ಬಗ್ಗೆ ಅನವಶ್ಯಕವಾಗಿ ಉದ್ವಿಗ್ನ ವಾತಾವರಣ ಉಂಟಾಗಿ, ಅದು ಜನಸಾಮಾನ್ಯರ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇದರ ಅಗತ್ಯವಿದೆಯೇ? ಸ್ವಾತಂತ್ರ್ಯ ದಿನಾಚರಣೆ ಹಾಗೂ ಗಣರಾಜ್ಯೋತ್ಸವದಂಥ ರಾಷ್ಟ್ರೀಯ ಸಂಭ್ರಮದ ಆಚರಣೆಗಳಲ್ಲಿ ಜನರು ರಾಜಕೀಯ ಪ್ರೇರಿತ ಭಾವನೆಗಳಿಂದ ದೂರವಿರಬೇಕು. ಸ್ವಾತಂತ್ರ್ಯಾನಂತರದ ನಮ್ಮ ಸಾಧನೆಗಳನ್ನು ಸ್ಮರಿಸಬೇಕು. ಕೊರತೆಗಳನ್ನು ಗುರುತಿಸಬೇಕು ಮತ್ತು ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕು. ಸಮಸ್ಯೆಗಳ ನಿವಾರಣೆಗೆ ಬೇಕಾದ ಪರಿಹಾರೋಪಾಯಗಳ ಬಗ್ಗೆ ಗಮನಹರಿಸುವ ಕಡೆ ನಮ್ಮ ಚರ್ಚೆ, ಚಿಂತನೆಗಳು ಹೊರಳಬೇಕು.

ಡಾ. ಜಿ.ಬೈರೇಗೌಡ, ಬೆಂಗಳೂರು

ಕರಿನೀರಿನ ಶಿಕ್ಷೆ ವಿಧಿಸಿದ್ದೇಕೆ?

'ಜಾಣಕುರುಡು' ಎಂಬ ಪದಕ್ಕೆ ವೈ.ಗ.ಜಗದೀಶ್ ಅವರ ಲೇಖನದಲ್ಲಿನ (ಪ್ರ.ವಾ., ಆ. 16) 'ಬ್ರಿಟಿಷರ ವಿರುದ್ಧ ಸಾವರ್ಕರ್ ಎಲ್ಲಿ ಹೋರಾಡಿದರು?' ಎಂಬ ಸಾಲು ಉತ್ತಮ ಉದಾಹರಣೆ. ಹಾಗಾದರೆ ಬ್ರಿಟಿಷ್ ಸರ್ಕಾರವು ಸಾವರ್ಕರ್ ಅವರಿಗೆ ಕರಿನೀರಿನ ಶಿಕ್ಷೆಯನ್ನು ಯಾಕೆ ವಿಧಿಸಿತು? ಉನ್ನತ ವ್ಯಾಸಂಗ ಮಾಡಿದ ವ್ಯಕ್ತಿ ತನ್ನ ತುಂಬು ಯೌವನದ ಹದಿಮೂರು ವರ್ಷಗಳನ್ನು, ನರಕ ಎಂದೇ ಕುಖ್ಯಾತವಾಗಿದ್ದ ದೂರದ ಜೈಲಿನಲ್ಲಿ ಕಳೆದಿದ್ದು ಸುಳ್ಳೇ?

ಆ ನರಕಸದೃಶ ಜೈಲಿನಲ್ಲಿ ಅದೆಷ್ಟೋ ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅಥವಾ ನಿಶ್ಶಕ್ತರಾಗಿ ಅನಾರೋಗ್ಯಕ್ಕೆ ತುತ್ತಾಗಿ ಸತ್ತಿದ್ದಾರೆ. ಸಾವರ್ಕರ್ ತೆಗೆದುಕೊಂಡ ತೀರ್ಮಾನ ಸರಿಯಾಗಿತ್ತು. ಆ ನರಕದಿಂದ ಪಾರಾಗಲು ಯಾರೇ ಆಗಲಿ ಹಾಗೇ ಮಾಡುತ್ತಿದ್ದರು.

ಸುಬ್ರಮಣ್ಯ ಮಾಚಿಕೊಪ್ಪ, ಕಲ್ಕೆರೆ, ಕೊಪ್ಪ

ಸಾಧನೆಗಳನ್ನು ಅವಲೋಕಿಸಿದರೆ ಸತ್ಯ ಗೋಚರಿಸುತ್ತದೆ

ಸತ್ಯವನ್ನು ತಿರುಚಿ, ಸುಳ್ಳುಗಳನ್ನೇ ಪೋಣಿಸಿ ಅದನ್ನೇ ಸತ್ಯವೆಂದು ಬಿಂಬಿಸುತ್ತಿರುವ ಈ ಕಾಲಘಟ್ಟದಲ್ಲಿ ವೈ.ಗ. ಜಗದೀಶ್ ಅವರ ಲೇಖನವು ವೃತ್ತಿಧರ್ಮವನ್ನು ಎತ್ತಿ ಹಿಡಿದಿದೆ. ಸ್ವಾತಂತ್ರ್ಯೋತ್ತರ ಭಾರತದ ಸಾಧನೆಗಳನ್ನು ಅವಲೋಕಿಸಿದರೆ ದೇಶದ ಅಭಿವೃದ್ಧಿಗೆ ಯಾರು ಕಾರಣ ಎಂಬುದು ಸ್ಪಷ್ಟವಾಗಿ ಯಾರಿಗಾದರೂ ಗೋಚರವಾಗುತ್ತದೆ.

ಎಚ್.ಎಸ್. ಚಂದ್ರಶೇಖರ, ಬೆಂಗಳೂರು

ಸುಬ್ಬಣ್ಣಗೆ ಪ್ರಶಸ್ತಿ ಬಂದಾಗ...

ಇತ್ತೀಚೆಗೆ ನಿಧನರಾದ ಗಾಯಕ ಶಿವಮೊಗ್ಗ ಸುಬ್ಬಣ್ಣ ಅವರನ್ನು ಕುರಿತ ಒಂದು ಪ್ರಸಂಗ ನೆನಪಾಗುತ್ತದೆ. ಅವರು ಪ್ರಸಿದ್ಧರಾಗಿದ್ದು 'ಕಾಡು ಕುದುರೆ ಓಡಿ ಬಂದಿತ್ತಾ...' ಹಾಡಿಗೆ 'ರಜತಕಮಲ' ಪ್ರಶಸ್ತಿ ಬಂದ ನಂತರ. ಆದರೆ ಅವರಿಗೆ ಆ ಪ್ರಶಸ್ತಿಯ ಸಮಾಚಾರ ತಲುಪಿದ ರೀತಿ ಸ್ವಾರಸ್ಯಕರವಾಗಿದೆ. ಶಿವಮೊಗ್ಗದಲ್ಲಿ ಅವರು ವಕೀಲರಾಗಿದ್ದರು. ಒಮ್ಮೆ ಅವರು ಕುಟುಂಬ ಸಮೇತ ತಮ್ಮ ಊರು 'ನಗರ'ಕ್ಕೆ ಹೋಗಿದ್ದರು. ಪತ್ನಿ ಮತ್ತು ಮಕ್ಕಳನ್ನು ಕೆಲವು ದಿನಗಳ ಮಟ್ಟಿಗೆ ಊರಿನಲ್ಲಿಯೇ ಬಿಟ್ಟು ಅವರೊಬ್ಬರೇ ಮಾರನೆಯ ದಿನ ಶಿವಮೊಗ್ಗಕ್ಕೆ ಬಂದರು. ಆದರೆ ಮನೆಯ ಬೀಗದ ಕೈಯನ್ನು ತರಲು ಮರೆತಿದ್ದರು. ಮತ್ತೆ ವಾಪಸ್ ಬಸ್ಸಿನಲ್ಲಿ ಊರಿಗೆ ಹೊರಟರು. ಈ ನಡುವೆ ಅವರ ಮನೆಯ ಲ್ಯಾಂಡ್ ಲೈನಿಗೆ ದೆಹಲಿಯಿಂದ ಒಂದು ಫೋನ್ ಕರೆ ಬಂದಿತ್ತು. ಆದರೆ ಆಗ ಮನೆಯಲ್ಲಿ ಯಾರೂ ಇರಲಿಲ್ಲ.

ಬಸ್ಸಿನಲ್ಲಿ ಯಾರೋ ಒಬ್ಬರು ಆಕಾಶವಾಣಿಯ ದೆಹಲಿ ವಾರ್ತೆಯನ್ನು ಜೋರಾಗಿ ಆನ್ ಮಾಡಿದರು. ಆಗ 'ಶಿವಮೊಗ್ಗ ಸುಬ್ಬಣ್ಣ ಅವರಿಗೆ ರಾಷ್ಟ್ರ ಪ್ರಶಸ್ತಿ'ಯ ಸಮಾಚಾರ ಪ್ರಸಾರವಾಯಿತು. ಬಸ್ಸಿನಲ್ಲಿ ಎಲ್ಲರಿಗೂ ತೀವ್ರ ಕುತೂಹಲ. 'ಶಿವಮೊಗ್ಗ ಸುಬ್ಬಣ್ಣ ಅಂದರೆ ಯಾರ್ರೀ?', 'ಅವರ ಹೆಸರನ್ನು ಯಾರೂ ಕೇಳೇ ಇಲ್ಲ' ಹೀಗೆ ತರಹೇವಾರಿ ಚರ್ಚೆಗಳು...! ಆಗ ಯಾರೋ ಒಬ್ಬರು 'ಸುಬ್ರಹ್ಮಣ್ಯ ಅಂತ ಒಬ್ಬರು ಅಡ್ವೊಕೇಟ್ ಇದ್ದಾರೆ. ರಾಜ್ಯೋತ್ಸವ, ಗಣೇಶೋತ್ಸವ ಕಾರ್ಯಕ್ರಮಗಳಲ್ಲಿ ಹಾಡ್ತಾ ಇರ್ತಾರೆ. ಅವರೇ ಕಣ್ರೀ ಈ ಸುಬ್ಬಣ್ಣ' ಎಂದು ವಿವರಣೆ ಕೊಟ್ಟರು. ಆದರೆ ಸುಬ್ಬಣ್ಣ ಮಾತ್ರ ಇದನ್ನೆಲ್ಲಾ ಕೇಳಿಸಿಕೊಳ್ಳುತ್ತಾ ಮೌನವಾಗಿ ಎಂಜಾಯ್ ಮಾಡುತ್ತಾ ಕುಳಿತುಕೊಂಡಿದ್ದರಂತೆ (ಒಮ್ಮೆ ಅವರೇ ಈ ಘಟನೆ ಬಗ್ಗೆ ಹೇಳಿಕೊಂಡಿದ್ದರು).

ಸಿ.ರುದ್ರಪ್ಪ, ಬೆಂಗಳೂರು

ಗೌರವ ಸಂಪಾದಿಸಿದ್ದ ಹೂಡಿಕೆದಾರ

ಇತ್ತೀಚೆಗಷ್ಟೇ 'ಆಕಾಸ' ಎಂಬ ತಮ್ಮ ವಾಯುಯಾನ ಸಂಸ್ಥೆಯ ಮೊದಲ ವಿಮಾನವು ಗಗನದಲ್ಲಿ ಚಿಮ್ಮಿದಾಗ ಖುಷಿಪಟ್ಟ, ಪ್ರವರ್ತಕರಲ್ಲಿ ಒಬ್ಬರಾದ ರಾಕೇಶ್ ಜುಂಝುನ್‌ವಾಲಾ ಅವರು ಅದಾದ ಒಂದೇ ವಾರದಲ್ಲಿ ತಮ್ಮ ಜೀವನ ಪಯಣವನ್ನು ಮುಗಿಸಿದುದು ವಿಪರ್ಯಾಸ. ಕಂಪನಿಗಳ ಸಾಧಕ ಬಾಧಕಗಳನ್ನು ಅಭ್ಯಸಿಸಿ ಹೂಡಿಕೆ ಮಾಡುತ್ತಿದ್ದ ಅವರನ್ನು ಬಹಳಷ್ಟು ಹೂಡಿಕೆದಾರರು ಅನುಸರಿಸುತ್ತಿದ್ದರು.

ಈ ಹಿಂದೆ, ನಮ್ಮ ಷೇರುಪೇಟೆಗಳಲ್ಲಿ ಹಲವು ಹೂಡಿಕೆದಾರರು ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದು ಇದೆ. ಅವರು ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಂಡಿದ್ದು ಬಯಲಿಗೆ ಬಂದು, ಮಾರುಕಟ್ಟೆ ಕುಸಿದ ನಿದರ್ಶನಗಳು ನಮ್ಮ ಕಣ್ಣ ಮುಂದಿವೆ. ಆದರೆ ಜುಂಝುನ್‌ವಾಲಾ ಅವರ ವ್ಯವಹಾರವು ಸೀದಾ ಸಾದಾ ಇದ್ದುದರಿಂದ ಅಂತಹವರ ಬಗ್ಗೆ ಕಾರ್ಪೊರೇಟ್ ವಲಯದಲ್ಲಿ ಗೌರವ ಜಾಸ್ತಿ ಇತ್ತು.

ಬಿ.ಎನ್.ಭರತ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಕಾಮನ್‌ವೆಲ್ತ್ ಕ್ರೀಡಾಕೂಟ

ಭಾರತದ ಬಾಲೆಯರ ಬಂಗಾರದ ಬೆಡಗು

ಜಾಗತಿಕ ಮಟ್ಟದ ಕ್ರೀಡಾಕೂಟಗಳಲ್ಲಿ ಭಾರತದ ಕ್ರೀಡಾಳುಗಳು ಬೆರಳೆಣಿಕೆಯ ಪದಕಗಳೊಂದಿಗೆ ದೇಶಕ್ಕೆ ಮರಳುತ್ತಿದ್ದ ದಿನಗಳು ಬಹಳ ಹಿಂದಿನ ಕತೆ ಏನೂ ಅಲ್ಲ. ಆದರೆ, ಇತ್ತೀಚಿನ ಕೆಲ ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕಗಳ ಸುರಿಮಳೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದ ಸವಿಯನ್ನು ಇನ್ನಷ್ಟು ಹೆಚ್ಚಿಸಿದೆ. ಮಹಿಳಾ ಕ್ರೀಡಾಳುಗಳ ಸಾಧನೆ ಹುಬ್ಬೇರಿಸುವಂತೆ ಮಾಡಿದೆ. ಭಾರತದ ನಾರಿಯರು ಒಟ್ಟು 28 ಪದಗಳನ್ನು ಗೆದ್ದಿದ್ದಾರೆ. ಅದರ ಪೈಕಿ 9 ಪದಕಗಳು ಬಂಗಾರದ್ದು ಎಂಬುದು ಈ ಸಾಧನೆಯ ಮಹತ್ವವನ್ನು ಸಾರುತ್ತದೆ. ಉಳಿದಂತೆ 10 ಬೆಳ್ಳಿ ಮತ್ತು 9 ಕಂಚಿನ ಪದಕಗಳು. ಪಿ.ವಿ.ಸಿಂಧು, ಸಾಕ್ಷಿ ಮಲಿಕ್, ವಿನೇಶ್ ಪೋಗಟ್, ಮೀರಾ ಬಾಯಿ ಚಾನು ಅವರಂತಹ ಅನುಭವಿಗಳ ಜತೆಗೆ, ಈ ಬಾರಿ ಭವೀನಾ ಪಟೇಲ್, ನೀತು, ನಿಖತ್ ಜರೀನ್ ಮತ್ತು ಶ್ರೀಜಾ ಅವರಂತಹ ಉದಯೋನ್ಮುಖ ಆಟಗಾರ್ತಿಯರು ಚಿನ್ನಕ್ಕೆ ಕೊರಳೊಡ್ಡಿ ಭರವಸೆ ಮೂಡಿಸಿದರು. ಭಾರತದ ಬಂಗಾರದ ಬೆಡಗಿಯರ ಕುರಿತ ಸ್ಫೂರ್ತಿದಾಯಕ ವಿವರಗಳು ಇಲ್ಲಿವೆ

ಶಿಕ್ಷಕಿಯಾಗಬೇಕಿದ್ದವರ ಪದಕ ಬೇಟೆ

ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದಿದ್ದರೂ, ಅಂಗವೈಕಲ್ಯದ ಕಾರಣ ಸಂದರ್ಶನದ ಸಂದರ್ಭದಲ್ಲಿ ಆ ಯುವತಿಗೆ ಕೆಲಸ ಸಿಗದೇ ಹೋಗುತ್ತದೆ. ಸಾಮಾನ್ಯರಂತೆ ನಡೆದಾಡಲು ಅವರಿಗೆ ಸಾಧ್ಯವಿಲ್ಲ ಎಂಬ ಒಂದೇ ಕಾರಣದಿಂದ ಅವರಿಗೆ ಶಿಕ್ಷಕಿಯ ಹುದ್ದೆಯನ್ನು ನಿರಾಕರಿಸಲಾಗುತ್ತದೆ. ಶಿಕ್ಷಕಿಯಾಗಬೇಕು ಎಂದು ಚಿಕ್ಕಂದಿನಿಂದ ಕಂಡಿದ್ದ ಕನಸು, ತನ್ನದಲ್ಲದ ತಪ್ಪಿನಿಂದಾಗಿ ಆ ಯುವತಿಯ ಕೈತಪ್ಪಿಹೋಗುತ್ತದೆ. ಆದರೆ ವಾರದ ಹಿಂದಷ್ಟೇ ಅವರು ದೇಶಕ್ಕಾಗಿ ಚಿನ್ನದ ಪದಕ ತಂದುಕೊಟ್ಟಿದ್ದಾರೆ. ಅದು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕಾಗಿ ಅವರು ತಂದುಕೊಟ್ಟ 28ನೇ ಪದಕ. 2007ರಲ್ಲಿ ಅವರಿಗೆ ಶಿಕ್ಷಕಿಯ ಹುದ್ದೆ ದೊರೆತಿದ್ದಿದ್ದರೆ, ಬಹುಶಃ ಭಾರತಕ್ಕೆ ಅಷ್ಟೊಂದು ಪದಕಗಳು ಕೈತಪ್ಪಿಹೋಗುತ್ತಿದ್ದವು.

ಈಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಪ್ಯಾರಾ ಟೇಬಲ್ ಟೆನಿಸ್‌ನಲ್ಲಿ ಭಾರತಕ್ಕೆ ಚಿನ್ನ ತಂದುಕೊಟ್ಟ ಭವೀನಾ ಪಟೇಲ್ ಅವರ ಕಥೆಯಿದು. ಹುಟ್ಟಿದಂದಿನಿಂದ ಒಂದು–ಒಂದೂವರೆ ವರ್ಷದವರೆಗೂ ಸಾಮಾನ್ಯ ಮಕ್ಕಳಂತೆಯೇ ಇದ್ದ ಭವೀನಾ ಅವರ ಕಾಲುಗಳ ಶಕ್ತಿಯನ್ನು ಕಿತ್ತುಕೊಂಡದ್ದು ಪೋಲಿಯೊ.

ಶಿಕ್ಷಕಿ ಹುದ್ದೆಗೆ ತಿರಸ್ಕೃತರಾದ ನಂತರ ಭವೀನಾ ಅವರು ಬ್ಲೈಂಡ್ ಪೀಪಲ್ಸ್ ಅಸೋಸಿಯೇಷನ್‌ನಲ್ಲಿ ಐಟಿಐ ಕೋರ್ಸ್‌ಗೆ ಸೇರಿದರು. ಆದರೆ, ಅಲ್ಲಿ ಅವರ ಆಸಕ್ತಿ ಸೆಳೆದದ್ದು ಟೇಬಲ್ ಟೆನಿಸ್. ಹೀಗೆ ಭವೀನಾ ಅವರು ಟೇಬಲ್ ಟೆನಿಸ್ ಆಡಲು ಆರಂಭಿಸಿದ್ದೇ 2007ರಲ್ಲಿ. ಆದರೆ, ನಾಲ್ಕೇ ವರ್ಷಗಳಲ್ಲಿ ಅವರು ಅದರಲ್ಲಿ ಮಾಸ್ಟರ್ ಎನಿಸಿದ್ದರು. 2011ರಲ್ಲಿ ಥಾಯ್ಲೆಂಡ್‌ನಲ್ಲಿ ನಡೆದ ಪ್ಯಾರಾ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಬೆಳ್ಳಿಯ ಪದಕ ಗೆದ್ದರು. ಜತೆಗೆ ವಿಶ್ವ ರ‍್ಯಾಂಕಿಂಗ್‌ನಲ್ಲಿ 2ನೇ ಸ್ಥಾನಕ್ಕೆ ಏರಿದರು. ಅಲ್ಲಿಂದ ಅವರು ಹಿಂದಿರುಗಿ ನೋಡಿದ್ದೇ ಇಲ್ಲ.



ಸೋತು, ಗೆದ್ದ ಶ್ರೀಜಾ

ಆಗಸ್ಟ್ 7: ಕಾಮನ್‌ವೆಲ್ತ್ ಕ್ರೀಡಾಕೂಟದ ಮಹಿಳಾ ಟೇಬಲ್ ಟೆನಿಸ್‌ನ ಸೆಮಿಫೈನಲ್ ಪಂದ್ಯ. ಒಂದೆಡೆ ಭಾರತವನ್ನು ಪ್ರತಿನಿಧಿಸುತ್ತಿದ್ದ 24 ವರ್ಷದ ಶ್ರೀಜಾ ಅಕುಲಾ ಅವರ ಆರಂಭ ಉತ್ತಮವಾಗಿತ್ತು. ಮೊದಲ ಸೆಟ್‌ನಲ್ಲಿ ಅವರು ತಮ್ಮ ಎದುರಾಳಿ ಆಸ್ಟ್ರೇಲಿಯಾದ ಯಂಗ್ಜಿ ಲ್ಯೂ ಅವರನ್ನು 11–3ರ ಅಂತರದಿಂದ ಮಣಿಸಿದ್ದರು.

ಮೊದಲ ಸೆಟ್‌ನಲ್ಲಿನ ಶ್ರೀಜಾ ಅವರ ಆಟವು ಮಹಿಳಾ ಟಿಟಿಯಲ್ಲಿ ಭಾರತಕ್ಕೆ ಮತ್ತೊಂದು ಪದಕ ದೊರೆಯುತ್ತದೆ ಎಂಬ ನಿರೀಕ್ಷೆಯನ್ನು ಹುಟ್ಟುಹಾಕಿತ್ತು. ಆದರೆ, ನಂತರದ ಸೆಟ್‌ಗಳಲ್ಲಿ ಅವರು ಹಿನ್ನಡೆ ಅನುಭವಿಸಿದರು. ಒಟ್ಟು ಮೂರು ಸೆಟ್‌ಗಳನ್ನು ಗೆದ್ದರೂ, ಎದುರಾಳಿಗೆ ನಾಲ್ಕು ಸೆಟ್‌ಗಳನ್ನು ಬಿಟ್ಟುಕೊಟ್ಟಿದ್ದರು. ಇದರಿಂದಾಗಿ ಪದಕದ ಆಸೆ ಕಮರಿತು. ಆದರೆ, ಆ ಬೇಸರ ಕೆಲವು ಗಂಟೆಗಳದ್ದಾಗಿತ್ತು ಅಷ್ಟೆ. ಅದೇ ದಿನ ನಡೆದ ಮಿಶ್ರ ಡಬಲ್ ಟಿಟಿಯಲ್ಲಿ ಶ್ರೀಜಾ ಮತ್ತು ಶರತ್ ಕಮಲ್ ಅವರ ಜೋಡಿ ಚಿನ್ನದ ಪದಕ ಗೆದ್ದಿತು.

ತೆಲಂಗಾಣದವರಾದ ಶ್ರೀಜಾ ಅವರು ಟಿಟಿ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಹೈದರಾಬಾದ್ ಪರವಾಗಿ 58 ವರ್ಷಗಳ ನಂತರ ಚಿನ್ನ ಗೆದ್ದು ಹೆಸರು ಮಾಡಿದ್ದರು. 1964ರಲ್ಲಿ ಮೀರ್ ಖಾಸಿಂ ಆಲಿ ಅವರು ಹೈದರಾಬಾದ್ ಅನ್ನು ಪ್ರತಿನಿಧಿಸಿ, ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಗೆದ್ದಿದ್ದರು. ಆನಂತರ ಹೈದರಾಬಾದ್‌ನವರೊಬ್ಬರು ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ ಗೆದ್ದದ್ದು, 2022ರಲ್ಲೇ.



ಮಹಿಳೆಯರ ಲಾನ್ ಬಾಲ್ಸ್ ತಂಡ ವಿಭಾಗದಲ್ಲಿ ಭಾರತದ ಕೀರ್ತಿಪತಾಕೆ ಹಾರಿಸಿದ ಲವ್ಲಿ ಚೌಬೆ, ಪಿಂಕಿ, ನಯನ್‌ಮೋನಿ ಸಾಕಿಯಾ ಹಾಗೂ ರೂಪಾರಾಣಿ ಟಿರ್ಕೆ ಅವರು ಚಿನ್ನದ ಪದಕ ಪ್ರದರ್ಶಿಸಿದರು —ಪಿಟಿಐ ಚಿತ್ರ

ಸೋಲುಗಳಿಗೆ ಸವಾಲೆಸೆದ ನೀತು ಘಣಘಸ್

ಹರಿಯಾಣದ ಭಿವಾನಿ ಜಿಲ್ಲೆಯ ಧನಾನಾ ಎಂಬ ಚಿಕ್ಕ ಗ್ರಾಮದಲ್ಲಿ 2000ನೇ ಇಸ್ವಿಯಲ್ಲಿ ಹುಟ್ಟಿದ ನೀತು ಘಣಘಸ್ ಇಂದು ಬಾಕ್ಸಿಂಗ್ ಕ್ಷೇತ್ರದ ನಕ್ಷತ್ರವಾಗಿ ಹೊಳೆಯುತ್ತಿದ್ದಾರೆ. ಆದರೆ, ಈ ಹೆಸರು, ಪ್ರಶಸ್ತಿಗಳು ಸುಲಭಕ್ಕೆ ದಕ್ಕಿದವಲ್ಲ. ಯಶಸ್ಸಿನ ಹಿಂದೆ ಕಷ್ಟದ ದಿನಗಳ ಕಥೆಯಿದೆ. ಅದು 2012ರ ಆರಂಭದ ದಿನಗಳು. 12 ವರ್ಷದ ನೀತು ಅವರ ಚಿತ್ತ ಬಾಕ್ಸಿಂಗ್‌ನತ್ತ ಹರಿಯಿತು. ಆದರೆ, ಅವರಿದ್ದ ಊರಿನಿಂದ ಬಾಕ್ಸಿಂಗ್ ತರಬೇತಿ ನೀಡುತ್ತಿದ್ದ ಕೇಂದ್ರಕ್ಕೆ 20 ಕಿಲೋಮೀಟರ್ ಅಂತರವಿತ್ತು. ದೃಢನಿಶ್ಚಯ ಮಾಡಿದ್ದ ನೀತು, ಪ್ರತಿನಿತ್ಯವೂ ಬಸ್‌ನಲ್ಲಿ ಪ್ರಯಾಣ ಮಾಡಿ ಬಾಕ್ಸಿಂಗ್ ತರಬೇತಿಗೆ ಸೇರಿಕೊಂಡರು. ಈ ಓಡಾಟ, ಅಭ್ಯಾಸ, ಆರಂಭದ ಸೋಲುಗಳಿಂದ ಧೃತಿಗೆಟ್ಟ ಅವರು, ಕ್ರೀಡೆಯನ್ನೇ ತೊರೆಯಬೇಕು ಎಂದು ಒಮ್ಮೆ ಯೋಚಿಸಿದ್ದೂ ಉಂಟು. ಆದರೆ, ತಂದೆ ಜೈ ಭಗವಾನ್ ಅವರ ಗಟ್ಟಿ ಬೆಂಬಲದಿಂದ ಮನಸ್ಸು ಬದಲಿಸಿದರು. ನೀತು ಅವರು ಮೊದಲ ಪದಕ ಪಡೆಯಲು ಐದು ವರ್ಷ ತೆಗೆದುಕೊಂಡರು. ಮಗಳ ಪರಿಶ್ರಮ, ಛಲವನ್ನು ಅರಿತ ತಂದೆ ತಮ್ಮ ವೃತ್ತಿಯನ್ನು ಕೆಲಕಾಲ ಬದಿಗಿಸಿರಿ, ನೆರವು ನೀಡಿದರು. ಹರಿಯಾಣದ ವಿಧಾನಸಭೆಯಲ್ಲಿ ಕೆಲಸ ಮಾಡುತ್ತಿದ್ದ ಅವರು, ಮಗಳ ಕ್ರೀಡಾ ಸಾಧನೆಗೆ ಸಮಯ ನೀಡಲು ಮೂರುವರ್ಷ ವೇತನರಹಿತ ರಜೆ ಪಡೆದಿದ್ದರು. ಕಾಮನ್‌ವೆಲ್ತ್‌ನಲ್ಲಿ ಮೊನ್ನೆ ಚಿನ್ನ ಗೆದ್ದ ನೀತು, ತಮ್ಮ ಸಾಧನೆಗೆ ಬೆನ್ನೆಲುಬಾಗಿ ನಿಂತ ತಂದೆಗೆ ಪ್ರಶಸ್ತಿಯನ್ನು ಅರ್ಪಿಸಿ ಧನ್ಯರಾದರು.





ಹುಡುಗರನ್ನು ಮಣ್ಣುಮುಕ್ಕಿಸಿದ್ದ ನಿಖತ್ ಜರೀನ್

ಅದು ನಿಜಾಮಾಬಾದ್‌ನ ವಿನಾಯಕ ನಗರದ ಪುಟ್ಟ ಮನೆ. ಮೂವರು ಅಕ್ಕತಂಗಿಯರಲ್ಲಿ ಕೊನೆಯವರಾಗಿ 1990ರಲ್ಲಿ ಜನಿಸಿದ ಜರೀನ್ ಸ್ವಭಾವತಃ ಹುಡುಗಾಟದ ಹುಡುಗಿ. ಏನಾದರೊಂದು ಕೀಟಲೆ ಮಾಡಿ ತಾಯಿಯಿಂದ ಬೈಸಿಕೊಳ್ಳುವುದು, ಏಟು ತಿನ್ನುವುದು ಸಾಮಾನ್ಯ ಸಂಗತಿಯಾಗಿತ್ತು. ಜರೀನ್ ಎಂಟನೇ ತರಗತಿ ಓದುತ್ತಿದ್ದಾಗ ತಮ್ಮ ತಂದೆಯೊಂದಿಗೆ ನಿಜಾಮಾಬಾದ್‌ನ ಕಲೆಕ್ಟರ್ ಮೈದಾನಕ್ಕೆ ವಾಯುವಿಹಾರಕ್ಕೆ ಹೋಗುತ್ತಿದ್ದರು. ಅದೇ ಮೈದಾನದಲ್ಲಿ ಕೆಲವು ಹುಡುಗರು ತರಬೇತುದಾರ ಸಂಶುದ್ದೀನ್ ಅವರಿಂದ ಬಾಕ್ಸಿಂಗ್ ಅಭ್ಯಾಸ ಮಾಡುತ್ತಿದ್ದರು. ಜರೀನ್‌ಗೆ ಬಾಕ್ಸಿಂಗ್ ಕಲಿಯುವ ಮನಸ್ಸಾಗಿ, ತಂದೆಗೆ ಹೇಳಿಯೇಬಿಟ್ಟರು. ಸ್ವತಃ ಕ್ರೀಡಾಪಟುವಾಗಿದ್ದ ಅವರ ತಂದೆ, ಬಾಕ್ಸಿಂಗ್‌ನಂತಹ ಕಠಿಣ ಸ್ಪರ್ಧೆ ಬೇಡ ಎಂದು ಮನವರಿಕೆ ಮಾಡಿಕೊಟ್ಟರು. ಆದರೆ ತಂದೆಯ ಮಾತನ್ನು ಕಿವಿಗೆ ಹಾಕಿಕೊಳ್ಳದ ಜರೀನ್, ಹಟ ಹಿಡಿದು ಹುಡುಗರ ಜೊತೆ ತರಬೇತಿಗೆ ಸೇರಿಕೊಂಡರು. ಬಾಕ್ಸಿಂಗ್ ಪಟ್ಟುಗಳನ್ನು ಕಲಿಯುವಾಗ ಹತ್ತಾರು ಗಾಯಗಳಾದರೂ, ಅವರ ಕಲಿಯುವ ಛಲ ಸೋಲಲಿಲ್ಲ. ಹುಡುಗರನ್ನೇ ಬಾಕ್ಸಿಂಗ್‌ನಲ್ಲಿ ಮಣ್ಣುಮುಕ್ಕಿಸಿ ಆತ್ಮವಿಶ್ವಾಸ ಹೆಚ್ಚಿಸಿ ಕೊಂಡರು. ಅಂದು ಅವರು ತಿಂದ ಪೆಟ್ಟುಗಳೇ ಇಂದು ಅವರ ಕೊರಳಿಗೆ ಚಿನ್ನದ ಪದಕವನ್ನು ತಂದು ಕೊಟ್ಟಿವೆ.

ಬ್ಯಾಡ್ಮಿಂಟನ್ ತಾರೆ



ಎರಡು ಒಲಿಂಪಿಕ್‌ಗಳಲ್ಲಿ ಭಾರತಕ್ಕೆ ಪದಕ ತಂದುಕೊಟ್ಟ ಶ್ರೇಯ ಹೊಂದಿರುವ ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಅವರು 2022ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಸಿಂಧು ಅವರಿಗೆ ಕ್ರೀಡೆ ಹೊಸದಲ್ಲ. ಅವರ ತಂದೆ ಮತ್ತು ತಾಯಿ ಇಬ್ಬರೂ ರಾಷ್ಟ್ರೀಯ ಮಟ್ಟದ ವಾಲಿಬಾಲ್ ಆಟಗಾರರು. ಆದರೆ ಸಿಂಧು ಅವರ ಆಸಕ್ತಿ ಹೊರಳಿದ್ದು ಬ್ಯಾಡ್ಮಿಂಟನ್ ಕಡೆಗೆ. ತಮ್ಮ ಎಂಟನೇ ವಯಸ್ಸಿನಲ್ಲೇ ಕೋರ್ಟ್‌ಗೆ ಇಳಿದ ಅವರದ್ದು ನಿರಂತರವಾದ ಯಶಸ್ಸು.

ಈಶಾನ್ಯದ ಚಿನ್ನದ ಹುಡುಗಿ



‘ಹೆಗಲ ಮೇಲೆ ಕಟ್ಟಿಗೆಯನ್ನು ಹೊತ್ತು ತರುತ್ತಿದ್ದ ಮಗಳು, ವೇಟ್‌ಲಿಫ್ಟಿಂಗ್‌ನಲ್ಲಿ ಇಡೀ ದೇಶದ ನಿರೀಕ್ಷೆಯ ಭಾರವನ್ನು ಹೊತ್ತು ಪದಕ ಗೆದ್ದಿದ್ದಾಳೆ’ – ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮೀರಾಬಾಯಿ ಚಾನು ಅವರು ಪದಕಕ್ಕೆ ಕೊರಳೊಡ್ಡಿದಾಗ ಅವರ ತಾಯಿ ಹೇಳಿದ ಮಾತಿದು. ಐವರು ಮಕ್ಕಳಲ್ಲಿ ಮೀರಾಬಾಯಿ ಕೊನೆಯವರು. ಒಂದೊಂದು ದಿನ ಮನೆಯ ಎಲ್ಲರಿಗೂ ಹೊಟ್ಟೆತುಂಬ ಊಟವೇ ಸಿಗುತ್ತಿರಲಿಲ್ಲ. ಸ್ವಂತ ಜಮೀನು ಇರಲಿಲ್ಲ. ಇಂತಹ ಕಷ್ಟದಲ್ಲೇ ಬೆಳೆದ ಮೀರಾಬಾಯಿ 2009ರಲ್ಲಿ ಜ್ಯೂನಿಯರ್ ನ್ಯಾಷನಲ್ ಚಾಂಪಿಯನ್ ಎನಿಸಿಕೊಂಡರು. ಈಗ ಕಾಮನ್‌ವೆಲ್ತ್ ಚಿನ್ನ ಅವರ ಪದಕಪಟ್ಟಿಗೆ ಸೇರಿದೆ.

ಕುಸ್ತಿ ಅಖಾಡದ ಸಾಕ್ಷಿ



2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಮಹಿಳಾ ಕುಸ್ತಿಯಲ್ಲಿ ಭಾರತಕ್ಕೆ ಕಂಚಿನ ಪದಕ ತಂದುಕೊಟ್ಟ ಸಾಕ್ಷಿ ಮಲಿಕ್ ಹರಿಯಾಣದವರು. ಅವರು ದೇಶಕ್ಕಾಗಿ ಪದಕ ಗೆದ್ದ ದಿನ, ಜನರು ಗೂಗಲ್‌ನಲ್ಲಿ ಹುಡುಕಿದ್ದು ಸಾಕ್ಷಿ ಅವರ ಧರ್ಮ ಯಾವುದು ಮತ್ತು ಜಾತಿ ಯಾವುದು ಎಂದು. ಆದರೆ, ಸಾಕ್ಷಿ ಅವರು ಇಂತಹದ್ದಕ್ಕೆ ಲಕ್ಷ್ಯವೇ ನೀಡಲಿಲ್ಲ. ಅವರ ಪದಕಗಳ ಬೇಟೆ ಮುಂದುವರಿದಿದೆ. ಕುಸ್ತಿಯ ಅಖಾಡದಲ್ಲಿ ತನ್ನ ತಾತನ ಪಟ್ಟುಗಳನ್ನು ನೋಡುತ್ತಾ, ತಾವೂ ಅಖಾಡಕ್ಕೆ ಇಳಿದವರು ಸಾಕ್ಷಿ. ತಮ್ಮ 12ನೇ ವಯಸ್ಸಿನಲ್ಲಿ ತರಬೇತಿ ಆರಂಭಿಸಿ, 17ನೇ ವಯಸ್ಸಿನಲ್ಲಿ ಏಷ್ಯನ್ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ದೇಶಕ್ಕಾಗಿ ಬೆಳ್ಳಿ ಪದಕ ಗೆದ್ದರು.

ಕುಸ್ತಿಯಲ್ಲಿ ಪಳಗಿದ ವಿನೇಶ್ ಪೋಗಟ್




ಕುಸ್ತಿಯಲ್ಲಿ ಹೆಸರು ಮಾಡಿದ್ದ ಹರಿಯಾಣದ ಗೀತಾ ಪೋಗಟ್ ಹಾಗೂ ಬಬಿತಾ ಪೋಗಟ್ ಅವರ ಕುಟುಂಬದಲ್ಲಿ ಹುಟ್ಟಿದ ವಿನೇಶ್ ಪೋಗಟ್ ಸಹ ಕ್ರೀಡೆಯಲ್ಲಿ ಮಿಂಚು ಹರಿಸಿದವರು. ತಮ್ಮ ಏಳನೇ ವಯಸ್ಸಿಗೇ ಕುಸ್ತಿ ಅಭ್ಯಾಸದಲ್ಲಿ ತೊಡಗಿದ ಅವರು ಹುಡುಗರಂತೆ ಕೂದಲು ಕತ್ತರಿಸಿಕೊಂಡು ಗೇಲಿಗೊಳಗಾಗಿದ್ದೂ ಉಂಟು. ಕೇವಲ ಕ್ರೀಡೆಯ ಕಡೆಗಷ್ಟೇ ಅವರ ಗಮನ ಇದ್ದುದರಿಂದ ಏಷ್ಯನ್ ಗೇಮ್ಸ್‌ನಲ್ಲಿ ಹಾಗೆಯೇ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಎರಡು ಬಾರಿ ಚಿನ್ನಕ್ಕೆ ಮುತ್ತಿಕ್ಕಲು ಸಾಧ್ಯವಾಯಿತು.

ಆಧಾರ: ಒಲಿಂಪಿಕ್ಸ್ ಅಧಿಕೃತ ಜಾಲತಾಣ, ಕಾಮನ್‌ವೆಲ್ತ್ ಸ್ಪೋರ್ಟ್ಸ್ ಅಧಿಕೃತ ಜಾಲತಾಣ, ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಶಿವಮೊಗ್ಗದಲ್ಲಿ ಫ್ಲೆಕ್ಸ್ ವಿಚಾರಕ್ಕೆ ಎರಡು ಗುಂಪುಗಳ ನಡುವೆ ನಡೆದ ಗಲಭೆಯ ಹಿಂದೆ ರಾಜಕೀಯ ಹಿತಾಸಕ್ತಿ ಅಡಗಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 201

ಶಿವಪಾರ್ವತಿ ಕಲ್ಯಾಣಕ್ಕೆ ನಾರದ ಸಲಹೆ

ಪಾರ್ವತಿಯು ಬಾಲಸಹಜ ಆಟಗಳನ್ನು ಆಡುತ್ತಿದ್ದಳು. ತಂದೆ ಹಿಮವಂತ ಕೊಡಿಸಿದ ಗೊಂಬೆಗಳೊಂದಿಗೆ ಮತ್ತು ಗಂಗಾನದಿಯ ಮರಳು ದಿಣ್ಣೆಗಳಲ್ಲಿ ಆಟವಾಡುತ್ತಿದ್ದಳು. ಸಖಿಯರೊಂದಿಗೆ ಆಡುತ್ತಾ ಬೆಳೆದ ಪಾರ್ವತಿ ಸಕಾಲದಲ್ಲಿ ಗುರುಗಳಿಂದ ವಿದ್ಯಾಭ್ಯಾಸ ಮಾಡಿದಳು. ಶರತ್ಕಾಲದಲ್ಲಿ ಹಂಸಗಳು ಗಂಗಾನದಿಯನ್ನು ಸೇರುವಂತೆ, ಔಷಧಿಯುಕ್ತ ಜ್ಯೋತಿರ್ಲತೆಗಳಲ್ಲಿ ರಾತ್ರಿ ಜ್ಯೋತಿಯು ಸೇರುವಂತೆ, ಪಾರ್ವತಿಗೆ ಅವಳ ಹಿಂದಿನ ಜನ್ಮದ ವಿದ್ಯೆಗಳೆಲ್ಲವೂ ಬಂದು ಸೇರಿದವು. ಹೀಗಾಗಿ ಪಾರ್ವತಿಯು ಬಾಲ್ಯದಲ್ಲಿಯೇ ಶಿವನ ಕುರಿತು ತಪಸ್ಸು ಮಾಡಲು ಹೊರಡುತ್ತಿದ್ದಳು. ಆಗ ಅವಳ ತಾಯಿ ಮೇನಾದೇವಿಯು ತಡೆಯುತ್ತಿದ್ದಳು. ಇದರಿಂದ ಆಕೆಗೆ ‘ಉಮಾ’ ಎಂಬ ಹೆಸರು ಬಂತು. (ಉ - ಎಂದರೆ ಪಾರ್ವತಿ, ಮಾ - ಎಂದರೆ ಮಾಡಬೇಡ ಎಂಬ ಅರ್ಥ.)

ಒಂದು ದಿನ ನಾರದ ಹಿಮವಂತನ ಅರಮನೆಗೆ ಬಂದ. ಆಗ ಹಿಮವಂತನು ಆದರದಿಂದ ಆತನನ್ನು ಬರಮಾಡಿಕೊಂಡು ಪೂಜಿಸಿದ. ಪಾರ್ವತಿಯ ಜಾತಕಫಲವನ್ನು ಕೇಳಿದ. ಪಾರ್ವತಿಯ ಹಸ್ತ ನೋಡಿದ ನಾರದ ‘ಇವಳು ತನ್ನ ಪತಿಗೆ ತುಂಬಾ ಸುಖವನ್ನುಂಟುಮಾಡಿ, ತಂದೆತಾಯಿಗಳಿಗೆ ಕೀರ್ತಿಯನ್ನು ತರುತ್ತಾಳೆ. ಇವಳ ಕೈಯಲ್ಲಿ ಎಲ್ಲಾ ಶುಭಲಕ್ಷಣಗಳೂ ಇವೆ. ಆದರೆ ಒಂದು ಗೆರೆಯು ವಿಲಕ್ಷಣವಾಗಿದೆ. ಅದರ ಫಲವೇನೆಂದರೆ ಇವಳ ಪತಿಯು ದಿಗಂಬರನೂ ನಿರ್ಗುಣನೂ ತಾಯಿತಂದೆಗಳಿಲ್ಲದವನೂ ಅಮಂಗಳವಾದ ವೇಷವುಳ್ಳವನೂ ಆಗಿರುವನು’ ಎಂದನು.

ನಾರದನ ಮಾತನ್ನು ಕೇಳಿ ಮೇನಾದೇವಿ ಮತ್ತು ಹಿಮವಂತ ದುಃಖಗೊಂಡರು. ಆದರೆ, ಪಾರ್ವತಿಯು ಸಂತೋಷಪಟ್ಟಳು. ಇಂಥ ಲಕ್ಷಣಗಳಿರುವುದು ಶಿವನಿಗೆ ಮಾತ್ರ, ಆತ ತನ್ನ ಪತಿಯಾಗುವನೆಂದು ತಿಳಿದು ಉಲ್ಲಸಿತಳಾದಳು. ದುಃಖಿತನಾದ ಹಿಮವಂತ ‘ನಾರದ! ನಿನ್ನ ಮಾತನ್ನು ಕೇಳಿ ನನಗೆ ತುಂಬಾ ದುಃಖವಾಗಿದೆ. ಇದಕ್ಕಾಗಿ ಏನು ಉಪಾಯವನ್ನು ಮಾಡಲಿ’ ಎಂದು ಕೇಳಿದ. ಅದಕ್ಕೆ ನಾರದ, ‘ಎಲೈ ಪರ್ವತರಾಜನೆ, ಸ್ನೇಹದಿಂದ ಹೇಳುವೆನು ಕೇಳು. ನಾನು ಹೇಳಿದಂತಹವನೇ ಪಾರ್ವತಿಗೆ ಪತಿಯಾಗುವನು. ಅದಕ್ಕೊಂದು ಉಪಾಯವನ್ನು ಹೇಳುವೆನು, ಆದರದಿಂದ ಕೇಳು’ ಎಂದ.

‘ನಾನು ಹೇಳಿದಂತಹ ವರನೋರ್ವನಿದ್ದಾನೆ. ಅವನು ಸಾಮಾನ್ಯನಲ್ಲ. ಆತ ಜಗದೊಡೆಯನಾದ ಶಂಭು. ಕೆಟ್ಟ ಲಕ್ಷಣಗಳೆಲ್ಲವೂ ಅವನಲ್ಲಿ ಸದ್ಗುಣಗಳೇ ಆಗುವುವು. ಪರಮೇಶ್ವರನಲ್ಲಿನ ದೋಷವು ದುಃಖವನ್ನುಂಟುಮಾಡುವುದಿಲ್ಲ. ಇದಕ್ಕೆ ಸೂರ್ಯ, ಅಗ್ನಿ, ಗಂಗೆಯರೇ ದೃಷ್ಟಾಂತವಾಗಿದೆ. ಆದುದರಿಂದ ನಿನ್ನ ಮಗಳನ್ನು ಶಿವನಿಗೆ ಮದುವೆ ಮಾಡಿಕೊಡು. ಶಿವನು ಸರ್ವೇಶ್ವರನು. ಎಲ್ಲರೂ ಅವನನ್ನು ಸೇವಿಸುವರು. ಜನ್ಮಮೊದಲಾದ ಯಾವ ವಿಕಾರಗಳೂ ಅವನಿಗಿಲ್ಲ. ನಾಶ ಎಂಬುದು ಅವನಿಗೆ ಇಲ್ಲವೇ ಇಲ್ಲ. ಶಿವನು ಪ್ರಸನ್ನನಾದರೆ ಸಂಶಯವಿಲ್ಲದೇ ಪಾರ್ವತಿಯನ್ನು ಮದುವೆಯಾಗುವನು. ಆದರೆ ಈ ಕಾರ್ಯವು ತಪಸ್ಸಿನಿಂದಲೇ ಆಗಬೇಕಾಗಿದೆ. ಪಾರ್ವತಿಯು ಶಿವನನ್ನು ಕುರಿತು ತಪಸ್ಸು ಮಾಡಬೇಕು. ಎಲೈ ಪರ್ವತರಾಜ! ನಿನ್ನ ಸುತೆಯು ಶಂಕರನಿಗೆ ಎಲ್ಲಾ ರೀತಿಯಲ್ಲೂ ಅನುಕೂಲಳಾಗಿದ್ದಾಳೆ. ಅವನಿಗೆ ತುಂಬಾ ಪ್ರಿಯಳಾಗುವಳು. ಜಗನ್ಮಾತೆಯಾಗಿ ಎಲ್ಲರ ಸಲಹುತ್ತಾಳೆ. ಪಾರ್ವತಿಯು ತನ್ನ ತಪಸ್ಸಿನಿಂದ ಶಂಕರನ ಮನಸ್ಸನ್ನು ಖಂಡಿತ ಸೆಳೆಯುವಳು. ಶಂಕರನೂ ಇವಳ ಹೊರತು ಇನ್ನಾವ ಸ್ತ್ರೀಯನ್ನೂ ಮದುವೆಯಾಗುವುದಿಲ್ಲ. ಪಾರ್ವತೀಪರಮೇಶ್ವರರಿಗೆ ಇರುವಂಥ ಪ್ರೇಮವೂ, ಇನ್ನಾವ ದಂಪತಿಗಳಲ್ಲೂ ಇರಲಾರದು. ಇವರೀರ್ವರೂ ಅನೇಕ ದೇವಕಾರ್ಯಗಳನ್ನು ನಿರ್ವಹಿಸಿ, ಜಗತ್‌ಕಲ್ಯಾಣಕ್ಕೆ ಪ್ರೇರಕರಾಗುವರು’ ಎನ್ನುತ್ತಾನೆ ನಾರದ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಆಗಸ್ಟ್ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ, ಋತು ತಿಥಿ: ಶ್ರಾವಣ ಕೃಷ್ಣಷಷ್ಠಿ ಗಂ. 20-25 ನಕ್ಷತ್ರ: ಅಶ್ವಿನಿ ಗಂ. 21-57 ಯೋಗ: ಗಂಡ ಗಂ. 20-56, ಕರಣ: ಗರಜೆ ಗಂ. 08-15, ಕರ್ಕಾಟಕ ಮಾಸದ 31 ನೇ ದಿನ. ರಾಹುಕಾಲ : ಮಧ್ಯಾಹ್ನ 12:00–01:30, ಸೂರ್ಯೋದಯ : 06-22 ಸೂರ್ಯಾಸ್ತ : 06-47, ಮುಸ್ಲಿಂ ದಿನಾಂಕ : 18 ಮೊಹರಮ್ ದಿನ ವಿಶೇಷ : ಮಾನಸ ಪೂಜಾ ಮುಕ್ತಾಯ (ಬಂಗಾಳ), ಸಿಂಹಾದಿ (ಕೇರಳ), ಕೊಲ್ಲಂ ಯುಗ ಪ್ರಾರಂಭ, ಸಿಂಹ ಸಂಕ್ರಾಂತಿ
ಅದೃಷ್ಟ ಸಂಖ್ಯೆ : 8, 12

ಮೇಷ: ತಿಳಿವಳಿಕೆ ಹೇಳುವ ಕೆಲಸವನ್ನು ಈ ದಿನ ಮಾಡದಿರಿ. ನಿಮ್ಮಿಂದಲೇ ತಪ್ಪುಗಳೂ ನಡೆಯಬಹುದು. ಕಾರ್ಮಿಕರು ಸಹನಶೀಲರಾಗಿ ಕೆಲಸದ ಬಗ್ಗೆ ಸರಿಯಾಗಿ ಗಮನವಹಿಸುವುದರಿಂದ ಯಶಸ್ಸು ಗಳಿಸಬಹುದು.

ವೃಷಭ: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ವಿಶೇಷ ರೀತಿಯ ಉತ್ತಮ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಯೋಚನೆಗಳು ಹಾಗೂ ಅದಕ್ಕೆ ಬೇಕಾದ ಆರ್ಥಿಕ ಸಹಾಯದೊರೆಯಲಿದೆ.

ಮಿಥುನ: ಲಾಭದ ನಿರೀಕ್ಷೆಯಿಲ್ಲದೆ ಮಾಡಿದ ಕೆಲಸದಲ್ಲೂ ಅನಿರೀಕ್ಷಿತ ಲಾಭವಾಗುವುದರಿಂದ ಸಂತೋಷ ಆಗುವುದು. ಸರ್ಕಾರಿ ಅಧಿಕಾರಿಗಳಲ್ಲಿ ವಿನಯ ಪೂರ್ವಕವಾಗಿ ನಡೆದುಕೊಳ್ಳುವುದರಿಂದ ಕೆಲಸ ಸರಾಗವಾಗಿನಡೆಯುವುದು.

ಕರ್ಕಾಟಕ: ಕೈಗಾರಿಕೋದ್ಯಮಿಗಳು ತಮ್ಮ ಕಂಪನಿಯ ತಯಾರಿಕಾ ಘಟಕದ ಅಭಿವೃದ್ಧಿಯನ್ನು ಮಾಡುವ ಬಗ್ಗೆ ಗಮನ ಹರಿಸಬಹುದು. ದುರ್ಗಾ ಪರಮೇಶ್ವರಿಯ ಆರಾಧನೆಯಿಂದ ಎಂಥ ಪರಿಸ್ಥಿತಿಯನ್ನು ನಿಭಾಯಿಸಬಲ್ಲಿರಿ.

ಸಿಂಹ: ಜೀವನೋಪಾಯಕ್ಕೆ ಸರಿಯಾದ ದಾರಿಗಳನ್ನು ಹುಡುಕಬೇಕಾಗುತ್ತದೆ. ವೃತ್ತಿ ಜೀವನವನ್ನು ಗಂಭೀರವಾಗಿ ಪರಿಗಣಿಸುವಿರಿ. ಮೆಚ್ಚಿದವರ ಜೊತೆಗೆ ಮದುವೆಯಾಗಲು ಮನೆಯ ಹಿರಿಯರಿಂದ ಒಪ್ಪಿಗೆ ಸಿಗಲಿದೆ.

ಕನ್ಯಾ: ಸಾಲ ತೀರಿಸಲು ಹೊಸದೊಂದು ಮಾರ್ಗ ಕಾಣಲಿದೆ. ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಿಗಳಿಗೆ ವ್ಯಾಪಾರದೊಂದಿಗೆ ಲಾಭ ಸಿಗಬಹುದು. ತೂಕದ ವ್ಯಕ್ತಿಯಾಗಿರುವ ನಿಮಗೆ ಅನುಯಾಯಿಗಳು ವೃದ್ಧಿಯಾಗುವರು.

ತುಲಾ: ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡಿ. ಸಂಘ ಸಂಸ್ಥೆಗಳ ಜವಾಬ್ದಾರಿಯನ್ನು ನೋಡುವವರಿಗೆ ನಾಲ್ಕಾರು ಮಾತು ಕೇಳಬೇಕಾಗುವುದು. ಒಳಾಂಗಣ ವಿನ್ಯಾಸಗಾರರಿಗೆ ಅಧಿಕ ವರಮಾನ ಪ್ರಾಪ್ತಿ.

ವೃಶ್ಚಿಕ: ನಿಮ್ಮದಲ್ಲದ ವಸ್ತುವಿನ ಬಗ್ಗೆ ಯಾವುದೇ ರೀತಿಯ ವ್ಯಾಮೋಹ ಇಟ್ಟುಕೊಳ್ಳಬೇಡಿ. ಧರ್ಮಕಾರ್ಯಗಳಿಗಾಗಿ ಧನ ವಿನಿಯೋಗವಾಗುತ್ತದೆ. ವೃತ್ತಿಯ ಕೆಲಸದ ಮುಕ್ತಾಯದ ಸಮಯದಲ್ಲಿ ಆಯಾಸವಾಗಲಿದೆ.

ಧನು: ಮೇಲಧಿಕಾರಿಗಳಿಗೂ ನಿಮಗೂ ಇರುವ ವಿಶ್ವಾಸ ಹೆಚ್ಚಾಗುವುದು. ಮರ ಕೆತ್ತನೆಯ ಕೆಲಸಗಾರರಿಗೆ, ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಅನುಕೂಲ ಇರಲಿದೆ. ಇಂದು ಲೇವಾದೇವಿ ವ್ಯವಹಾರಗಳು ತೃಪ್ತಿಕರವಾಗಿರುವುದು.

ಮಕರ: ನೆಂಟರ ಸಹಾಯದಿಂದ ನಿಮ್ಮ ಮಗಳ ಮದುವೆ ಗೊತ್ತಾಗಿ ಮುಂದಿನ ಕಾರ್ಯಕ್ರಮ ತಯಾರಿಯನ್ನು ಮಾಡಿಕೊಳ್ಳುವಿರಿ. ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ. ವೈದ್ಯರ ಸಲಹೆ ಅನುಸರಿಸಿ

ಕುಂಭ: ಕಷ್ಟಗಳನ್ನು ಎದುರಿಸುವ ಉತ್ತಮ ಎದೆಗಾರಿಕೆಯನ್ನು ಹೊಂದಿರುವಿರಿ. ದುಃಖ ತೀವ್ರತೆಯು ಕಡಿಮೆಯಾಗುವುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳಿಂದ ಸಮಾಧಾನವಾಗುವುದು.

ಮೀನ: ಸಂಸಾರದ ವಿಚಾರದಲ್ಲಿ ಹಾಗೂ ಉದ್ಯೋಗದಲ್ಲಿ ದೃಢಚಿತ್ತದಿಂದ ಮುಂದುವರಿಯಿರಿ. ಕೋರ್ಟು-ಕಚೇರಿ ಕಾರ್ಯ ಭಾಗದಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವಲ್ಲಿ ತೊಡಕು. ಜನೋಪಕಾರದಿಂದ ಶ್ಲಾಘನೆ ಸಿಗಲಿದೆ.



ಬೆರಗಿನ ಬೆಳಕು

ಗುರುರಾಜ ಕರಜಗಿ

ಮೂರನೆಯ ಕಣ್ಣು

ದ್ವಂದ್ವಲೋಕವನಕ್ಷಿಯುಗದೆ ಪೊರೆದು ತ್ರ್ಯಕ್ಷ- |
ನೊಂದರಿಂ ಮಾಯೆಯಾಟವ ಮೀರುವಂತೆ ||
ಇಂದ್ರಿಯಾತೀತರ‍್ಯನಕೆ ಬೇರೊಂದಕ್ಷಿ|
ಸಂಧಾನವನು ಕಲಿಯೊ – ಮಂಕುತಿಮ್ಮ || 695 ||


ಪದ-ಅರ್ಥ: ದ್ವಂದ್ವಲೋಕವನಕ್ಷಿಯುಗದೆ = ದ್ವಂದ್ವ ಲೋಕವನ್ನು (ದ್ವಂದ್ವವಿರುವ ಈ ಲೋಕವನ್ನು) + ಅಕ್ಷಿಯುಗದೆ(ಎರಡು ಕಣ್ಣುಗಳಿಂದ), ಪೊರೆದು- = ರಕ್ಷಿಸಿ, ತ್ರ್ಯಕ್ಷನೊಂದರಿಂ = ತ್ರ್ಯಕ್ಷ(ಪರಮೇಶ್ವರ, ಮುಕ್ಕಣ್ಣ) + ಒಂದರಿಂ (ಒಂದರಿಂದ), ಮಾಯೆಯಾಟವ = ಮಾಯೆಯ + ಆಟವ, ಇಂದ್ರಿಯಾತೀತ ರ‍್ಯನಕೆ = ಇಂದ್ರಿಯ + ಅತೀತ(ಮೀರಿದ) + ರ‍್ಯನಕೆ, ಬೇರೊಂದಕ್ಷಿ = ಬೇರೊಂದು + ಅಕ್ಷಿ (ಕಣ್ಣು)

ವಾಚ್ಯಾರ್ಥ: ಬರೀ ದ್ವಂದ್ವಗಳಿಂದ ಕೂಡಿದ ಲೋಕವನ್ನು ತನ್ನ ಎರಡು ಕಣ್ಣುಗಳಿಂದ ಕಾಪಾಡಿದರೂ, ಮೂರನೆಯ ಕಣ್ಣಿನಿಂದ ಪರಮೇಶ್ವರ ಮಾಯೆಯನ್ನು ಬೂದಿಮಾಡಿದಂತೆ, ಇಂದ್ರಿಯಗಳನ್ನು ಮೀರಿದ ತತ್ವದರ್ಶನಕ್ಕೆ , ಬೇರೊಂದು ಜ್ಞಾನದ ಕಣ್ಣನ್ನು ಪಡೆಯುವುದಕ್ಕೆ ಹೊಂದಾಣಿಕೆಯನ್ನು ಮಾಡಿಕೊ.

ವಿವರಣೆ: ಪರಶಿವನು, ಶಂಕರನೂ ಹೌದು, ರುದ್ರನೂ ಹೌದು. ಅವನು ಯಾವಾಗಲೂ ಶುಭವನ್ನುಂಟುಮಾಡುವನಾದ್ದರಿಂದ ಶಂಕರ. ಅವನಿಗೆ ಇನ್ನೊಂದು ಹೆಸರು ತ್ರ್ಯಕ್ಷ. ಹಾಗೆಂದರೆ ಮೂರು ಕಣ್ಣುಳ್ಳುವ, ಮುಕ್ಕಣ್ಣ. ಅವನು ತನ್ನ ಎರಡು ಕಣ್ಣುಗಳಿಂದ ಪ್ರಪಂಚವನ್ನು ಕಾಪಾಡುತ್ತಾನೆ. ಈ ಜಗತ್ತು ದ್ವಂದ್ವಮಯವಾದದ್ದು. ಇಲ್ಲಿ ಸುಭಗವಾದದ್ದು, ಕಷ್ಟವಾದದ್ದು; ಸುಂದರವಾದದ್ದು, ಕುರೂಪವಾದದ್ದು; ಹಗಲು-ರಾತ್ರಿ; ಸುಖ-ದುಃಖ; ಹುಟ್ಟು-ಸಾವು; ಇಂಥ ಅನೇಕಗಳ ದ್ವಂದ್ವಗಳು ಎಲ್ಲವೂ ಇವೆ. ಇದೇ ಪ್ರಪಂಚದ ಕಷ್ಟ ಮತ್ತು ವಿಶೇಷ. ಇಂಥದ್ದನ್ನು ಪರಮೇಶ್ವರ ಕರುಣೆಯಿಂದ, ಪ್ರೀತಿಯಿಂದ ಕಾಪಾಡುತ್ತಾನೆ. ಅವನಿಗೆ ಇನ್ನೊಂದು ಕಣ್ಣೂ ಇದೆ. ಕೆಲವರು ಅದನ್ನು ಬೆಂಕಿಯ ಕಣ್ಣು ಎನ್ನುತ್ತಾರೆ. ಅದರಿಂದ ಆತ ದುರ್ಜನರನ್ನು ಸುಟ್ಟುಹಾಕುತ್ತಾನೆ ಎಂಬ ನಂಬಿಕೆ. ಆದರೆ ಆ ಮೂರನೆಯ ಕಣ್ಣು ನಿಜವಾಗಿಯೂ ಜ್ಞಾನದ ಕಣ್ಣು. ಜ್ಞಾನ, ಅಜ್ಞಾನವನ್ನು, ಅಂಧಕಾರವನ್ನು, ದುರ್ಗುಣಗಳನ್ನು ಸುಟ್ಟು ಹಾಕುತ್ತದೆ. ಈಶ್ವರನಿಗೆ ಆ ಅದ್ಭುತ ಶಕ್ತಿ ಇದೆ. ಉಮೆಯ ರೂಪಕ್ಕೆ ವಿಚಲಿತನಾಗದ ಶಿವ, ಪ್ರೇಮದ ಮಾಯೆಯನ್ನು ಸೃಷ್ಟಿಸಿದ ಮನ್ಮಥನನ್ನು ಜ್ಞಾನದಿಂದ ಭಸ್ಮಮಾಡುತ್ತಾನೆ, ಅವನು ಹೇಗೆ ಮಾಯೆಯ ನಾಶಕ್ಕೆ ಮತ್ತೊಂದು ಕಣ್ಣನ್ನು ಬಳಸಿದನೋ, ಹಾಗೆಯೇ ನಮಗೂ, ಇಂದ್ರಿಯಗಳನ್ನು ಮೀರಿದ ಪರಸತ್ವವನ್ನು ತಿಳಿಯಲು, ಪಡೆಯಲು, ಮತ್ತೊಂದು ಕಣ್ಣು ಬೇಕು. ಆ ಕಣ್ಣನ್ನು ಪಡೆಯುವುದು ಹೇಗೆ ಎನ್ನುವುದೇ ಅನುಸಂಧಾನ. ಅದೇ ಸಾಧನೆಯ ಗುರಿ. ಅದಕ್ಕೆ ಮುಖ್ಯವಾಗಿ ಬೇಕಾದದ್ದು ಇಂದ್ರಿಯಗಳ ಉಬ್ಬಟೆಯನ್ನು ತಡೆಯಬೇಕು. ಅವುಗಳ ಹಾರಾಟ ತಗ್ಗದ ಹೊರತು, ಮೂರನೆಯ ಕಣ್ಣು ನಮಗೆ ದೊರೆಯಲಾರದು.

ಪದಬಂಧ 5052

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ನಿಶ್ಚಿತವಾದ ಉದ್ದೇಶ (4)
3.ಹರನ ಮುಂದಿರುವ ಕೊಡದಂತಹ ಪಾತ್ರೆ (3)
5.ಕಪಿ ಇಲ್ಲಿದೆ (4)
7.ನಕ್ಷೆ ಅಥವಾ ಚಿತ್ರವನ್ನು ಹೀಗೆ ಹೇಳುವರು (3)
8.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
11.ಬಲಾಢ್ಯ ಇಲ್ಲಿದ್ದಾನೆ (3)
12.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
14.ಕುದುರೆಯನ್ನೇರುವ ಬಳೆ (3)
15.ಕೊನೆಗೆ ಯೋಗವಿದ್ದರೆ ಇದು ಪ್ರಯೋಜನ (4)

ಮೇಲಿಂದ ಕೆಳಕ್ಕೆ
1.ನಿರ್ಣಯ ಅಥವಾ ಠರಾವು (4)
2.ವಸ್ತುಗಳನ್ನು ಸಂಗ್ರಹಿಸುವ ಮಳಿಗೆ (3)
4.ಸರಸದ ವಿರುದ್ಧ ಪದ (3)
6.ಉಚಿತವೆಂದರೂ ಇದು ನಿಶ್ಚಿತ! (3)
7.ಗೆಲುವು ಈ ರೀತಿ ಬಂದಿದೆ (3)
8.ಹೆಬ್ಬೆರಳು ಇಲ್ಲಿದೆ (3)
9.ಕರವನ್ನು ಕೊನೆಗಿಟ್ಟು ಸಿಡಿಸಿದ ತುಂತುರು! (3)
10.ಅಂಗದಲ್ಲಿ ಸುಗಂಧಲೇಪನ (4)
11.ಕೋಟೆಯ ಮೇಲುಭಾಗ (3)
13.ಹತ್ತಿರಕ್ಕೊಂದು ಪರ್ಯಾಯ ಪದ (3)

5051 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮಗ್ಗಿ 4.ವಾಸನೆ
5.ಅಂಗಾರಕ 6.ವಾಚ್ಯಾತೀತ 7.ನರ
9.ಗವಿ 13.ಮನ್ವಂತರ
14.ಅಪವ್ಯಯ 15.ವಂಚನೆ
16.ಹಂತ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ಮನೆವಾಳ್ತನ
3.ಮರವು 5.ಅಂತರಂಗ
8.ರಸಮಯ 10.ವಿಚಾರವಂತ
11.ಕುಂಟುನೆಪ 12.ಚಪಲ

ಸುಡೊಕು 5438

8		2		4		1		5
			8		9			
9		6			7	2		4
			1	6				
					3	8		6
				8				
	4			9	2			
1		5	7				4	
2		3		5	1	9		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5437 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ಷೇರುಪೇಟೆ ವಹಿವಾಟು 379



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,698
ಇಂದಿನ ಅಂತ್ಯ	17,825
▲	127
ದಿನದ ಕನಿಷ್ಠ	17,839

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1650 (-)
ಸೋಯಾ (ರಿಫೈಂಡ್)	₹1270 (-)
ಸೂರ್ಯಕಾಂತಿ (ರಿಫೈಂಡ್)	₹1580 (-)
ಪಾಮೋಲಿನ್	₹1245 (-)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹600-1000
ಸಣ್ಣ	₹400-600

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹280-647
ದ್ವಿತಳಿ (ಬಿ.ವಿ)	₹355-821

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹162
ಆರ್‌ಎಸ್‌ಎಸ್-5	₹152
ಗುಡ್ ಲಾಟ್	₹144

ಕೊಬ್ಬರಿ ಧಾರಣೆ

ಅರಸೀಕೆರೆ	₹12000-14400
ತುರುವೇಕೆರೆ	₹14400-14500
ಪುತ್ತೂರು (ಇತರೆ)	₹4000-8500

ಅಮುಲ್ ಹಾಲಿನ ಬೆಲೆ ಏರಿಕೆ

ಆನಂದ್ (ಪಿಟಿಐ): ಗುಜರಾತ್ ಸಹಕಾರ ಹಾಲು ಮಾರಾಟ ಮಹಾಮಂಡಳವು (ಜಿಸಿಎಂಎಂಎಫ್) ಅಮೂಲ್ ಬ್ರ್ಯಾಂಡ್ ಅಡಿಯಲ್ಲಿ ಮಾರಾಟ ಮಾಡುವ ಹಾಲಿನ ದರವನ್ನು ಲೀಟರಿಗೆ ₹ 2ರಷ್ಟು ಹೆಚ್ಚಿಸಿದೆ.

'ಗೋಲ್ಡ್', 'ತಾಜಾ' ಮತ್ತು 'ಶಕ್ತಿ' ಹೆಸರಿನಲ್ಲಿ ಮಾರಾಟವಾಗುವ ಹಾಲಿನ ಬೆಲೆ ಬುಧವಾರದಿಂದ ಜಾಸ್ತಿ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಉತ್ಪಾದನಾ ವೆಚ್ಚ ಹೆಚ್ಚಾಗಿರುವ ಕಾರಣ ಈ ಬೆಲೆ ಏರಿಕೆ ಎಂದು ಅದು ಹೇಳಿದೆ. ಒಂದು ವರ್ಷದಲ್ಲಿ ಪಶು ಆಹಾರದ ಬೆಲೆಯು ಸರಿಸುಮಾರು ಶೇಕಡ 20ರಷ್ಟು ಜಾಸ್ತಿ ಆಗಿದೆ ಎಂದು ಮಹಾಮಂಡಳವು ತಿಳಿಸಿದೆ. ಗ್ರಾಹಕರು ನೀಡುವ ಹಣದಲ್ಲಿ ಶೇ 80ರಷ್ಟನ್ನು ಅಮುಲ್, ಹಾಲು ಉತ್ಪಾದಕರಿಗೆ ವರ್ಗಾಯಿಸುತ್ತದೆ.

ಇಳಿಕೆ ಹಾದಿಯಲ್ಲಿ ಸಗಟು ಹಣದುಬ್ಬರ

ಸಗಟು ಹಣದುಬ್ಬರ ಇಳಿಕೆ (%)

ವಿವರ	ಜುಲೈ	ಜೂನ್
ಆಹಾರ ವಸ್ತುಗಳು	10.77	14.39
ತರಕಾರಿ	18.25	56.75
ಇಂಧನ ಮತ್ತು ವಿದ್ಯುತ್	43.75	40.38

ನವದೆಹಲಿ (ಪಿಟಿಐ): ಸಗಟು ಬೆಲೆ ಆಧಾರಿತ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಐದು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಜುಲೈನಲ್ಲಿ ಸಗಟು ಹಣದುಬ್ಬರವು ಶೇಕಡ 13.93ರಷ್ಟು ದಾಖಲಾಗಿದೆ. ಆಹಾರ ವಸ್ತುಗಳು ಮತ್ತು ತಯಾರಿಕಾ ಉತ್ಪನ್ನಗಳ ಬೆಲೆ ಇಳಿಕೆ ಆಗಿದ್ದು ಹಣದುಬ್ಬರ ಇಳಿಕೆಗೆ ಕಾರಣ.

ಸಗಟು ಹಣದುಬ್ಬರ ಪ್ರಮಾಣವು ಸತತ ಎರಡು ತಿಂಗಳುಗಳಿಂದ ಕಡಿಮೆ ಆಗುತ್ತಿದ್ದು, ಮುಂದಿನ ತಿಂಗಳುಗಳಲ್ಲಿ ಇನ್ನಷ್ಟು ಇಳಿಕೆ ಆಗಬಹುದು ಎಂಬ ನಿರೀಕ್ಷೆಯನ್ನು ಹುಟ್ಟುಹಾಕಿದೆ. ಮೇ ತಿಂಗಳಲ್ಲಿ ದಾಖಲೆಯ ಶೇ 15.88ಕ್ಕೆ ಏರಿಕೆ ಆಗಿದ್ದ ಸಗಟು ಹಣದುಬ್ಬರವು ಜೂನ್‌ನಲ್ಲಿ ಶೇ 15.18ಕ್ಕೆ ತಗ್ಗಿತ್ತು.

ಹಿಂದಿನ ವರ್ಷದ ಜುಲೈನಲ್ಲಿ ಸಗಟು ಹಣದುಬ್ಬರವು ಶೇ 11.57ರಷ್ಟು ಇತ್ತು. ಈ ವರ್ಷದ ಜುಲೈನ ಪ್ರಮಾಣವನ್ನೂ ಪರಿಗಣಿಸಿದರೆ, ಸಗಟು ಹಣದುಬ್ಬರವು ಸತತ 16 ತಿಂಗಳುಗಳಿಂದ ಎರಡು ಅಂಕಿಗಳ ಮಟ್ಟದಲ್ಲಿ ಇದ್ದಂತಾಗಿದೆ.



ಕಚ್ಚಾ ತೈಲದ ಬೆಲೆ ಇನ್ನೂ ಹೆಚ್ಚಿನ ಮಟ್ಟದಲ್ಲಿಯೇ ಉಳಿದಿರುವುದು, ಅಗತ್ಯ ವಸ್ತುಗಳ ಬೆಲೆ ಹೆಚ್ಚಿರುವುದು ತಯಾರಕರ ಮೇಲೆ ಪರಿಣಾಮ ಉಂಟುಮಾಡುತ್ತಿದೆ. ಅವರು ಬೆಲೆ ಹೆಚ್ಚಳವನ್ನು ಗ್ರಾಹಕರಿಗೆ ವರ್ಗಾಯಿಸುವುದರಿಂದ ಚಿಲ್ಲರೆ ಹಣದುಬ್ಬರ ಹೆಚ್ಚಾಗುತ್ತದೆ ಎಂದು ಸಿಆರ್‌ಸಿಎಲ್ ಎಲ್‌ಎಲ್‌ಪಿ ಕಂಪನಿಯ ಸಿಇಒ ಡಿಆರ್‌ಇ ರೆಡ್ಡಿ ಹೇಳಿದ್ದಾರೆ.

'ಲೋಹಗಳು, ತೈಲ, ರಸಗೊಬ್ಬರ ಬೇಡಿಕೆ ಹೆಚ್ಚಾಗುತ್ತಿರುವುದನ್ನು ಗಮನಿಸಿ ಜಾಗತಿಕ ಅರ್ಥ ವ್ಯವಸ್ಥೆ ಚೇತರಿಕೆ ಕಾಣುತ್ತಿದೆ ಎನ್ನಬಹುದು. ಕಚ್ಚಾ ತೈಲದ ಬೆಲೆಯು ಕಡಿಮೆ ಆದರೆ, ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಪರಿಹಾರ ಕಂಡರೆ ಸಗಟು ಹಣದುಬ್ಬರವು ಕಡಿಮೆ ಆಗಬಹುದು' ಎಂದು ರೆಡ್ಡಿ ತಿಳಿಸಿದ್ದಾರೆ.

ರೆಪೊ ದರ ನಿಗದಿ ಮಾಡುವ ಸಂದರ್ಭದಲ್ಲಿ ಆರ್‌ಬಿಐ ಚಿಲ್ಲರೆ ಹಣದುಬ್ಬರದ ಪ್ರಮಾಣವನ್ನು ಗಮನಿಸುತ್ತದೆ.

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರದ ವಹಿವಾಟಿನಲ್ಲಿ 379 ಅಂಶ ಏರಿಕೆ ದಾಖಲಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 127 ಅಂಶ ಹೆಚ್ಚಾಗಿ 17,825 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ತೈಲ ಮತ್ತು ಅನಿಲ, ಬ್ಯಾಂಕಿಂಗ್, ಆಟೊಮೊಬೈಲ್ ವಲಯದ ಷೇರುಗಳ ಖರೀದಿ ಜೋರಾಗಿತ್ತು ಎಂದು ವರ್ತಕರು ತಿಳಿಸಿದ್ದಾರೆ.

'ಹಣದುಬ್ಬರ ಪ್ರಮಾಣ ತಗ್ಗಿರುವುದು ದೇಶಿ ಹೂಡಿಕೆದಾರರು ಆರ್ಥಿಕ ಚೇತರಿಕೆಯ ಬಗ್ಗೆ ಆಶಾವಾದ ಹೊಂದಲು ಕಾರಣವಾಗಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣ ಕಡಿಮೆ ಆಗಿರುವುದರಿಂದ ರೆಪೊ ದರ ಹೆಚ್ಚಳದ ಪ್ರಮಾಣವು ಜಾಸ್ತಿ ಇರಲಿಕ್ಕಿಲ್ಲ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಹಣದುಬ್ಬರ ಪ್ರಮಾಣ ಕಡಿಮೆ ಆಗಿರುವುದು ಮುಂದಿನ ದಿನಗಳಲ್ಲಿ ಬಡ್ಡಿ ದರ ಏರಿಕೆಯು ಜಾಸ್ತಿ ಇರಲಿಕ್ಕಿಲ್ಲ ಎಂಬ ನಿರೀಕ್ಷೆ ಮೂಡಿಸಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರು ಖರೀದಿಸುತ್ತಿರುವುದು ಕೂಡ ಉತ್ಸಾಹವನ್ನು ಹೆಚ್ಚಿಸಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನೆ (ಸಣ್ಣ ಹೂಡಿಕೆ) ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ತಲಾ ಶೇ 1.03ರಷ್ಟು ಏರಿಕೆ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 0.86ರಷ್ಟು ಇಳಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 94.28 ಅಮೆರಿಕನ್ ಡಾಲರ್‌ಗೆ ತಲುಪಿದೆ.

ಚಿನ್ನದ ಬೆಲೆ ₹ 764 ಇಳಿಕೆ: ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಮಂಗಳವಾರ 10 ಗ್ರಾಂಗೆ ₹764ರಷ್ಟು ಕಡಿಮೆ ಆಗಿ, ₹52,347ಕ್ಕೆ ತಲುಪಿದೆ. ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹1,592ರಷ್ಟು ಇಳಿಕೆ ಆಗಿದ್ದು ₹58,277ರಂತೆ ಮಾರಾಟವಾಗಿದೆ.


ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,1000
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-46000
ಹಳತು	46000-56000
ಚನ್ನಗಿರಿ	
ರಾಶಿ	50039-52099
ಚಿತ್ರದುರ್ಗ	
ಆಪಿ	48819-49229
ಬೆಟ್ಟೆ	40210-40669
ಕೆಂಪುಗೋಟು	30800-31200
ರಾಶಿ	48339-48779
ಕಾರ್ಕಳ	
ಹೊಸತು	40000-46000
ಹಳತು	46000-56000
ಕುಂದಾಪುರ	
ಹಳೆಚಾಲಿ	50000-56000
ಹೊಸಚಾಲಿ	40000-46000
ಪುತ್ತೂರು	
ಕೋಕ	11000-26000
ಹೊಸತು	32000-45000
ಶಿವಮೊಗ್ಗ	
ಬೆಟ್ಟೆ	51000-55139
ಗೊರಬಲು	18559-38669
ರಾಶಿ	47000-52099
ಸರಕು	60199-80170
ಸಾಗರ	
ಬಿಳಿಗೋಟು	31599-31700
ಚಾಲಿ	37859-39099
ಕೋಕ	30989-35989
ಕೆಂಪುಗೋಟು	35699-35699
ರಾಶಿ	37219-50999
ಸಿಪ್ಪೆಗೋಟು	20109-22787
ಸಿದ್ದಾಪುರ	
ಬಿಳಿಗೋಟು	26800-33999
ಚಾಲಿ	37899-42399
ಕೋಕ	25699-33909
ಕೆಂಪುಗೋಟು	30199-3389
ರಾಶಿ	47599-50999
ತಟ್ಟಿಬೆಟ್ಟೆ	40899-47399
ಶಿರಸಿ	
ಬೆಟ್ಟೆ	35913-48099
ಬಿಳಿಗೋಟು	23099-36019
ಚಾಲಿ	34399-42899
ರಾಶಿ	41899-53519
ಯಲ್ಲಾಪುರ	
ಬಿಳಿಗೋಟು	30099-33499
ಚಾಲಿ	38068-42401
ಕೋಕ	18019-31899
ಕೆಂಪುಗೋಟು	30799-36305
ರಾಶಿ	50420-55700
ತಟ್ಟಿಬೆಟ್ಟೆ	39899-48991

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16700	16000	16250	225.50 ಸೆಂಟ್ಸ್
ಎಸಿ	9100	8400	9050	
ಆರ್‌ಪಿ	9900	9500	9850	ಲಂಡನ್
ಆರ್‌ಸಿ	4810	4500	4750	2256 ಡಾಲರ್ಸ್

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಊರು ಬೇಡ, ಹೆಸರು ಬೇಡ

● **ಪ್ರಶ್ನೆ:** ನಾನು ಒಂದು ಸಂಸ್ಥೆಯಿಂದ ನನ್ನ 58ನೇ ವಯಸ್ಸಿಗೆ ನಿವೃತ್ತನಾಗಿದ್ದೇನೆ. ನನಗೆ ಪ್ರತಿ ತಿಂಗಳು ₹ 55,000 ಪಿಂಚಣಿ ಬರುತ್ತಿದೆ. ನನಗೆ ಬರುವ ಪಿಂಚಣಿಯಿಂದ ಪ್ರತಿ ವರ್ಷ ₹ 25,000 ತೆರಿಗೆ ಮುರಿದು ಸಂಸ್ಥೆಯವರು ತೆರಿಗೆ ಇಲಾಖೆಗೆ ಜಮಾ ಮಾಡುತ್ತಾರೆ. ನನ್ನ ಸಮಸ್ಯೆ ಏನೆಂದರೆ, ಮಂಡಿ ನೋವಿನಿಂದ ನನಗೆ ನಡೆಯುವುದಕ್ಕೂ ಆಗುತ್ತಿಲ್ಲ. ನನ್ನನ್ನು ಅಂಗವಿಕಲ ಎಂದು ಪರಿಗಣಿಸಿ ತೆರಿಗೆಯಲ್ಲಿ ವಿನಾಯಿತಿ ಕೊಡಬಹುದೇ? ಒಂದು ವೇಳೆ ವಿನಾಯಿತಿ ಇದ್ದರೆ, ಪ್ರಮಾಣಪತ್ರ ತೆಗೆದುಕೊಳ್ಳಬೇಕೇ? ನನಗೆ ಅಂಗವಿಕಲ ಎಂಬ ಪ್ರಮಾಣಪತ್ರ ಸಿಕ್ಕರೆ ಉಪಕಾರವಾಗುತ್ತದೆ.

ಉತ್ತರ: ಆದಾಯ ತೆರಿಗೆಯ ಸೆಕ್ಷನ್ 80 ಯು ಅಂಗವಿಕಲ ವ್ಯಕ್ತಿಗಳಿಗೆ ಸಿಗುವ ತೆರಿಗೆ ವಿನಾಯಿತಿಗಳನ್ನು ಉಲ್ಲೇಖಿಸುತ್ತದೆ. ಅಂಗವೈಕಲ್ಯದ ತೀವ್ರತೆಯ ಆಧಾರದ ಮೇಲೆ ₹ 75,000 ಅಥವಾ ₹ 1.25 ಲಕ್ಷದ ನಿಶ್ಚಿತ ವಿನಾಯಿತಿ ಸಿಗುತ್ತದೆ. ಇದಕ್ಕೆ ತೆರಿಗೆ ಪಾವತಿದಾರನು ನಿವಾಸಿ ಭಾರತೀಯನಾಗಿದ್ದು, ಅಂಗವೈಕಲ್ಯದಿಂದ ಬಳಲುತ್ತಿರಬೇಕು. ಅಲ್ಲದೆ, ಹಿಂದಿನ ವರ್ಷದ ಯಾವುದೇ ಸಮಯದಲ್ಲಿ ಅಂತಹ ವ್ಯಕ್ತಿ ಪ್ರಮಾಣೀಕೃತ ವೈದ್ಯಕೀಯ ಸಂಸ್ಥೆಗಳಿಂದ 'ಅಂಗವಿಕಲ' ಎಂದು ದಾಖಲಿಸಿರುವ 'ಫಾರಂ 10 ಐಎ' ಪ್ರಮಾಣಪತ್ರ ಹೊಂದಿರಬೇಕು. ಜೀವನ ಪರ್ಯಂತ ಇರುವ ಕಾಯಿಲೆ ಎಂದು ದಾಖಲಿಸಿದ್ದರೆ ಪ್ರತಿ ವರ್ಷ ನವೀಕರಣ ಮಾಡುವ ಅಗತ್ಯವಿಲ್ಲ. ನಿರ್ದಿಷ್ಟ ಸಮಯಮಿತಿ ಹಾಕಿ ಪ್ರಮಾಣಪತ್ರ ಕೊಟ್ಟಿದ್ದರೆ ಆ ಸಮಯ ಮಿತಿ ಕಳೆದ ನಂತರ ಮತ್ತೆ ವೈದ್ಯಕೀಯ ಪ್ರಮಾಣ ಪತ್ರ ಪಡೆಯುವ ಅಗತ್ಯವಿರುತ್ತದೆ.

ನೀವು ನಿಮ್ಮ ಬಳಿ ಇರುವ ಪ್ರಮಾಣ ಪತ್ರವನ್ನು, ಮಾನ್ಯತೆ ಪಡೆದ ವೈದ್ಯರಿಗೆ ತೋರಿಸಿ ನಿಮ್ಮ ಸಂದೇಹವನ್ನು ಬಗೆಹರಿಸಿಕೊಳ್ಳಿ. ನೀವು ನೀಡಿರುವ ಮಾಹಿತಿ ಅನ್ವಯ, ಮೇಲ್ನೋಟಕ್ಕೆ ನಿಮ್ಮ ಸಮಸ್ಯೆ ವಯೋಸಹಜ ಕಾಯಿಲೆಯಾಗಿದ್ದು ಪ್ರಮಾಣೀಕರಿಸಲು ಅರ್ಹವಾಗಿರುವ ಯಾವುದೇ ನಿರ್ದಿಷ್ಟ ಅಂಗವೈಕಲ್ಯದ ವರ್ಗದಲ್ಲಿ ಬರುವಂತೆ ಕಾಣುತ್ತಿಲ್ಲ. ಅಂದರೆ ಕುರುಡುತನ, ಕಡಿಮೆ ದೃಷ್ಟಿ, ಗುಣಪಡಿಸಲಾಗದ ಕುಷ್ಠರೋಗ, ಶ್ರವಣ ದೋಷ, ಲೊಕೊಮೊಟರ್ ಅಸಾಮರ್ಥ್ಯ, ಬುದ್ಧಿಮಾಂದ್ಯತೆ, ಮಾನಸಿಕ ಅಸ್ವಾಸ್ಥ್ಯ ಹಾಗೂ ಆಟಿಸಂ, ಸೆರೆಬ್ರಲ್ ಪಾಲ್ಸಿ ಮತ್ತು ಬಹು ಅಂಗಾಂಗ ಅಸಾಮರ್ಥ್ಯ ಇವುಗಳನ್ನಷ್ಟೇ ಅಂಗವಿಕಲರಿಗಿರುವ ವಿವಿಧ ಕಾನೂನುಗಳಲ್ಲಿ ಪರಿಗಣಿಸಲಾಗಿದೆ.

ಪುಟ್ಟಮ್ಮ, ಮೈಸೂರು

● **ಪ್ರಶ್ನೆ:** ನಾನು ಈಗಾಗಲೇ ಹೊಂದಿರುವ ವ್ಯವಸಾಯದ ಜಮೀನನ್ನು ವ್ಯವಸಾಯೇತರ ಜಮೀನನ್ನಾಗಿ ಪರಿವರ್ತಿಸಿ ಮೈಸೂರಿನ ಹತ್ತಿರ ಬಡಾವಣೆ ನಿರ್ಮಾಣ ಮಾಡಿ, ಇನ್ನೇನು ಎರಡು ತಿಂಗಳಲ್ಲಿ ಅದು ಪೂರ್ಣಗೊಂಡು ನಿವೇಶನಗಳನ್ನು ಮಾರಾಟ ಮಾಡುವ ಹಂತದಲ್ಲಿದ್ದೇವೆ. ಆದರೆ ಮೈಸೂರಿನ ಒಬ್ಬರು ಲೆಕ್ಕಪರಿಶೋಧಕರು ನಿವೇಶನಗಳನ್ನು ಮಾರುವ ಮೊದಲೇ, ನಿವೇಶನದ ಈಗಿನ ಬೆಲೆಯ ಶೇಕಡ 10ರಷ್ಟನ್ನು ಆದಾಯ ತೆರಿಗೆ ರೂಪದಲ್ಲಿ ಪಾವತಿ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಸುಮಾರು ಐದೂವರೆ ಎಕರೆ ಜಮೀನು ಬಡಾವಣೆ ಆಗಿ ಪರಿವರ್ತನೆ ಆಗಿದೆ. ಅದೂ, ಡೆವಲಪರ್ ಜೊತೆ ಸೇರಿ ಈ ವ್ಯವಹಾರ ನಡೆದಿದೆ. ಆದಾಯ ತೆರಿಗೆ ಪಾವತಿ ಮಾಡುವ ಅಥವಾ ಅದರ ಅಗತ್ಯ ಇಲ್ಲದಿರುವ ಬಗ್ಗೆ ಸೂಕ್ತ ಸಲಹೆ ನೀಡಿ. ನಿವೇಶನಗಳನ್ನು ಮಾರುವ ಮೊದಲೇ ತೆರಿಗೆ ಕಟ್ಟಲು ಹಣದ ಕೊರತೆ ಇದೆ ಎಂದು ನಾನು ನಿಮಗೆ ತಿಳಿಸಲು ಬಯಸುತ್ತೇನೆ.

ಉತ್ತರ: ನೀವು ಪ್ರಶ್ನೆಯಲ್ಲಿ ಉಲ್ಲೇಖಿಸಿರುವಂತೆ, ನಿಮ್ಮ ಹೆಸರಲ್ಲಿರುವ ಜಮೀನನ್ನು ನಿವೇಶನಗಳನ್ನಾಗಿ ಅಭಿವೃದ್ಧಿಪಡಿಸಿ ಮಾರಾಟ ಮಾಡುವ ಉದ್ದೇಶಕ್ಕಾಗಿ ಡೆವಲಪರ್ ಜೊತೆ ಸೇರಿರುತ್ತೀರಿ. ಇದಕ್ಕೆ ಅಗತ್ಯವಾದ ಪ್ರತ್ಯೇಕ ಒಡಂಬಡಿಕೆಯೊಂದನ್ನು ಹೊಂದಿದ್ದೀರಿ ಎಂದು ಭಾವಿಸಿ ಉತ್ತರಿಸುತ್ತಿದ್ದೇನೆ. ಅವರು ತಮ್ಮ ಬಂಡವಾಳದಲ್ಲಿ ನಿಮ್ಮ ಜಮೀನು ಅಭಿವೃದ್ಧಿ ಮಾಡಿ, ಮಾರಾಟ ಯೋಗ್ಯ ನಿವೇಶನಗಳನ್ನಾಗಿ ಮಾಡುವುದಕ್ಕೋಸ್ಕರ ಅವರೂ ನಿವೇಶನದ ಒಂದಿಷ್ಟು ಸ್ವಾಮ್ಯತ್ವ ಪಡೆಯುತ್ತಾರೆ. ಅದೇ ರೀತಿ ನೀವು, ನಿಮ್ಮ ಹಾಗೂ ಡೆವಲಪರ್ ನಡುವಿನ ಮಾತುಕತೆಯಂತೆ ಒಂದು ಒಪ್ಪಿತ ಮೌಲ್ಯದ ಆಧಾರದಲ್ಲಿ ಅವರ ಕಡೆಯಿಂದ ಒಂದಿಷ್ಟು ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಪಡೆಯಲು ಅರ್ಹರಾಗಿರುತ್ತೀರಿ.

ಇಲ್ಲಿ ನಿಮ್ಮ ಅವರ ನಿವೇಶನ ಹಂಚಿಕೆ ವ್ಯವಹಾರ, ವಿನಿಮಯ ಮೌಲ್ಯಕ್ಕೆ ಸರಿಸಮಾನವಾಗಿ ನಿವೇಶನ ರೂಪದಲ್ಲೇ ಹಂಚಿಕೆಯಾಗಿ ಮುಗಿದರೆ ತೊಂದರೆ ಇಲ್ಲ. ಆದರೆ ನೀವು ಹೆಚ್ಚುವರಿ ಹಣವನ್ನು ಡೆವಲಪರ್ ಕಡೆಯಿಂದ ಪಡೆಯುವುದಿದ್ದರೆ, ಅಂತಹ ಮೊತ್ತಕ್ಕೆ ಸೆಕ್ಷನ್ 194-ಐಸಿ ಪ್ರಕಾರ, ಜಂಟಿ ಅಭಿವೃದ್ಧಿ ಒಪ್ಪಂದದ ಅಡಿಯಲ್ಲಿ ಯಾವುದೇ ಡೆವಲಪರ್ ಜಮೀನು ಅಭಿವೃದ್ಧಿ ಯೋಜನೆಯಲ್ಲಿನ ಪಾಲುದಾರಿಕೆಯ ಜೊತೆಗೆ ಜಮೀನು ಮಾಲೀಕರಿಗೆ ಹೆಚ್ಚುವರಿ ಮೊತ್ತವನ್ನು ಹಣದ ರೂಪದಲ್ಲಿ ಪಾವತಿಸಿದರೆ, ಡೆವಲಪರ್ ಅಂತಹ ಪಾವತಿಯ ಮೇಲೆ ಶೇಕಡ 10ರಷ್ಟು ಟಿಡಿಎಸ್ (ಮೂಲದಲ್ಲೇ ತೆರಿಗೆ ಕಡಿತ) ಮಾಡಬೇಕಾಗಿರುತ್ತದೆ. ಆದಾಯ ತೆರಿಗೆ ಕಾಯ್ದೆ, 1961ರ ನಿಯಮ 45(5ಎ) ವಿವರಣೆ (2)ರಂತೆ ಜಂಟಿ ಅಭಿವೃದ್ಧಿಯ ನಿರ್ದಿಷ್ಟ ಒಪ್ಪಂದದಂತೆ ಸ್ವತ್ತುಗಳ ವರ್ಗಾವಣೆಯಾದಲ್ಲಿ ಹಣದ ರೂಪದಲ್ಲಿ ಕೊಡುವ ಮೊತ್ತದ ಮೇಲೆ ಮಾತ್ರ ಈ ಟಿಡಿಎಸ್ ನಿಯಮ ಅನ್ವಯವಾಗುತ್ತದೆ. ಇಲ್ಲಿ ಟಿಡಿಎಸ್ ಕಡಿತಗೊಳಿಸುವ ಜವಾಬ್ದಾರಿ ಡೆವಲಪರ್‌ಗಳದ್ದು.

ಮೇಲೆ ತಿಳಿಸಿರುವ ಮಾಹಿತಿಯು ಮೊದಲ ಹಂತ. ನಿಮಗೆ ನಿಜವಾದ ತೆರಿಗೆ ಜವಾಬ್ದಾರಿ ನಿಮ್ಮ ಪಾಲಿನ ನಿವೇಶನ ಆದಾಯ ತೆರಿಗೆಯ ಸೆಕ್ಷನ್ 45(5ಎ) ಇದರ ಪ್ರಕಾರ ಆಸ್ತಿ ವರ್ಗಾವಣೆಯಾದಾಗ ಬರುವ 'ಬಂಡವಾಳ ವೃದ್ಧಿ' ತೆರಿಗೆ ಶೇ 20ರಷ್ಟು ಇರುತ್ತದೆ. ಅದರ ಮೇಲೆ ಶೇ 4ರಷ್ಟು ಸೆಸ್ ಇದೆ. ಮೇಲೆ ನಿಮ್ಮ ಹೆಸರಲ್ಲಿ ಕಡಿತವಾದ ಶೇ 10ರ ಮೊತ್ತವನ್ನು ನೀವು ಕೊಡಬೇಕಾಗುವ ತೆರಿಗೆಯೊಡನೆ ವಜಾ ಮಾಡಬಹುದು. ನಿಮ್ಮ ನಿಖರ ತೆರಿಗೆ ಜವಾಬ್ದಾರಿ ತಿಳಿಯಲು ಹೆಚ್ಚಿನ ಮಾಹಿತಿಯೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ
16-8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (-)
ಒಂದು ವಾರದ ಡೆಲಿವರಿ	1655 (-)
ಸೋಯಾ ಕಚ್ಚಾ	1250 (-)
ಪಾಮ್ ವಾರದ ಡೆಲಿವರಿ	1243 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,800 (-)
ಬೆಳ್ಳಿ ಕೆ.ಜಿ 57,650 (-)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಲ್ಕಿಸ್ ಬಾನು ಪ್ರಕರಣ: ಅತ್ಯಾಚಾರಿಗಳ ಶಿಕ್ಷೆ ಕಡಿತಕ್ಕೆ ರಾಜಕೀಯ ಮುಖಂಡರ ಆಕ್ರೋಶ

ನಿಯಮ ನಿರ್ಲಕ್ಷ್ಯ: ಕೈದಿಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅತ್ಯಾಚಾರ ಅಪರಾಧಿಗಳು ಮತ್ತು ಜೀವಾವಧಿ ಶಿಕ್ಷೆಗೆ ಒಳಗಾದವರ ಶಿಕ್ಷೆಯ ಅವಧಿಯನ್ನು ಕಡಿತಗೊಳಿಸ-ಬಾರದು ಎಂದು ಕೇಂದ್ರ ಸರ್ಕಾರವು ಹೊರಡಿಸಿದ್ದ ಮಾರ್ಗಸೂಚಿಯನ್ನು ಗುಜರಾತ್ ಸರ್ಕಾರವು ಗಾಳಿಗೆ ತೂರಿದೆ. ಬಿಲ್ಕಿಸ್ ಬಾನು ಮೇಲೆ ಅತ್ಯಾಚಾರ ಮತ್ತು ಅವರ ಕುಟುಂಬದ 7 ಮಂದಿಯ ಹತ್ಯೆ ಪ್ರಕರಣ ದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ 11 ಮಂದಿ ಕೈದಿಗಳಿಗೆ ಗುಜರಾತ್ ಸರ್ಕಾರವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ದಿನದಂದು ಶಿಕ್ಷೆ ಅವಧಿ ಕಡಿತಗೊಳಿಸಿ, ಬಿಡುಗಡೆ ಮಾಡಿದೆ.

21 ವರ್ಷ ವಯಸ್ಸಿನ ಬಿಲ್ಕಿಸ್ ಬಾನು ಮೇಲೆ 2002ರ ಗೋಧ್ರಾ ಹತ್ಯಾಕಾಂಡದ ನಂತರದಲ್ಲಿ ಈ 11 ಮಂದಿ ಅತ್ಯಾಚಾರ ನಡೆಸಿದ್ದರು. ಈ ಸಂದರ್ಭದಲ್ಲಿ ಅವರು 5 ತಿಂಗಳ ಗರ್ಭಿಣಿ ಆಗಿದ್ದರು. ಅಪರಾಧಿಗಳನ್ನು ಸ್ವಾತಂತ್ರ್ಯದ ದಿನವೇ ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ಕ್ರಮವನ್ನು ವಿರೋಧ ಪಕ್ಷಗಳು, ಸಾಮಾಜಿಕ ಕಾರ್ಯಕರ್ತರು ಖಂಡಿಸಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ ಸಂಬಂಧ ಕೇಂದ್ರ ಗೃಹ ಸಚಿವಾಲಯವು ಕೈದಿಗಳನ್ನು ಬಿಡುಗಡೆ ಮಾಡುವ ಸಂಬಂಧ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮಾರ್ಗಸೂಚಿಯೊಂದನ್ನು ಬಿಡುಗಡೆ ಮಾಡಿತ್ತು. ಅತ್ಯಾಚಾರಿಗಳು, ಮಾನವ ಕಳ್ಳಸಾಗಣೆದಾರರು, ಡ್ರಗ್ಸ್ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದವರನ್ನು ಬಿಡುಗಡೆ ಮಾಡಬಾರದು ಎಂದು ಸ್ಪಷ್ಟವಾಗಿ ತಿಳಿಸಿತ್ತು. ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿ ರಾಧೇಶ್ಯಾಮ್ ಶಾ, ಅವಧಿಪೂರ್ವ ಬಿಡುಗಡೆಗೆ ಕೋರಿ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ.

11 ಮಂದಿಯನ್ನು ಬಿಡುಗಡೆ ಮಾಡುವ ಕುರಿತು ಜುಲೈ 1992ರ ನೀತಿಯ ಅನುಗುಣವಾಗಿ ನಿರ್ಧಾರ ಕೈಗೊಳ್ಳುವಂತೆ ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ, ಯಾರನ್ನು ಬಿಡಗಡೆ ಮಾಡಬೇಕು ಮತ್ತು ಬಿಡುಗಡೆ ಮಾಡಬಾರದು ಎಂಬುದನ್ನು ಕೇಂದ್ರ ಸ್ಪಷ್ಟವಾಗಿ ಹೇಳಿತ್ತು.

ಕೈದಿಗಳ ಸಂತಸ: ಜೈಲಿನಿಂದ ಹೊರಬಂದ 11 ಮಂದಿ ಯೂ ಸಂತಸ ವ್ಯಕ್ತಪಡಿಸಿದ್ದಾರೆ. ಜೈಲಿನಿಂದ ಹೊರಬಂದ ಕೈದಿಗಳಿಗೆ ಹಾರ ಹಾಕಿ, ಸಿಹಿ ಹಂಚಿ ಸ್ವಾಗತಿಸಲಾಯಿತು.

ನಾನು ಬಿಜೆಪಿ ಕಾರ್ಯಕರ್ತನಾಗಿದ್ದೆ. ನನ್ನೊಂದಿಗೆ ಜೈಲಿನಲ್ಲಿದ್ದ ನನ್ನ ತಮ್ಮ ಮಿತೇಶ್ ಕ್ಲರ್ಕ್ ಆಗಿದ್ದ. ನಾವು ರಾಜಕೀಯದ ಬಲಿಪಶುಗಳು
ಶೈಲೇಶ್ ಭಟ್, ಬಿಡುಗಡೆಗೊಂಡ ಕೈದಿ

ಸಣ್ಣ ಅಪರಾಧ ಎಸಗಿದ ನೂರಾರು ಮಂದಿ ಇನ್ನೂ ಜೈಲುವಾಸ ಅನುಭವಿಸುತ್ತಿದ್ದಾರೆ. ಆದರೆ, ಅತ್ಯಾಚಾರದ ಅಪರಾಧಿಗಳನ್ನು ಬಿಡುಗಡೆ ಮಾಡಲಾಗಿದೆ.
ಶಂಶದ್ ಪಠಾಣ್, ವಕೀಲ

ಅತ್ಯಾಚಾರ ಎಸಗಿದ ರಾಕ್ಷಸರನ್ನು ಗುಜರಾತ್ ಸರ್ಕಾರ ಬಿಡುಗಡೆ ಮಾಡಿದೆ. ಜನರು ಯಾಕೆ ಆಕ್ರೋಶ ವ್ಯಕ್ತಪಡಿಸುತ್ತಿಲ್ಲ
ಸಾಕೇತ್ ಗೋಖಲೆ, ತೃಣಮೂಲ ಕಾಂಗ್ರೆಸ್ ವಕ್ತಾರ

ಕೊಲೆಗಾರರು, ಅತ್ಯಾಚಾರಿಗಳು ಬಿಡುಗಡೆಯಾಗುತ್ತಾರೆ. ನ್ಯಾಯಕ್ಕಾಗಿ ಹೋರಾಡಿದ ತೀಸ್ತಾ ಸೆಟಲ್‌ವಾಡ್ ಅವರು ಜೈಲಿನಲ್ಲಿದ್ದಾರೆ. ಇದು ನವ ಭಾರತದ ನಿಜವಾದ ಮುಖ
ಸಿಪಿಎಂ

ಜಗತ್ತು ನೋಡುತ್ತಿದೆ. ಆದರೆ, 'ನವ ಭಾರತ'ದಲ್ಲಿ ಇವನ್ನೆಲ್ಲಾ ಯಾರು ಕೇಳಿಸಿಕೊಳ್ಳುತ್ತಾರೆ
ಡ್ಯಾನಿಶ್ ಅಲಿ, ಬಿಎಸ್‌ಪಿ ಸಂಸದ

ಏನು ಹೇಳಬೇಕೋ ತಿಳಿಯುತ್ತಿಲ್ಲ: ಬಿಲ್ಕಿಸ್ ಬಾನು ಕುಟುಂಬ

ಅಹಮದಾಬಾದ್ (ಪಿಟಿಐ): 11 ಮಂದಿ ಅಪರಾಧಿಗಳನ್ನು ಬಿಡುಗಡೆ ಮಾಡಿರುವುದಕ್ಕೆ ಬಿಲ್ಕಿಸ್ ಬಾನು ಅವರ ಕುಟುಂಬ ಮಂಗಳವಾರ ಬೇಸರ ವ್ಯಕ್ತಪಡಿಸಿದೆ.

'ಅಪರಾಧಿಗಳಿಗೆ ಕ್ಷಮಾಪಣೆ ನೀಡಿರುವ ವಿಷಯ ಮಾಧ್ಯಮಗಳ ವರದಿಗಳಿಂದ ತಿಳಿಯಿತು. ಅವಧಿಗೂ ಮುನ್ನ ಬಿಡುಗಡೆಗೆ ಕೋರಿ ಅವರು (ಅಪರಾಧಿಗಳು) ಅರ್ಜಿ ಸಲ್ಲಿಸಿದ್ದರ ಕುರಿತು ನಮಗೆ ಮಾಹಿತಿ ಇಲ್ಲ. ಗುಜರಾತ್ ಸರ್ಕಾರವು ಯಾವ ನ್ಯಾಯಾಲಯವ ನಿರ್ದೇಶನದ ಮೇರೆಗೆ ಕ್ಷಮಾಪಣೆ ನೀಡಿತು ಎನ್ನುವ ಕುರಿತು ನಮಗೆ ಗೊತ್ತಿಲ್ಲ. ನಮಗೆ ಯಾವ ನೋಟಿಸ್ ಕೂಡ ಬಂದಿಲ್ಲ. ಈ ಕುರಿತು ಯಾರೂ ನಮ್ಮೊಂದಿಗೆ ಮಾತನಾಡಿಲ್ಲ' ಎಂದು ಬಿಲ್ಕಿಸ್ ಬಾನು ಅವರ ಪತಿ ತಿಳಿಸಿದರು.

'ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಗುಜರಾತ್ ಸರ್ಕಾರ ₹50 ಲಕ್ಷ ಪರಿಹಾರ ನೀಡಿತು. ಉದ್ಯೋಗ ಕೊಡುವಂತೆ, ಮನೆ ಕಟ್ಟಿಸಿಕೊಡುವಂತೆಯೂ ನ್ಯಾಯಾಲಯ ನಿರ್ದೇಶಿಸಿತ್ತು. ಆದರೆ, ಸರ್ಕಾರ ಈವರೆಗೂ ಉದ್ಯೋಗ ಮತ್ತು ಮನೆಯ ವ್ಯವಸ್ಥೆ ಮಾಡಿಲ್ಲ' ಎಂದರು.

ನಿಜವಾದ ಮೋದಿ ಯಾರು?– ಕಾಂಗ್ರೆಸ್

ನವದೆಹಲಿ (ಪಿಟಿಐ): ಕೈದಿಗಳನ್ನು ಬಿಡುಗಡೆ ಮಾಡಿರುವುದಕ್ಕೆ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. 'ನಾರಿಶಕ್ತಿ'ಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಭಾಷಣ ಮಾಡಿದ ಕೆಲವೇ ಗಂಟೆಗಳಲ್ಲಿ ಗುಜರಾತ್ ಸರ್ಕಾರ ಈ ಕ್ರಮಕೈಗೊಂಡಿದೆ. ಇದು ಬಿಜೆಪಿಯ ಮನಃಸ್ಥಿತಿಯನ್ನು ತೋರಿಸುತ್ತದೆ ಎಂದು ಕಾಂಗ್ರೆಸ್ ಮಂಗಳವಾರ ಹೇಳಿದೆ.

ನಿಜವಾದ ನರೇಂದ್ರ ಮೋದಿ ಯಾರು? ಕೆಂಪುಕೋಟೆಯ ಮೇಲೆ ಸುಳ್ಳು ಹೇಳಿದವರೇ ಅಥವಾ ಅತ್ಯಾಚಾರ ಪ್ರಕರಣದ ಅಪರಾಧಿಗಳನ್ನು ಗುಜರಾತ್ ಸರ್ಕಾರದ ಮೂಲಕ ಜೈಲಿನಿಂದ ಬಿಡುಗಡೆ ಮಾಡಿಸಿದವರೇ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ವ್ಯಂಗ್ಯವಾಡಿದರು.

ಸಂದೇಶ ಸ್ಪಷ್ಟ: ಒವೈಸಿ

ಮಹಿಳೆಯ ಗೌರವಕ್ಕೆ ಧಕ್ಕೆ ತರುವಂಥ ಕೆಲಸ ಮಾಡುವುದಿಲ್ಲ ಎಂದು ಭಾರತೀಯರು ಪ್ರತಿಜ್ಞೆ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯ ದಿನದಂದು ಭಾಷಣ ಮಾಡಿದ್ದರು. ಆದರೆ, ಗುಜರಾತ್ ಸರ್ಕಾರ ಅತ್ಯಾಚಾರ ಅಪರಾಧಿಗಳನ್ನು ಅದೇ ದಿನವೇ ಬಿಡುಗಡೆ ಮಾಡಿದೆ. ಸಂದೇಶ ಸ್ಪಷ್ಟವಾಗಿದೆ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಅವರು ಟ್ವೀಟ್ ಮಾಡಿದ್ದಾರೆ.



ಪರಿಸರ ಸ್ನೇಹಿ ಗಣಪ...

ಗಣೇಶ ಚತುರ್ಥಿ ಹಬ್ಬದ ಆಚರಣೆಗಾಗಿ ದಾವಣಗೆರೆಯ ಭಾರತ್ ಕಾಲೋನಿಯ ಕುಂಬಾರಗಲ್ಲಿಯಲ್ಲಿ ಶಿವಕುಮಾರ್ ಹಾಗೂ ಅವರ ಪತ್ನಿ ಮಣ್ಣಿನ ಗಣೇಶ ಮೂರ್ತಿಗೆ ರೂಪ ನೀಡುತ್ತಿರುವುದು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಪಂಡಿತರೇ ಕಾಶ್ಮೀರ ತೊರೆಯಿರಿ ಕೆಪಿಎಸ್‌ಎಸ್ ಒತ್ತಾಯ

ಶ್ರೀನಗರ: ತಮ್ಮ ಮೇಲಿನ ಭಯೋತ್ಪಾದಕರ ದಾಳಿ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕಾಶ್ಮೀರ ತೊರೆಯುವಂತೆ ಕಾಶ್ಮೀರಿ ಪಂಡಿತ್ ಸಂಘರ್ಷ ಸಮಿತಿಯು(ಕೆಪಿಎಸ್ ಎಸ್), ಸಮುದಾಯದ ಸದಸ್ಯರನ್ನು ಒತ್ತಾಯಿಸಿದೆ.'ಕಾಶ್ಮೀರಿ ಪಂಡಿತರ ಮೇಲೆ ಮಂಗಳವಾರ ಮತ್ತೊಂದು ಮಾರಣಾಂತಿಕ ದಾಳಿ ನಡೆಸುವ ಮೂಲಕ ಕಾಶ್ಮೀರಿ ಕಣಿವೆಯ ಎಲ್ಲ ಕಾಶ್ಮೀರಿ ಪಂಡಿತರನ್ನು ಕೊಲ್ಲುವುದಾಗಿ ಭಯೋತ್ಪಾದಕರು ಸ್ಪಷ್ಟ ಸಂದೇಶ ನೀಡಿದ್ದಾರೆ'ಎಂದು ಕೆಪಿಎಸ್‌ಎಸ್ ಮುಖ್ಯಸ್ಥ ಸಂಜಯ್ ಟಿಕೂ ಹೇಳಿದ್ದಾರೆ.

ಕಾಶ್ಮೀರಿ ಕಣಿವೆಯನ್ನು ಬಿಟ್ಟು ಜಮ್ಮು ಮತ್ತು ದೆಹಲಿಯಂತಹ ಸುರಕ್ಷಿತ ಪ್ರದೇಶಗಳಿಗೆ ತೆರಳುವಂತೆ ಟಿಕೂ ಅವರು ಎಲ್ಲ ಕಾಶ್ಮೀರಿ ಪಂಡಿತರಿಗೆ ಒತ್ತಾಯಿಸಿದ್ದಾರೆ.

'ನಾವು ಇದನ್ನು ಕಳೆದ 32 ವರ್ಷಗಳಿಂದ ನೋಡುತ್ತಿದ್ದೇವೆ. ಅಲ್ಪ-ಸಂಖ್ಯಾತರಿಗೆ, ಅದರಲ್ಲೂ ಕಾಶ್ಮೀರಿ ಪಂಡಿತರಿಗೆ ಭದ್ರತೆ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ನಾವು ಎಷ್ಟು ದಿನ ಹೀಗೇ ಸಾಯಬೇಕು? ಸಾಕು ಸಾಕು'ಎಂದು ಅವರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಭಯೋತ್ಪಾದಕರು ಅಲ್ಪಸಂಖ್ಯಾತ ಸಮುದಾಯದ ಇನ್ನಷ್ಟು ಸದಸ್ಯರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಬಹುದು ಎಂಬ ಗುಪ್ತಚರ ಮಾಹಿತಿ ಹಿನ್ನೆಲೆಯಲ್ಲಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ ಮಂಗಳವಾರ ದಾಳಿಗೀಡಾದ ಸಂತ್ರಸ್ತರು ಈ ಮೊದಲೇ ಹಿರಿಯ ಅಧಿ-ಕಾರಿಗಳನ್ನು ಸಂಪರ್ಕಿಸಿದ್ದರು ಎಂದು ಕೆಪಿಎಸ್‌ಎಸ್ ಮುಖ್ಯಸ್ಥರು ತಿಳಿಸಿದ್ದಾರೆ.

'ಆದರೆ, ಅಧಿಕಾರಿಗಳು ತಮ್ಮ ಹಳ್ಳಿಗಳಲ್ಲೇ ವಾಸಿಸುವಂತೆ ಅವರಿಗೆ ಹೇಳಿರುವುದು ವಿಪರ್ಯಾಸ. ಇಲ್ಲಿ ಏನು ಆಗುತ್ತಿದೆ? ಅಧಿಕಾರಿಗಳು ಸಂಭವನೀಯ ದಾಳಿಗಳ ಬಗ್ಗೆ ಮಾಹಿತಿ ಹೊಂದಿದ್ದಾರೆ. ಆದರೆ, ನಮಗೆ ಭದ್ರತೆ ನೀಡುತ್ತಿಲ್ಲ'ಎಂದು ಆಕ್ರೋಶ ವ್ಯಕ್ತಪ-ಡಿಸಿದ್ದಾರೆ.

'ಕಾಶ್ಮೀರಿ ಪಂಡಿತರನ್ನು ರಕ್ಷಿಸಿ' (ಉಡುಪಿ ವರದಿ): ಕಾಶ್ಮೀರದಲ್ಲಿ ಹಿಂದೂಗಳ ಹತ್ಯಾಕಾಂಡ ಮುಂದುವರಿದಿರುವುದು ಕಳವಳಕಾರಿ ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಶ್ರೀಗಳು ತಿಳಿಸಿದ್ದಾರೆ.

'ಕೇಂದ್ರ ಸರ್ಕಾರ ಇಂತಹ ಪೈಶಾಚಿಕ ಕೃತ್ಯಗಳಿಗೆ ಕಡಿವಾಣ ಹಾಕಬೇಕು. ಕಾಶ್ಮೀರಿ ಪಂಡಿತರ ರಕ್ಷಣೆಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಅಥವಾ ಪಂಡಿತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಸೇನೆಗೆ ಸ್ವದೇಶಿ ನಿರ್ಮಿತ ಶಸ್ತ್ರಾಸ್ತ್ರಗಳ ಹಸ್ತಾಂತರ

ಭಾರತೀಯ ಸೇನೆಯ ಆತ್ಮವಿಶ್ವಾಸ, ಸಾಮರ್ಥ್ಯ ವೃದ್ಧಿ – ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಿಶ್ವಾಸ

ನವದೆಹಲಿ (ಪಿಟಿಐ): ಮಾನವರಹಿತ ವೈಮಾನಿಕ ನಿರ್ವಹಣಾ ವ್ಯವಸ್ಥೆ ಸೇರಿದಂತೆ ಸ್ವದೇಶಿ ನಿರ್ಮಿತ ವಿವಿಧ ಶಸ್ತ್ರಾಸ್ತ್ರಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಂಗಳವಾರ ಸೇನೆಗೆ ಹಸ್ತಾಂತರಿ-ಸಿದರು.

ಪೂರ್ವ ಲಡಾಖ್‌ನಲ್ಲಿ ಬಳಸಬಹುದಾದ ಕ್ಷಿಪ್ರ ಪ್ರತಿಕ್ರಿಯಾತ್ಮಕ ವಾಹನಗಳು ಸೇರಿದಂತೆ ವಿಶಾಲ ಶ್ರೇಣಿಯ ಶಸ್ತ್ರಾಸ್ತ್ರಗಳು ಇದರಲ್ಲಿ ಸೇರಿವೆ. ಕಣ್ಗಾವಲು ಸೇವೆಗೆ ಬಳಸುವ ಹಾರ್ಡ್‌ವೇರ್, ಗಸ್ತು ದೋಣಿಗಳು, ಸಂಚಾರ ಗಸ್ತು ವಾಹನಗಳು, ಸ್ವಯಚಾಲಿತ ಸಂವಹನಾ ವ್ಯವಸ್ಥೆ, ಮೇಲ್ದರ್ಜೆಗೆ ಏರಿಸಲಾದ ದೂರದರ್ಶಕ ವ್ಯವಸ್ಥೆ, ಅತ್ಯಾಧುನಿಕ ಥರ್ಮಲ್ ಇಮೇಜರ್ಸ್ ಇತರ ಶಸ್ತ್ರಾಸ್ತ್ರಗಳಾಗಿವೆ.

ಗಡಿಯಲ್ಲಿ ಎರಡೂ ವರ್ಷಗಳಿಂದ ಇರುವ ಚೀನಾ ಜೊತೆಗಿನ ಸಂಘರ್ಷದ ಸ್ಥಿತಿ ಹಿನ್ನೆಲೆಯಲ್ಲಿ ಯಾವುದೇ ಸ್ಥಿತಿ ಎದುರಿಸಲು ಸೇನೆಯನ್ನು ಸಜ್ಜು-ಗೊಳಿಸುವುದರ ಭಾಗವಾಗಿ ಈ ಶಸ್ತ್ರಾಸ್ತ್ರಗಳನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ರಾಜನಾಥ್ ಸಿಂಗ್, ಹೊಸ ಶಸ್ತ್ರಾಸ್ತ್ರಗಳ ಸೇರ್ಪಡೆಯು ಸೇನೆಯ ಆತ್ಮವಿಶ್ವಾಸವ-ನ್ನು ವೃದ್ಧಿಸಿದೆ ಎಂದರು.



ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಂಗಳವಾರ ಸ್ವದೇಶಿ ನಿರ್ಮಿತ ವಿವಿಧ ಶಸ್ತ್ರಾಸ್ತ್ರಗಳನ್ನು ಸೇನೆಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಮತ್ತು ಇತರೆ ಅಧಿಕಾರಿಗಳು ಇದ್ದರು –ಪಿಟಿಐ ಚಿತ್ರ

ಲ್ಯಾಂಡಿಂಗ್ ಕ್ರಾಫ್ಟ್ ಅಸಾಲ್ಟ್ (ಎಲ್‌ಸಿಎ) ಹೆಸರಿನ ಹೊಸ ದೋಣಿಗಳಲ್ಲಿ ಅತ್ಯಾಧುನಿಕ ಕಣ್ಗಾವಲು ಪರಿಕರ ಹಾಗೂ ಇತರೆ ಸೌಲಭ್ಯಗಳನ್ನು ಅಳವಡಿಸಲಾಗಿದೆ. ಈ ದೋಣಿಗಳನ್ನು ಪೂರ್ವ ಲಡಾಖ್‌ನ ಪ್ಯಾಂಗಾಂಗ್ ಸರೋವರದಲ್ಲಿ ನಿಯೋ-ಜಿಸಲಾಗುತ್ತದೆ. 134 ಕಿ.ಮೀ. ಉದ್ದವಿರುವ ಈ ಸರೋವರವನ್ನು ಆಯಕಟ್ಟಿನ ಸ್ಥಳ ಎಂದು ಗುರುತಿಸಲಾಗಿದೆ. ಇದರ ಮೂರನೇ ಎರಡರಷ್ಟು ಭಾಗ ಚೀನಾದ ನಿಯಂತ್ರಣದಲ್ಲಿದೆ. ಇಲ್ಲಿ ಸೇನೆಯ ಬಲ ಹೆಚ್ಚಿಸಲು ಸೇನೆಯು ಕಳೆದ ವರ್ಷ 12 ಎಲ್‌ಸಿಎ ಬೋಟ್‌ಗಳ ಖರೀದಿ ಪ್ರಕ್ರಿಯೆ ಆರಂಭಿಸಿತ್ತು.

ಎಲ್‌ಸಿಎ ಹೆಚ್ಚು ಸಾಮರ್ಥ್ಯವುಳ್ಳದ್ದಾಗಿದ್ದು, ವೇಗ ಮತ್ತು ನಿಖರತೆ ಕುರಿತಂತೆ ಬಳಕೆಸ್ನೇಹಿಯೂ ಆಗಿದೆ. ಪೂರ್ವ ಲಡಾಖ್ ಜಲಮಾರ್ಗದಲ್ಲಿ ನಮ್ಮ ಸಾಮರ್ಥ್ಯವು ಇದರಿಂದ ವೃದ್ಧಿಯಾಗಲಿದೆ ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ.

ಸವಾಲು ಎದುರಿಸಲು ಸಿದ್ಧ: ಗಡಿಯಲ್ಲಿ ಎದುರಾಗುವ ಯಾವುದೇ ಸವಾಲು, ಬೆದರಿಕೆ ಎದುರಿಸಲು ಭಾರತೀಯ ಸೇನೆ ಸಿದ್ಧವಾಗಿದೆ ಎಂದು ಸೇನಾ ಮುಖ್ಯಸ್ಥರ ಪರವಾಗಿ ಹರ್‌ಪಾಲ್ ಸಿಂಗ್ ಹೇಳಿದರು.

'ಪಶ್ಚಿಮ (ಪಾಕಿಸ್ತಾನ) ಇರಬಹುದು ಅಥವಾ ಅತಿ ಎತ್ತರದ ಪ್ರದೇಶಗಳಾದ (ಚೀನಾ ಗಡಿ) ಲಡಾಖ್ ಇರಬಹುದು, ಸಂಭಾವ್ಯ ಬೆದರಿಕೆಗ-ಳನ್ನು ಎದುರಿಸಲು ಸೇನೆ ಸಿದ್ಧವಾಗಿದೆ' ಎಂದು ಹೇಳಿದರು.

ಶ್ರೀಲಂಕಾ: ಚೀನಾ ನೌಕೆ ಲಂಗರು

ಬೀಜಿಂಗ್/ಕೊಲಂಬೊ (ಪಿಟಿಐ): ಉಪಗ್ರಹಗಳ ಜಾಡು ಮತ್ತು ಖಂಡಾಂತರ ಕ್ಷಿಪಣಿಗಳನ್ನು ಪತ್ತೆಹಚ್ಚುವ ಚೀನಾದ ಅತ್ಯಾಧುನಿಕ ಕಣ್ಗಾವಲು ಮತ್ತು ಸಂಶೋಧನಾ ನೌಕೆಯು ಶ್ರೀಲಂಕಾ ದಕ್ಷಿಣದ ಹಂಬನ್‌ಟೋಟ ಬಂದರಿನಲ್ಲಿ ಮಂಗಳವಾರ ಲಂಗರು ಹಾಕಿದೆ.

'ಯುವಾನ್ ವಾಂಗ್ 5' ನೌಕೆ ಬೆಳಿಗ್ಗೆ 8.20ಕ್ಕೆ ಬಂದರು ಪ್ರವೇಶಿಸಿತು. ಇದೇ 22ರವರೆಗೆ ನೌಕೆ ಬಂದರಿನಲ್ಲಿ-ರಲಿದೆ' ಎಂದು ಶ್ರೀಲಂಕಾ ನೌಕಾಪಡೆ ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರದೇಶದಲ್ಲಿನ ಭದ್ರತೆಯ ಬಗ್ಗೆ ಭಾರತ ಮತ್ತು ಅಮೆರಿಕದ ಕಳವಳದ ಮಧ್ಯೆ ಚೀನಾ, ಈ ಅತ್ಯಾಧುನಿಕ ಸಂಶೋಧನಾ ನೌಕೆಯು ಯಾವುದೇ ದೇಶದ ಭದ್ರತೆಗೆ ಧಕ್ಕೆಯುಂಟು ಮಾಡುವುದಿಲ್ಲ. ಮೂರನೇ ದೇಶದ ಆರ್ಥಿಕತೆಗೆ ಹಾನಿ ಮಾಡುವುದಿಲ್ಲ ಎಂದು ಹೇಳಿದೆ.

ಭಾರತವು ತನ್ನ ರಕ್ಷಣಾ ವ್ಯವಸ್ಥೆಯ ಸೂಕ್ಷ್ಮ ಮಾಹಿತಿಯ ಗೂಢಚಾರಿಕೆಗೆ ಚೀನಿ ನೌಕೆ ಬರುತ್ತಿರುವುದಾಗಿ ಕಳವಳ ವ್ಯಕ್ತಪಡಿಸಿದ್ದರಿಂದ ಆರಂಭದಲ್ಲಿ ಲಂಕಾವು ಚೀನಿ ನೌಕೆಗೆ ಪ್ರವೇಶ ನಿರಾಕರಿಸಿತ್ತು.



ಶ್ರೀಲಂಕಾದ ಹಂಬನ್‌ಟೋಟ ಬಂದರನ್ನು ಮಂಗಳವಾರ ಪ್ರವೇಶಿಸಿ ಲಂಗರು ಹಾಕಿರುವ ಚೀನಾದ ಅತ್ಯಾಧುನಿಕ ನೌಕೆಯನ್ನು ಚೀನಿ ರಾಯಭಾರಿ ಕೀ ಝುನೊಂಗ್ (ಎಡ) ಸ್ವಾಗತಿಸಿದರು – ಎಎಫ್‌ಪಿ ಚಿತ್ರ

ತೀಸ್ತಾ ಜಾಮೀನು ಅರ್ಜಿ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರ ಜಾಮೀನು ಅರ್ಜಿಯನ್ನು ಆಗಸ್ಟ್ 22ರಂದು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ನೀಡಿದೆ.



ತೀಸ್ತಾ ಸೆಟಲ್‌ವಾಡ್

2002ರಲ್ಲಿ ನಡೆದ ಗುಜರಾತ್ ಕೋಮು ಗಲಭೆ ಪ್ರಕರಣಗಳಿಗೆ ಸಂಬಂಧಿಸಿದಂತೆ ನಕಲಿ ಸಾಕ್ಷ್ಯಾಧಾರಗಳನ್ನು ಸೃಷ್ಟಿಸಿರುವ ಆರೋಪದಲ್ಲಿ ತೀಸ್ತಾ ಸೆಟಲ್‌ವಾಡ್ ಅವರನ್ನು ಬಂಧಿಸಲಾಗಿದೆ.

'ಉದ್ಧವ್ ಬಣದವರ ಕಾಲು ಮುರಿಯಿರಿ'

ಮುಂಬೈ (ಪಿಟಿಐ): ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಕಾರ್ಯಕರ್ತರ ಕಾಲು ಮುರಿಯುವಂತೆ ಮುಖ್ಯಮಂತ್ರಿ ಏಕನಾಥ ಶಿಂದೆ ಬಣದ ಶಾಸಕರೊಬ್ಬರು ಕರೆ ನೀಡಿದ್ದಾರೆ. ಇದು ಉಭಯ ಬಣಗಳ ನಡುವಣ ವೈಮನಸ್ಸು ಮತ್ತಷ್ಟು ಹೆಚ್ಚಾಗಲು ಕಾರಣವಾಗಿದೆ.

ಕಾರ್ಯಕರ್ತರನ್ನು ಉದ್ದೇಶಿಸಿ ಶಿಂದೆ ಬಣದ ಶಾಸಕ ಪ್ರಕಾಶ್ ಸುರ್ವೆ ನೀಡಿರುವ ಹೇಳಿಕೆಯ ವಿಡಿಯೊ ತುಣುಕು ಸೋಮವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಕಾನೂನು ಕ್ರಮ ಎದುರಾದಲ್ಲಿ ಜಾಮೀನು ಕೊಡಿಸುವುದಾಗಿಯೂ ಸುರ್ವೆ ಹೇಳಿದ್ದಾರೆ.

ಈ ವಿಚಾರವಾಗಿ ಉದ್ಧವ್ ಬಣದ ಕಾರ್ಯಕರ್ತರು ಮುಂಬೈಯ ದಹಿಸಾರ್ ಪೊಲೀಸರಿಗೆ ದೂರು ನೀಡಿದ್ದು, ಸುರ್ವೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರ-ಹಿಸಿದ್ದಾರೆ. ಸುರ್ವೆ ಅವರು ವಾಯವ್ಯ ಮುಂಬೈಯ ಮಗಾಠಾಣೆ ಕ್ಷೇತ್ರದ ಶಾಸ-ಕರಾಗಿದ್ದಾರೆ.

'ನಾವು ಸುಮ್ಮನಿರುವುದಿಲ್ಲ. ಅವರ (ಉದ್ಧವ್ ಬಣದ ಕಾರ್ಯಕರ್ತರ) ಸ್ಥಾನವೇನೆಂಬುದನ್ನು ತೋರಿಸಬೇಕು. ಅವರು ನಮ್ಮನ್ನು ಬೆದರಿಸುವುದ-ನ್ನು ಸಹಿಸಲಾಗದು. ಯಾರಾದರೂ ಏನಾದರೂ ಹೇಳಿದರೆ ಅವರಿಗೆ ಹೊಡೆಯಿರಿ. ಅವರ ಕೈಗಳನ್ನು ಮುರಿಯಲಾಗದಿದ್ದರೆ ಕಾಲುಗಳನ್ನು ಮುರಿಯಿರಿ. ಮರುದಿನವೇ ನಿಮಗೆ ಜಾಮೀನು ಕೊಡಿಸುವ ಭರವಸೆ ನೀಡುತ್ತಿದ್ದೇನೆ. ನಮಗೆ ಚುಚ್ಚುವ ಯಾರನ್ನೂ ನಾವು ಬಿಡುವುದಿಲ್ಲ' ಎಂದು ಶಾಸಕರು ಹೇಳಿರುವುದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ವಿಡಿಯೊ ತುಣುಕಿನಲ್ಲಿದೆ.

ಈ ವಿಚಾರವಾಗಿ ಸುರ್ವೆ ಅವರನ್ನು ಸಂಪರ್ಕಿಸಿದಾಗ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ.

'ಪ್ರಕಾಶ್ ಸುರ್ವೆ ವಿರುದ್ಧ ನಮಗೆ ಲಿಖಿತ ದೂರು ಸಲ್ಲಿಕೆಯಾಗಿದೆ. ದೂರುದಾರರು ಸುರ್ವೆ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ನಾವು ಪರಿಶೀಲಿಸುತ್ತಿದ್ದೇವೆ. ಈವರೆಗೆ ಎಫ್‌ಐಆರ್ ದಾಖಲಿಸಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಮಧ್ಯೆ, ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯಲ್ಲಿ ಕಾರ್ಮಿಕರಿಗೆ ಮಧ್ಯಾಹ್ನದ ವೇಳೆ ಕಳಪೆ ಗುಣಮಟ್ಟದ ಆಹಾರ ನೀಡಲಾಗುತ್ತಿದೆ ಎಂದು ಆರೋಪಿಸಿ ಶಿವಸೇನಾ ಶಾಸಕ ಸಂತೋಷ್ ಬಂಗಾರ್ ಅವರು ಬಿಸಿಯೂಟ ತಯಾರಕನಿಗೆ ಕಪಾಳ ಮೋಕ್ಷ ಮಾಡಿದ ವಿಚಾರವೂ ಚರ್ಚೆಗೆ ಗ್ರಾಸವಾಗಿದೆ.

ಗಂಗಾ ಶುದ್ಧೀಕರಣಕ್ಕೆ ₹ 30,000 ಕೋಟಿ

ನವದೆಹಲಿ (ಪಿಟಿಐ): ಗಂಗಾ ಮತ್ತು ಅದರ ಉಪ ನದಿಗಳ ಶುದ್ಧೀಕರಣ-ಕ್ಕಾಗಿ ಕೈಗೊಂಡಿರುವ ಯೋಜನೆಗೆ ₹ 30 ಸಾವಿರ ಕೋಟಿಗೂ ಹೆಚ್ಚು ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಎಂದು ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

3.5 ಕಿ.ಮೀ.ಉದ್ದದ ಸರಕುಸಾಗಣೆ ರೈಲು ಸಂಚಾರ ಯಶಸ್ವಿ

ನವದೆಹಲಿ: ಸುಮಾರು 3.5 ಕಿ.ಮೀ. ನಷ್ಟು ಉದ್ದನೆಯ ಸರಕುಸಾಗಣೆ ರೈಲು 'ಸೂಪರ್ ವಾಸುಕಿ'ಯ ಪ್ರಾಯೋಗಿಕ ಸಂಚಾರವನ್ನು ರೈಲ್ವೆ ಇಲಾಖೆಯು ಸ್ವಾತಂತ್ರ್ಯ ದಿನದಂದು ಅಮೃತ ಸ್ವಾತಂತ್ರ್ಯೋತ್ಸವದ ಭಾಗವಾಗಿ ಯಶಸ್ವಿಯಾಗಿ ನಡೆಸಿತು.

ಈ ರೈಲಿನಲ್ಲಿ ಸರಕು ಭರ್ತಿಯಾದ 295 ವ್ಯಾಗನ್‌ಗಳು ಇದ್ದು, ಒಟ್ಟಾರೆ 27,000 ಟನ್ ಕಲ್ಲಿದ್ದಲು ಸಾಗಣೆ ಮಾಡಿತು. ಈ ಲೈಲಿಗೆ 5 ಲೊಕೊಗಳ ಎಂಜಿನ್ ಸಾಮರ್ಥ್ಯ ಹೊಂದಿದೆ. ರೈಲು ಛತ್ತೀಸಗಡದಲ್ಲಿ ಭಿಲಾಯಿಯಿಂದ ಕೊರ್ಬಾಗೆ ಸಂಚರಿಸಿದ್ದು, ನಿಲ್ದಾಣದಿಂದ ನಿರ್ಗಮಿಸಲು 4 ನಿಮಿಷ ತೆಗೆದುಕೊಂಡಿತು.

ಪ್ರಚಾರ ಸಮಿತಿ ಅಧ್ಯಕ್ಷ ಸ್ಥಾನ: ಆಜಾದ್ ನಕಾರ

ನವದೆಹಲಿ/ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಮಾಜಿ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಅವರನ್ನು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮಂಗಳವಾರ ನೇಮಕ ಮಾಡಿದ್ದಾರೆ. ಆದರೆ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಆಜಾದ್ ನಿರಾಕರಿಸಿದ್ದಾರೆ.

ಇದೇ ವೇಳೆ ಆಜಾದ್ ನಿಕಟವರ್ತಿ, ವಿಕಾರ್ ರಸೋಲ್ ವಾನಿ ಅವರನ್ನು ಜಮ್ಮು–ಕಾಶ್ಮೀರ ಘಟಕದ ಮುಖ್ಯಸ್ಥರಾಗಿ ನೇಮಕ ಮಾಡಿದ್ದಾರೆ. ನಾಯಕತ್ವ ಬದಲಾವಣೆ ಸೇರಿ ಪಕ್ಷದಲ್ಲಿ ಆಮೂಲಾಗ್ರ ಬದಲಾವಣೆಗೆ ಆಗ್ರಹಿಸಿದ್ದ 23 ಮಂದಿ ಬಂಡಾಯ ನಾಯಕರಲ್ಲಿ ಆಜಾದ್ ಸಹ ಒಬ್ಬರು.

ಚೀನಾದಲ್ಲಿ ಬರ

ಬೀಜಿಂಗ್ (ಎಪಿ): ಅಧಿಕ ತಾಪಮಾನ ಮತ್ತು ಸುದೀರ್ಘ ಬರದ ಪರಿಣಾಮ ಚೀನಾದ ಬಹುತೇಕ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಸೃಷ್ಟಿಯಾಗಿದೆ ಮತ್ತು ಕೃಷಿ ಬೆಳೆಗಳ ಇಳುವರಿ ಗಣನೀಯ ಪ್ರಮಾಣದಲ್ಲಿ ತಗ್ಗಿದೆ. ಕೆಲವು ಗ್ರಾಮಗಳಿಗೆ ಕುಡಿಯಲು ಮತ್ತು ಕೃಷಿ ಬೆಳೆಗಳಿಗೆ ಟ್ರಕ್‌ಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಮಾಧ್ಯಮ ವರದಿ ಮಾಡಿದೆ.

ಹೆಚ್ಚಾಗಿ ಪರ್ವತಗಳು ಮತ್ತು ನದಿಗಳನ್ನು ಒಳಗೊಂಡಿರುವ ನೈಋತ್ಯ ಚೀನಾದ ಚೋಂಗ್‌ಕಿಂಗ್‌ನಲ್ಲಿ ತೀವ್ರ ಮಳೆ ಕೊರತೆ ಕಾಣಿಸಿಕೊಂಡಿದೆ. ಕೆಲ ಸಣ್ಣ ಕಾಲುವೆಗಳು ಈಗಾಗಲೇ ಬತ್ತಿ ಹೋಗಿವೆ. ಪರಿಣಾಮ 6 ಲಕ್ಷ ಜನರು ಸಂಕಷ್ಟಕ್ಕೀಡಾಗಿದ್ದಾರೆ, 36,700 ಹೆಕ್ಟೇರ್ ಕೃಷಿ ಭೂಮಿಯ ಇಳುವರಿಗೆ ಹಾನಿಯಾಗಿದೆ.

ಸಿಯುಇಟಿ 4ನೇ ಹಂತದ ಪರೀಕ್ಷೆ ಇಂದು ಆರಂಭ

ನವದೆಹಲಿ (ಪಿಟಿಐ): ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ 'ಸಿಯುಇಟಿ–2022' ಪರೀಕ್ಷೆಯ ನಾಲ್ಕನೇ ಹಂತ ಬುಧವಾರದಿಂದ ಆರಂಭವಾಗಲಿದ್ದು, ಸುಮಾರು 3.6 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಇನ್ನು ಪರೀಕ್ಷಾ ಕೇಂದ್ರಗಳನ್ನು ಬದಲಿಸಿಕೊಂಡಿರುವ 11 ಸಾವಿರ ಅಭ್ಯರ್ಥಿಗಳಿಗೆ ಇದೇ 30ರಂದು ಪರೀಕ್ಷೆ ನಡೆಯಲಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತಿಳಿಸಿದೆ.

ನಾಲ್ಕು ಹಂತಗಳಲ್ಲಿ ಈ ಪರೀಕ್ಷೆ ನಡೆಸಲು ಎನ್‌ಟಿಎ ಮೊದಲು ವೇಳಾಪಟ್ಟಿ ಪ್ರಕಟಿಸಿತ್ತು. ಆದರೆ ಪರೀಕ್ಷೆ ಆರಂಭಿಕ ಹಂತಗಳಲ್ಲಿ ತಾಂತ್ರಿಕ ಲೋಪಗಳು ಎದುರಾದ ಕಾರಣ, ಎನ್‌ಟಿಎ ಆರು ಹಂತಗಳಲ್ಲಿ ಪರೀಕ್ಷೆ ನಡೆಸಲಿದೆ.

ಪಾಕಿಸ್ತಾನ: 20 ಮಂದಿ ಭಸ್ಮ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮುಲ್ತಾನ್–ಸುಕ್ಕೂರ್ ಹೆದ್ದಾರಿಯಲ್ಲಿ ಮಂಗಳ ವಾರ ಬಸ್ ಹಾಗೂ ತೈಲ ಟ್ಯಾಂಕರ್ ನಡುವೆ ಭೀಕರ ಡಿಕ್ಕಿ ಸಂಭವಿಸಿ 20 ಮಂದಿ ಸುಟ್ಟು ಕರಕಲಾಗಿದ್ದಾರೆ.

ಕೀನ್ಯಾ: ವಿಲಿಯಮ್ ರುಟೊಗೆ ಜಯ

ನೈರೋಬಿ (ಎಪಿ): ಕೀನ್ಯಾದ ಅಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ-ಯುನೈಟೆಡ್ ಡೆಮಾಕ್ರಟಿಕ್ ಒಕ್ಕೂಟದ ನಾಯಕ ಹಾಗೂ ಹಾಲಿ ಉಪಾಧ್ಯಕ್ಷ ವಿಲಿಯಮ್ ರುಟೊ ಜಯಗಳಿಸಿದ್ದಾರೆ.

ಇದ್ದೇ 9ರಂದು ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಶೇ 50.49 ರಷ್ಟು ಮತಗಳನ್ನು ಪಡೆಯುವ ಮೂಲಕ ರುಟೊ ಜಯ ಸಾಧಿಸಿದರು. ಅವರ ಪ್ರತಿಸ್ಪರ್ಧಿ, ಮಾಜಿ ಪ್ರಧಾನಿ ರೈಲಾ ಓಡಿಂಗಾ ಶೇ 48.85 ರಷ್ಟು ಮತ ಗಳಿಸಿ ಪರಾಭವಗೊಂಡರು. ಪ್ರಸ್ತುತ ಕೀನ್ಯಾದ ಅಧ್ಯಕ್ಷರಾಗಿರುವ ಉಹುರು ಕೀನ್ಯಾಟ್ಟಾ ಅವರ ಅವಧಿ ಇದೇ ಆಗಸ್ಟ್ ತಿಂಗಳ ಅಂತ್ಯಕ್ಕೆ ಕೊನೆಗೊಳ್ಳಲಿದೆ.

31 ಸಚಿವರು ಪ್ರಮಾಣ ವಚನ • ನಿತೀಶ್, ತೇಜಸ್ವಿ ಬಳಿ ಪ್ರಮುಖ ಖಾತೆಗಳು

ಬಿಹಾರ ಸಚಿವ ಸಂಪುಟ ವಿಸ್ತರಣೆ

ಪಟ್ನಾ (ಪಿಟಿಐ): ನಿತೀಶ್ ಕುಮಾರ್ ಮತ್ತು ತೇಜಸ್ವಿ ಯಾದವ್ ಅವರ ನೇತೃತ್ವದ ಬಿಹಾರ ಸರ್ಕಾರದ ಸಂಪುಟ ವಿಸ್ತರಣೆ ಮಂಗಳವಾರ ನಡೆದಿದ್ದು, ಮೂವರು ಮಹಿಳಾ ಶಾಸಕರು ಸೇರಿ 31 ನೂತನ ಸಚಿವರು ಪ್ರಮಾಣ ವಚನ ಸ್ವೀಕರಿಸಿದರು.

ರಾಜಭವನದಲ್ಲಿ ರಾಜ್ಯಪಾಲ ಫಗು ಚೌಹಾಣ್ ಅವರು ಪ್ರಮಾಣ ವಚನ ಬೋಧಿಸಿದರು. ಸಂಪುಟ ವಿಸ್ತರಣೆ ಬೆನ್ನಲ್ಲೇ ಸಚಿವರಿಗೆ ಖಾತೆ ಹಂಚಿಕೆಯೂ ಆಗಿದೆ. ಸಿಎಂ ನಿತೀಶ್ ಗೃಹ ಖಾತೆ ಸೇರಿ ಸಾಮಾನ್ಯ ಆಡಳಿತ, ಸಂಪುಟ ಸಚಿವಾಲಯ, ಚುನಾವಣೆ ಮತ್ತು ಇತರ ಪ್ರಮುಖ ಕೆಲವು ಇಲಾಖೆಗಳ ಖಾತೆಗಳನ್ನು ತಮ್ಮ ಬಳಿಯೇ ಉಳಿ-ಸಿಕೊಂಡಿದ್ದಾರೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಉಪಮುಖ್ಯಮಂತ್ರಿ ತೇಜಸ್ವಿ ಪ್ರಸಾದ್ ಯಾದವ್ ಅವರು ಆರೋಗ್ಯ, ರಸ್ತೆ ನಿರ್ಮಾಣ, ನಗರ ವಸತಿ ಮತ್ತು ಅಭಿವೃದ್ಧಿ ಹಾಗೂ ಗ್ರಾಮೀಣ ಕಾಮಗಾ-ರಿಗಳನ್ನು ಖಾತೆ ಹೊಂದಿದ್ದಾರೆ. ಇವರ ಅಣ್ಣ ತೇಜ್ ಪ್ರತಾಪ್ ಯಾದವ್ ಅವರಿಗೆ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆ ಸಿಕ್ಕಿದೆ.

ಜೆಡಿಯುನ ಪ್ರಭಾವಿ ನಾಯಕರಾದ ವಿಜಯ್ ಕುಮಾರ್ ಚೌಧರಿ (ಹಣಕಾಸು, ವಾಣಿಜ್ಯ ತೆರಿಗೆ ಮತ್ತು ಸಂಸದೀಯ ವ್ಯವಹಾರಗಳು) ಮತ್ತು ಬಿಜೇಂದ್ರ ಯಾದವ್ (ಇಂಧನ ಮತ್ತು ಪ್ಲಾನಿಂಗ್ ಹಾಗೂ ಅಭಿವೃದ್ಧಿ), ಸಂಜಯ್ ಕುಮಾರ್ ಝಾ (ಜಲಸಂಪನ್ಮೂಲ ಮತ್ತು ಮಾಹಿತಿ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ) ಶೀಲಾ ಕುಮಾರಿ (ಸಾರಿಗೆ), ಲೇಶಿ ಸಿಂಗ್ (ಆಹಾರ ಮತ್ತು ಗ್ರಾಹಕ ರಕ್ಷಣೆ) ಹಾಗೂ ಅನಿತಾ ದೇವಿ ಅವರಿಗೆ (ಒಬಿಸಿ ಮತ್ತು ಇಬಿಸಿ ವೆಲ್‌ಫೇರ್) ಪ್ರಮುಖ ಖಾತೆಗಳು ಸಿಕ್ಕಿವೆ.

ಆರ್‌ಜೆಡಿಯಿಂದ 16, ಜೆಡಿಯುನಿಂದ 11, ಕಾಂಗ್ರೆಸ್‌ನಿಂದ ಇಬ್ಬರು, ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಅವರ ಹಿಂದೂಸ್ತಾನಿ ಅವಾಮ್ ಮೋರ್ಚಾದ (ಎಚ್‌ಎಎಂ) ಒಬ್ಬರು ಮತ್ತು ಒಬ್ಬ ಪಕ್ಷೇತರ ಶಾಸಕರು ಸಚಿವ ಸ್ಥಾನ ಅಲಂಕರಿಸಿದರು. ನಿತೀಶ್ ಸಂಪುಟದಲ್ಲಿ ಐವರು ಮುಸ್ಲಿಂ ಶಾಸಕರಿಗೂ ಸ್ಥಾನ ಸಿಕ್ಕಿದೆ. ಹಿಂದಿನ ಎನ್‌ಡಿಎ ಸರ್ಕಾರದಲ್ಲಿ ಒಬ್ಬರು ಮುಸ್ಲಿಂ ಶಾಸಕರಿಗಷ್ಟೇ ಸಚಿವ ಸ್ಥಾನ ನೀಡಲಾಗಿತ್ತು.

ಶಾಸಕರ ಸಂಖ್ಯಾಬಲದಲ್ಲಿ ದೊಡ್ಡ ಪಕ್ಷವೆನಿಸಿರುವ ಆರ್‌ಜೆಡಿಯು ಸಹಜವಾಗಿಯೇ ಸಂಪುಟದಲ್ಲೂ ಸಿಂಹಪಾಲು ಗಿಟ್ಟಿಸಿಕೊಂಡಿದೆ. ಅಲ್ಪ-ಸಂಖ್ಯಾತರು ಸೇರಿ ಸಮಾಜದ ಎಲ್ಲಾ ವರ್ಗದವರಿಗೂ ಪ್ರಾತಿನಿಧ್ಯ ನೀಡುವ ಕಸರತ್ತನ್ನು 'ಮಹಾಘಟಬಂಧನ್' ಸರ್ಕಾರ ಮಾಡಿದೆ.

ಲಾಲು ಪ್ರಸಾದ್ ಅವರ ಅವರ ಹಿರಿಯ ಪುತ್ರ ತೇಜ್ ಪ್ರತಾಪ್ ಸೇರಿ ಯಾದವ ಸಮುದಾಯದ ಏಳು ಶಾಸಕರಿಗೆ, ಭೂಮಿಹಾರ ಸಮುದಾಯಕ್ಕೆ ಸೇರಿದ ಕಾರ್ತಿಕೇಯ ಸಿಂಗ್ ಮತ್ತು ರಜಪೂತ ಸಮುದಾಯದ ಸುಧಾಕರ್ ಸಿಂಗ್ ಅವರಿಗೂ ಆರ್‌ಜೆಡಿ ಕೋಟಾದಿಂದ ಸಚಿವ ಸ್ಥಾನ ಸಿಕ್ಕಿದೆ.

ಜೆಡಿಯು ತನ್ನ ಹಿಂದಿನ ಸರ್ಕಾ-ರದಲ್ಲಿದ್ದವರನ್ನೇ ಸಚಿವರನ್ನಾಗಿ ಉಳಿಸಿಕೊಂಡಿದೆ. ಕಾಂಗ್ರೆಸ್ ಕೋಟಾದ ಎರಡು ಸಚಿವ ಸ್ಥಾನಗಳಲ್ಲಿ ಒಂದು ದಲಿತ ಶಾಸಕರಿಗೆ ಮತ್ತು ಇನ್ನೊಂದು ಮುಸ್ಲಿಂ ಶಾಸಕರಿಗೆ ನೀಡಲಾಗಿದೆ.

ಸ್ಪೀಕರ್ ವಿರುದ್ಧ ಅವಿಶ್ವಾಸ ಮಂಡನೆ: ಇದೇ ವೇಳೆ, ಆರ್‌ಜೆಡಿ, ಜೆಡಿಯು, ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಒಳಗೊಂಡ ಮಹಾಮೈತ್ರಿಯು, ಬಿಜೆಪಿಯವರಾದ ಸ್ಪೀಕರ್ ವಿಜಯ್ ಕುಮಾರ್ ಸಿನ್ಹಾ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದೆ.

ಇದು ನಿತೀಶ್ ಕುಮಾರ್ ನೇತೃತ್ವದ ಸಂಪುಟವಲ್ಲ, ತೇಜಸ್ವಿ ಅವರದು. ಈ ಅವಕಾಶವಾದಿ ಮೈತ್ರಿಯ ವಿರೋಧಾಭಾಸಗಳನ್ನು ಬಯಲಿಗೆಳೆಯುತ್ತೇವೆ
ಸಂಜಯ್ ಮಯುಖ್
ಬಿಜೆಪಿ ರಾಷ್ಟ್ರೀಯ ವಕ್ತಾರ



ರಾಜಭವನದಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್, ಆರ್‌ಜೆಡಿ ನಾಯಕಿ ರಾಬ್ಡಿ ದೇವಿ ಮತ್ತಿತರರು ಹಾಜರಿದ್ದರು –ಪಿಟಿಐ ಚಿತ್ರ



ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತಿತರ ಗಣ್ಯರು ನವದೆಹಲಿಯಲ್ಲಿರುವ ಸದೈವ್ ಅಟಲ್ ಸ್ಮಾರಕಕ್ಕೆ ಗೌರವ ನಮನ ಸಲ್ಲಿಸಿದರು

ವಾಜಪೇಯಿ ಸ್ಮರಣೆ: ಗೌರವ ನಮನ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನಾಲ್ಕನೇ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರ-ಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ ಮತ್ತಿತರ ಗಣ್ಯರು ಮಂಗಳವಾರ ಗೌರವ ನಮನ ಸಲ್ಲಿಸಿದರು.

ವಾಜಪೇಯಿ ಸ್ಮಾರಕ 'ಸದೈವ್'ನಲ್ಲಿ ನಡೆದ ಕಾರ್ಯಕ್ರಮ-ದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಹಲವು ಕೇಂದ್ರ ಸಚಿವರು, ಪಕ್ಷದ ನಾಯಕರು ಭಾಗಿಯಾಗಿದ್ದರು.

ಬಳಿಕ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, ' ಅಟಲ್ ಜಿ ಪುಣ್ಯತಿಥಿ ಹಿನ್ನೆಲೆಯಲ್ಲಿ 'ಸದೈವ್ ಅಟಲ್'ಗೆ ಭೇಟಿ ನೀಡಿ ಗೌರವ ನಮನ ಸಲ್ಲಿಸಿದೆ. ದೇಶ ಸೇವೆ ವಿಚಾರದಲ್ಲಿ ಅಟಲ್ ಜಿ ನಮಗೆಲ್ಲಾ ಸ್ಫೂರ್ತಿ. ಅವರು ಭಾರತದ ಪರಿವರ್ತನೆಗೆ ಶ್ರಮಿಸಿದ ಪ್ರವರ್ತಕ' ಎಂದು ಹೇಳಿದ್ದಾರೆ.

ಭಾರತ ರತ್ನ ಪುರಸ್ಕೃತ ವಾಜಪೇಯಿ ಅವರು 1998–2004ರ ವರೆಗೆ ಭಾರತದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು. ತಮ್ಮ 93ನೇ ವಯಸ್ಸಿನಲ್ಲಿ 2018ರಲ್ಲಿ ಇಹಲೋಕ ತ್ಯಜಿಸಿದರು.

ಎಐಎಫ್‌ಎಫ್ ಅಮಾನತು •ಭಾರತದ ಫುಟ್‌ಬಾಲ್‌ಗೆ 'ಕರಾಳ ದಿನ' •ದೀರ್ಘಾವಧಿ ಮುಂದುವರಿದರೆ ಕಷ್ಟ

'ಅನ್ಯರ ಹಸ್ತಕ್ಷೇಪ': ಫಿಫಾ ಶಿಸ್ತು ಕ್ರಮ

ನವದೆಹಲಿ (ಪಿಟಿಐ): ಆಡಳಿತದಲ್ಲಿ ತಲೆದೋರಿರುವ ಗೊಂದಲವನ್ನು ನಿಗದಿತ ಗಡುವಿನೊಳಗೆ ಬಗೆಹರಿಸದ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಅನ್ನು (ಎಐಎಫ್‌ಎಫ್) ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಅಮಾನತು ಮಾಡಿದೆ.

ದೇಶದ ಫುಟ್‌ಬಾಲ್ ಕ್ಷೇತ್ರಕ್ಕೆ ಬಲವಾದ ಪ್ರಹಾರ ನೀಡುವಂತಹ ಈ ನಿರ್ಧಾರವನ್ನು ಫಿಫಾ ಮಂಗಳವಾರ ಬೆಳಿಗ್ಗೆ ತೆಗೆದುಕೊಂಡಿದೆ. 'ಆಡಳಿತದಲ್ಲಿ ಅನ್ಯರ ಅತಿಯಾದ ಹಸ್ತಕ್ಷೇಪ'ದ ಕಾರಣ ಈ ಕ್ರಮ ಕೈಗೊಂಡಿರುವುದಾಗಿ ತಿಳಿಸಿದೆ.

17 ವರ್ಷದೊಳಗಿನ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯನ್ನು 'ನಿಗದಿತ ವೇಳಾಪಟ್ಟಿಯಂತೆ ಭಾರತದಲ್ಲಿ ಆಯೋಜಿಸಲು ಸಾಧ್ಯವಿಲ್ಲ' ಎಂದಿದೆ. ಈ ಟೂರ್ನಿ ಅಕ್ಟೋಬರ್ 11 ರಿಂದ 30ರ ವರೆಗೆ ನಡೆಸಲು ಉದ್ದೇಶಿಸಲಾಗಿತ್ತು. ಎಐಎಫ್‌ಎಫ್ ತನ್ನ 85 ವರ್ಷಗಳ ಇತಿಹಾಸದಲ್ಲಿ ಫಿಫಾದಿಂದ ಅಮಾನತಿಗೆ ಒಳಗಾದದ್ದು ಇದೇ ಮೊದಲು.

'ಎಐಎಫ್‌ಎಫ್‌ಅನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತು ಮಾಡಲು ಬ್ಯೂರೊ ಆಫ್ ಫಿಫಾ ಕೌನ್ಸಿಲ್ ಸರ್ವಾನುಮತದಿಂದ ನಿರ್ಧರಿಸಿದೆ. ಫೆಡರೇಷನ್‌ನ ಆಡಳಿತದಲ್ಲಿ ಅನ್ಯರ ಹಸ್ತಕ್ಷೇಪವು ಫಿಫಾ ನಿಯಮಗಳ ಉಲ್ಲಂಘನೆಯಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ಫೆಡರೇಷನ್‌ನ ದೈನಂದಿನ ವ್ಯವಹಾರಗಳ ಸಂಪೂರ್ಣ ನಿಯಂತ್ರಣವು ನ್ಯಾಯಾಲಯ ನೇಮಿಸಿರುವ ಮೂವರು ಸದಸ್ಯರ ಆಡಳಿತ ಸಮಿತಿಯ (ಸಿಒಎ) ಕೈಯಿಂದ ಎಐಎಫ್‌ಎಫ್ ತೆಕ್ಕೆಗೆ ಬರುವವರೆಗೂ ಅಮಾನತು ಜಾರಿಯಲ್ಲಿರುತ್ತದೆ' ಎಂದು ಹೇಳಿದೆ.



ಸುನಿಲ್ ಚೆಟ್ರಿ ನೇತೃತ್ವದ ಭಾರತ ತಂಡ, ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡುವ ಅವಕಾಶ ಕಳೆದುಕೊಳ್ಳಲಿದೆ

'ಸುಪ್ರೀಂ'ನಲ್ಲಿ ವಿಚಾರಣೆ ಇಂದು: ಈ ಬೆಳವಣಿಗೆಯ ಬೆನ್ನಲ್ಲೇ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದು, ಎಐಎಫ್‌ಎಫ್‌ಗೆ ಸಂಬಂಧಪಟ್ಟ ಪ್ರಕರಣದ ವಿಚಾರಣೆಯನ್ನು ತ್ವರಿತಗತಿಯಲ್ಲಿ ನಡೆಸುವಂತೆ ಮನವಿ ಮಾಡಿತು.

ಕೇಂದ್ರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮಂಗಳವಾರ ನಡೆದ ಬೆಳವಣಿಗೆಗಳನ್ನು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಡಿ.ವೈ.ಚಂದ್ರಚೂಡ್ ಅವರಿದ್ದ ಪೀಠದ ಮುಂದಿಟ್ಟರು.

'ವಿವಾದ ಬಗೆಹರಿಸಲು ಫಿಫಾ ಪ್ರತಿನಿಧಿಗಳು ಮತ್ತು ಕ್ರೀಡಾ ಸಚಿವಾಲಯದ ಅಧಿಕಾರಿಗಳ ನಡುವೆ ಶುಕ್ರವಾರ ಮತ್ತು ಸೋಮವಾರ ಮಾತುಕತೆ ನಡೆದಿತ್ತು. ಒಮ್ಮತದ ತೀರ್ಮಾನ ಹೊರಬೀಳುವ ನಿರೀಕ್ಷೆಯಿತ್ತು. ಆದರೆ ಸೋಮವಾರ ಮಧ್ಯರಾತ್ರಿಯ ಬಳಿಕ ಫಿಫಾ ಅಮಾನತು ನಿರ್ಧಾರ ತೆಗೆದುಕೊಂಡಿದೆ' ಎಂದು ವಿವರಿಸಿದರು.

ಅದಕ್ಕೆ ಪೀಠವು, 'ಈ ಪ್ರಕರಣವನ್ನೇ ಬುಧವಾರ ಮೊದಲನೆಯದಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದು' ಎಂದು ಹೇಳಿತು.

ಮೇ 18ರಿಂದಲೇ ಕಾಡುತ್ತಿದ್ದ ಆತಂಕ: ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸದೇ ಇದ್ದುದ್ದಕ್ಕೆ ಪ್ರಫುಲ್ ಪಟೇಲ್ ಅವರನ್ನು ಎಐಎಫ್‌ಎಫ್ ಅಧ್ಯಕ್ಷ ಸ್ಥಾನದಿಂದ ಸುಪ್ರೀಂ ಕೋರ್ಟ್ ಕೆಳಗಿಳಿಸಿತ್ತು. ಫೆಡರೇಷನ್‌ನ ದೈನಂದಿನ ವ್ಯವಹಾರ ನೋಡಿಕೊಳ್ಳಲು ಆಡಳಿತ ಸಮಿತಿ ನೇಮಿಸಿ ಮೇ 18 ರಂದು ಆದೇಶ ಹೊರಡಿಸಿತ್ತು. ಆ ಬೆಳವಣಿಗೆ ನಡೆದ ದಿನದಿಂದಲೇ ಎಐಎಫ್‌ಎಫ್‌ಗೆ ಅಮಾನತು ಶಿಕ್ಷೆಯ ಆತಂಕ ಕಾಡುತ್ತಿತ್ತು.

ಫಿಫಾ ಮತ್ತು ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ರೂಪಿಸಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಎಐಎಫ್‌ಎಫ್‌ನ ನಿಯಮಾವಳಿಗಳನ್ನು ರೂಪಿಸಬೇಕು. ಅದನ್ನು ಮೂರನೇ ವ್ಯಕ್ತಿಗಳ ಹಸ್ತಕ್ಷೇಪ ಇಲ್ಲದೆಯೇ, ಎಐಎಫ್‌ಎಫ್ ಆಡಳಿತ ಮಂಡಳಿ ಅನುಮೋದಿಸಬೇಕು ಎಂದು ಫಿಫಾ ಈ ಹಿಂದೆಯೇ ಸ್ಪಷ್ಟಪಡಿಸಿತ್ತು.

ಸಚಿವಾಲಯದ ಜತೆ ಮಾತುಕತೆ: 'ಭಾರತದ ಕ್ರೀಡಾ ಸಚಿವಾಲಯದ ಜತೆ ನಾವು ರಚನಾತ್ಮಕವಾಗಿ ಸಂಪರ್ಕದಲ್ಲಿದ್ದೇವೆ. ಈ ವಿವಾದ ಶೀಘ್ರದಲ್ಲೇ ಬಗೆಹರಿಯುವ ವಿಶ್ವಾಸವಿದೆ' ಎಂದು ಫಿಫಾ ಹೇಳಿದೆ.

ಚುನಾವಣೆ ಮೇಲೆ ಕರಿನೆರಳು: ಸುಪ್ರೀಂ ಕೋರ್ಟ್‌ನ ಆದೇಶದಂತೆ ಆ.28 ಎಐಎಫ್‌ಎಫ್ ಚುನಾವಣೆ ನಡೆಯಲಿದೆ. ಇದೀಗ ಮಾನ್ಯತೆ ರದ್ದಾಗಿರುವುದರಿಂದ ಚುನಾವಣೆಯ ಮೇಲೆ ಕರಿನೆರಳು ಬಿದ್ದಿದೆ. ಚುನಾವಣೆ ಪ್ರಕ್ರಿಯೆ ಆ.13 ರಂದು ಆರಂಭವಾಗಿತ್ತು. ಸಿಒಎ ಸಿದ್ಧಪಡಿಸಿದ್ದ ಚುನಾವಣೆಯ ವೇಳಾಪಟ್ಟಿಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿತ್ತು.

ಭಾರತದ ಫುಟ್‌ಬಾಲ್ ಮೇಲೆ ಏನು ಪರಿಣಾಮ?

ಫಿಫಾ ಅಮಾನತು ನಿರ್ಧಾರ ದೀರ್ಘ ಅವಧಿಗೆ ಮುಂದುವರಿದರೆ ಭಾರತದ ಫುಟ್‌ಬಾಲ್ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಲಿದೆ. ಫಿಫಾದ ಸದಸ್ಯನಾಗಿ ಅನುಭವಿಸುತ್ತಿದ್ದ ಎಲ್ಲ ಹಕ್ಕುಗಳನ್ನು ಎಐಎಫ್‌ಎಫ್ ಕಳೆದುಕೊಳ್ಳಲಿದೆ.

'ಭಾರತದ ಕ್ಲಬ್‌ಗಳು ಮತ್ತು ಪ್ರತಿನಿಧಿಗಳು (ಆಟಗಾರರು, ರೆಫರಿ, ಅಧಿಕಾರಿಗಳು) ಯಾವುದೇ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪಾಲ್ಗೊಳ್ಳುವಂತಿಲ್ಲ' ಎಂದು ಫಿಫಾ ಪ್ರಕಟಣೆ ತಿಳಿಸಿದೆ.

'ಫುಟ್‌ಬಾಲ್‌ನ ಅಭಿವೃದ್ಧಿಯ ನಿಟ್ಟಿನಲ್ಲಿ ಫಿಫಾ ನಡೆಸುವ ಯಾವುದೇ ಕೋರ್ಸ್‌ಗಳು ಮತ್ತು ತರಬೇತಿಯಲ್ಲಿ ಪಾಲ್ಗೊಳ್ಳುವ ಅವಕಾಶವೂ ಇರುವುದಿಲ್ಲ' ಎಂದು ವಿವರಿಸಿದೆ.

- ಅಮಾನತು ನಿರ್ಧಾರ ತಕ್ಷಣವೇ ವಾಪಸ್ ಪಡೆಯದಿದ್ದರೆ, ಭಾರತ ತಂಡವು ವಿಯೆಟ್ನಾಂ (ಸೆ.24) ಮತ್ತು ಸಿಂಗಪುರ (ಸೆ.27) ವಿರುದ್ಧ ಆಡಬೇಕಿರುವ ಸ್ನೇಹಪರ ಪಂದ್ಯಗಳು ರದ್ದಾಗಲಿವೆ.
- ಮಹಿಳಾ ಲೀಗ್‌ನಲ್ಲಿ ಚಾಂಪಿಯನ್ ಆಗಿರುವ ಗೋಕುಲಂ ಕೇರಳ ತಂಡ ಉಜ್ಬೆಕಿಸ್ತಾನದಲ್ಲಿ ನಡೆಯುವ ಎಎಫ್‌ಸಿ ಮಹಿಳಾ ಕ್ಲಬ್ ಚಾಂಪಿಯನ್‌ಷಿಪ್‌ನಲ್ಲಿ ಆಡುವ ಅವಕಾಶ ಕಳೆದುಕೊಳ್ಳುವ ಸಾಧ್ಯತೆಯಿದೆ.
- ಮೋಹನ್ ಬಾಗನ್ ತಂಡ ಸೆ.7 ರಂದು ಆಡಲಿರುವ ಎಎಫ್‌ಸಿ ಕಪ್ ಅಂತರ ವಲಯ ಸೆಮಿಫೈನಲ್ ಪಂದ್ಯದ ಮೇಲೂ ಕರಿನೆರಳು ಬಿದ್ದಿದೆ.
- ಇರಾಕ್‌ನಲ್ಲಿ ಸೆ.14 ರಿಂದ ಆರಂಭವಾಗುವ ಎಎಫ್‌ಸಿ 20 ವರ್ಷದೊಳಗಿನವರ ಅರ್ಹತಾ ಟೂರ್ನಿಯಲ್ಲಿ ಆಡುವ ಅವಕಾಶ ಭಾರತದ ಕೈತಪ್ಪಬಹುದು.



ಅತ್ಯಂತ ಕಠಿಣ ನಿರ್ಧಾರ: ಭುಟಿಯಾ

'ಎಐಎಫ್‌ಎಫ್‌ಅನ್ನು ಫಿಫಾ ಅಮಾನತು ಮಾಡಿರುವುದು ದುರದೃಷ್ಟಕರ. ಇದು ಫಿಫಾ ತೆಗೆದುಕೊಂಡ ಅತ್ಯಂತ ಕಠಿಣ ನಿರ್ಧಾರ' ಎಂದು ಭಾರತ ತಂಡದ ಮಾಜಿ ನಾಯಕ ಭೈಚುಂಗ್ ಭುಟಿಯಾ ಹೇಳಿದ್ದಾರೆ.

'ಆದರೆ ದೇಶದಲ್ಲಿ ಫುಟ್‌ಬಾಲ್ ಕ್ರೀಡೆಯ ಆಡಳಿತ ವ್ಯವಸ್ಥೆಯನ್ನು ಸರಿದಾರಿಗೆ ತರಲು ನಮಗೆ ಸಿಕ್ಕ ಉತ್ತಮ ಅವಕಾಶ ಇದಾಗಿದೆ. ಆ ನಿಟ್ಟಿನಲ್ಲಿ ಎಲ್ಲರೂ ಜತೆಯಾಗಿ ಶ್ರಮವಹಿಸಬೇಕು' ಎಂದು ಅಭಿಪ್ರಾಯಪಟ್ಟರು.

> ವಿವಾದ ಬಗೆಹರಿಸಲು ಮಾತುಕತೆ ನಡೆಯುತ್ತಿರುವ ಸಮಯದಲ್ಲೇ ಫಿಫಾ ಅಮಾನತು ನಿರ್ಧಾರ ತೆಗೆದುಕೊಂಡಿರುವುದು ಅಚ್ಚರಿ ಉಂಟುಮಾಡಿದೆ. ಇದು ದುರದೃಷ್ಟಕರ.
> **ಸಿಒಎ ಪ್ರಕಟಣೆ**



ಭಾರತದ ಮಹಾನ್ ಬಿಗ್ ಬುಲ್‌ಗೆ ನಮನಗಳು!

ಐಒಎಗೆ ಆಡಳಿತ ಸಮಿತಿ ನೇಮಕ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ದೈನಂದಿನ ವ್ಯವಹಾರ ನೋಡಿಕೊಳ್ಳಲು ದೆಹಲಿ ಹೈಕೋರ್ಟ್ ಮಂಗಳವಾರ, ಆಡಳಿತ ಸಮಿತಿಯನ್ನು (ಸಿಒಎ) ನೇಮಿಸಿದೆ.

'ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸದೇ ಇರುವುದಕ್ಕೆ ಐಒಎಯ ಆಡಳಿತವನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಆರ್.ದವೆ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ ಖುರೇಷಿ ಮತ್ತು ವಿದೇಶಾಂಗ ಇಲಾಖೆಯ ಮಾಜಿ ಕಾರ್ಯದರ್ಶಿ ವಿಕಾಸ್ ಸ್ವರೂಪ್ ಅವರನ್ನೊಳಗೊಂಡ ಸಿಒಎಗೆ ನೀಡಲಾಗಿದೆ' ಎಂದು ಹೈಕೋರ್ಟ್ ಮಂಗಳವಾರ ನಿರ್ದೇಶಿಸಿದೆ.

'ಐಒಎ ಕಾರ್ಯಕಾರಿ ಸಮಿತಿಯು ತನ್ನ ಎಲ್ಲ ಅಧಿಕಾರವನ್ನು ಸಿಒಎಗೆ ಹಸ್ತಾಂತರಿಸಬೇಕು' ಎಂದು ನ್ಯಾಯಮೂರ್ತಿಗಳಾದ ಮನಮೋಹನ್ ಮತ್ತು ನಜ್ಮಿ ವಜೀರಿ ಅವರಿದ್ದ ಪೀಠ ಸೂಚಿಸಿದೆ.

ದೇಶದ ಯಶಸ್ವಿ ಕ್ರೀಡಾಪಟುಗಳಾದ ಶೂಟರ್ ಅಭಿನವ್ ಬಿಂದ್ರಾ, ಲಾಂಗ್‌ಜಂಪರ್ ಅಂಜು ಬಾಬಿ ಜಾರ್ಜ್ ಮತ್ತು ಆರ್ಚರಿ ಸ್ಪರ್ಧಿ ಬೊಂಬಯ್ಲಾ ದೇವಿ ಲೈಶ್ರಾಮ್ ಅವರು ಸಿಒಗೆ ಅಗತ್ಯ ಸಲಹೆಗಳನ್ನು ನೀಡಲಿದ್ದಾರೆ ಎಂದೂ ಹೇಳಿದೆ.



ಬಾಲಕರ ವಿಭಾಗದಲ್ಲಿ ಚಾಂಪಿಯನ್ ಆದ ಪಿಪಿಸಿ ತಂಡ. ನಿಂತವರು (ಎಡದಿಂದ) ಅವಿನಾಶ್, ಆಗ್ನೇಯ, ಶಶಾಂಕ್, ಹೃದಯ್, ಮಿಲಿಂದ್, ಅದ್ವೈತ್, ಧ್ರುವ್, ವರುಣ್. ಕುಳಿತವರು: ಶ್ರೀನಿವಾಸ ಮೂರ್ತಿ (ಕೆಎಸ್‌ಬಿಬಿಎ ಖಜಾಂಚಿ), ವೆಸಲಿನ್ ಮ್ಯಾಟಿಚ್ (ಭಾರತ ತಂಡದ ಕೋಚ್), ಡಾ.ಕೆ.ಗೋವಿಂದರಾಜ್ (ಕೆಎಸ್‌ಬಿಬಿಎ ಕಾರ್ಯದರ್ಶಿ), ಎಸ್.ಗುಣಶೇಖರ್ (ಉಪಾಧ್ಯಕ್ಷ), ಶ್ರೀನಿವಾಸ ಗೌಡ. ಮಂಡಿಯೂರಿದವರು: ತೇಜಸ್ವಿನ್, ಹಿತೇಶ್, ತನವ್, ಆದಿತ್ಯ

ಬ್ಯಾಸ್ಕೆಟ್‌ಬಾಲ್: ಪಿಪಿಸಿ, ಮೌಂಟ್ಸ್ ಕ್ಲಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಪಿಸಿ ಮತ್ತು ಮೌಂಟ್ಸ್ ಕ್ಲಬ್ ತಂಡಗಳು ಇಲ್ಲಿ ಕೊನೆಗೊಂಡ 16 ವರ್ಷದೊಳಗಿನವರ ರಾಜ್ಯ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆದವು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಪಿಪಿಸಿ ತಂಡ 85-50 ರಲ್ಲಿ ವಿಎನ್‌ಎಸ್‌ಸಿ ವಿರುದ್ಧ ಜಯಿಸಿತು. ವಿರಾಮದ ವೇಳೆಗೆ 42-26 ರಲ್ಲಿ ಮುನ್ನಡೆಯಲ್ಲಿದ್ದ ಪಿಪಿಸಿ ಪರ ಮಿಲಿಂದ್ (38) ಮತ್ತು ಹೃದಯ್ (25) ಉತ್ತಮ ಆಟವಾಡಿದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಡೈಸಿ (25 ಪಾಯಿಂಟ್ಸ್) ಅವರ ಚುರುಕಿನ ಆಟದ ಬಲದಿಂದ ಮೌಂಟ್ಸ್ ಕ್ಲಬ್ 61-53 ರಲ್ಲಿ ಡಿವೈಇಎಸ್ ಮಂಡ್ಯ ತಂಡವನ್ನು ಮಣಿಸಿತು. ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದ ಮೊದಲಾರ್ಧದಲ್ಲಿ ಮೌಂಟ್ಸ್ 34-21 ರಲ್ಲಿ ಮುನ್ನಡೆಯಲ್ಲಿತ್ತು.

ಬಾಲಕರ ವಿಭಾಗದಲ್ಲಿ ಮೂರನೇ ಸ್ಥಾನ ನಿರ್ಣಯಿಸಲು ನಡೆದ ಪಂದ್ಯದಲ್ಲಿ ಬೀಗಲ್ಸ್ ಕ್ಲಬ್ 48-28 ರಲ್ಲಿ ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಪರಾಭವಗೊಳಿಸಿತು. ತನ್ಮಯ್ (13) ಮತ್ತು ತರುಣ್ (11) ಅವರು ಬೀಗಲ್ಸ್ ಮಿಂಚಿದರು.

ಬಾಲಕಿಯರ ವಿಭಾಗದಲ್ಲಿ ಎಸ್ ಬ್ಲೂಸ್ 57-46 ರಲ್ಲಿ ಡಿವೈಇಎಸ್ ಮೈಸೂರು ತಂಡವನ್ನು ಸೋಲಿಸಿತು. ಬ್ಲೂಸ್ ತಂಡದ ನಿಧಿ 24 ಪಾಯಿಂಟ್ ತಂದಿತ್ತರು.

ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್; ಅನನ್ಯಾ ಪ್ರವೀಣ್, ಆಶಿತ್ ಮಿಂಚು: ಕೊಡಗು ಟೈಗರ್ಸ್‌ಗೆ ನಿರಾಸೆ

ಮಂಡ್ಯ ಬುಲ್ಸ್‌ಗೆ ಭರ್ಜರಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಬುಲ್ಸ್ ತಂಡದವರು ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯಲ್ಲಿ ಮಂಗಳವಾರ ಭರ್ಜರಿ ಜಯ ದಾಖಲಿಸಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ (ಕೆಬಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಬುಲ್ಸ್ 7-0ಯಿಂದ ಕೊಡಗು ಟೈಗರ್ಸ್ ಸವಾಲು ಮೀರಿತು. ಈ ಗೆಲುವಿನೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಕೊಡಗು ಟೂರ್ನಿಯಿಂದ ಹೊರಬಿದ್ದಿತು.

ಮಹಿಳಾ ಸಿಂಗಲ್ಸ್ ಹಣಾಹಣಿಯಲ್ಲಿ ಬುಲ್ಸ್ ತಂಡದ ಅನನ್ಯಾ ಪ್ರವೀಣ್ 15-13, 14-15, 15-7ರಿಂದ ರುಜುಲಾ ರಾಮು ಎದುರು ಗೆದ್ದು ಮುನ್ನಡೆ ಒದಗಿಸಿದರು. ರುಜುಲಾ ತೀವ್ರ ಪೈಪೋಟಿ ನೀಡಿದರೂ ಅನನ್ಯಾ ಅವರ ಮಿಂಚಿನ ವೇಗದ ಸ್ಮ್ಯಾಷ್‌ಗಳ ಎದುರು ಸೋಲು ಕಾಣಬೇಕಾಯಿತು.

ಪುರುಷರ ಡಬಲ್ಸ್ ಸೆಣಸಾಟದಲ್ಲಿ ಆಶಿತ್ ಸೂರ್ಯ ಮತ್ತು ಸಾಯಿ ಪ್ರತೀಕ್ 15-8,15-8ರಿಂದ ಸೈಫ್ ಅಲಿ ಮತ್ತು ವಸಂತ್ ಕುಮಾರ್ ಅವರನ್ನು ಮಣಿಸಿ ಮುನ್ನಡೆಯನ್ನು 2-0ಗೆ ಹೆಚ್ಚಿಸಿದರು. ಪುರುಷರ ಸಿಂಗಲ್ಸ್ 'ಟ್ರಂಪ್' ಪಂದ್ಯದಲ್ಲಿ ಬುಲ್ಸ್‌ನ ಅನಿರುದ್ಧ ದೇಶಪಾಂಡೆ 15-10, 15-9ರಿಂದ ಕೊಡಗು ತಂಡದ ಸನೀತ್ ದಯಾನಂದ್ ಅವರಿಗೆ ಸೋಲುಣಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಮಧುಸೂದನ್ ಎಂ.- ಖುತು ಮಿಶ್ರಾ 9-15, 8-15ರಿಂದ ಕೊಡಗು ತಂಡದ ಸನೀತ್-ರಮ್ಯಾ ವೆಂಕಟೇಶ್ ಎದುರು ಸೋತರು. ಆದರೆ 'ಸೂಪರ್' ಪಂದ್ಯದಲ್ಲಿ ಬುಲ್ಸ್ ತಿರುಗೇಟು ನೀಡಿತು. ಆಶಿತ್, ಸಾಯಿ ಪ್ರತೀಕ್ ಮತ್ತು ಮಧುಸೂದನ್ ಅವರಿದ್ದ ತಂಡವು 21-13ರಿಂದ ಸೈಫ್ ಅಲಿ, ಆದರ್ಶ ಕುಮಾರ್ ಮತ್ತು ವಸಂತ್ ಕುಮಾರ್ ಎದುರು ಗೆದ್ದು ಸಂಭ್ರಮಿಸಿತು.

ದಿನದ ಮತ್ತೊಂದು ಪಂದ್ಯದಲ್ಲಿ ಬಂಡೀಪುರ ಟಸ್ಕರ್ಸ್ 4-3ರಿಂದ ಮಂಗಳೂರು ಶಾರ್ಕ್ಸ್ ಎದುರು ಗೆದ್ದಿತು.

ಮಂಡ್ಯ ಬುಲ್ಸ್ ಹಾಗೂ ಬಂಡೀಪುರ ತಂಡಗಳು ಸೂಪರ್‌ಲೀಗ್‌ಗೆ ಅರ್ಹತೆ ಗಳಿಸಿದವು.

ಇಂದಿನ ಪಂದ್ಯ

Vs ಮಲ್ನಾಡ್ ಫಾಲ್ಕನ್ಸ್- ಮೈಸೂರು ಪ್ಯಾಂಥರ್ಸ್ — ಮಧ್ಯಾಹ್ನ 3.00

Vs ಕೆಜಿಎಫ್ ವೂಲ್ವ್ಸ್- ಬೆಂಗಳೂರು ಲಯನ್ಸ್ — ಸಂಜೆ 6.00

ಲೈವ್: ಯೂರೊ ಸ್ಪೋರ್ಟ್



ಮಂಗಳೂರು ಶಾರ್ಕ್ಸ್ ತಂಡದ ಪ್ರೇರಣಾ ಎನ್. ಶೇಟ್ ಆಟದ ವೈಖರಿ. ಮಹಿಳಾ ಸಿಂಗಲ್ಸ್‌ನ ಈ ಪಂದ್ಯದಲ್ಲಿ ಪ್ರೇರಣಾ ಅವರು ಬಂಡೀಪುರ ತಂಡದ ಅಲ್ಫಿಯಾ ರಿಯಾಜ್ ವಿರುದ್ಧ ಜಯ ಗಳಿಸಿದರು– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಭಾರತ ತಂಡದಲ್ಲಿ ಶಹಬಾಜ್‌ಗೆ ಸ್ಥಾನ



ಶಹಬಾಜ್ ಅಹ್ಮದ್

ನವದೆಹಲಿ (ಪಿಟಿಐ): ಆಲ್‌ರೌಂಡರ್ ಶಹಬಾಜ್ ಅಹ್ಮದ್ ಅವರು ರಾಷ್ಟ್ರೀಯ ಕ್ರಿಕೆಟ್ ತಂಡದಲ್ಲಿ ಇದೇ ಮೊದಲ ಬಾರಿ ಸ್ಥಾನ ಪಡೆದುಕೊಂಡಿದ್ದಾರೆ.

ಜಿಂಬಾಬ್ವೆ ವಿರುದ್ಧದ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಗೆ ಭಾರತ ತಂಡದಲ್ಲಿದ್ದ ವಾಷಿಂಗ್ಟನ್ ಸುಂದರ್ ಗಾಯಗೊಂಡಿರುವುದರಿಂದ ಬದಲಿ ಆಟಗಾರನಾಗಿ ಅವರಿಗೆ ಅವಕಾಶ ಲಭಿಸಿದೆ.

27 ವರ್ಷದ ಶಹಬಾಜ್, ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಆಯ್ಕೆಗಾರರ ಗಮನ ಸೆಳೆದಿದ್ದರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆಡಿದ್ದ ಅವರು 219 ರನ್ ಪೇರಿಸಿದ್ದರಲ್ಲದೆ, ನಾಲ್ಕು ವಿಕೆಟ್ ಪಡೆದಿದ್ದರು.

18 ಪ್ರಥಮ ದರ್ಜೆ ಪಂದ್ಯಗಳಿಂದ ಅವರು 41.64 ಸರಾಸರಿಯಲ್ಲಿ ರನ್ ಗಳಿಸಿದ್ದಾರೆ.

ಇಂಗ್ಲೆಂಡ್‌ನಲ್ಲಿ ಕೌಂಟಿ ಪಂದ್ಯದಲ್ಲಿ ಆಡುವ ವೇಳೆ ವಾಷಿಂಗ್ಟನ್ ಸುಂದರ್ ಭುಜದ ಗಾಯಕ್ಕೆ ಒಳಗಾಗಿದ್ದರು.

ಜಿಂಬಾಬ್ವೆ ಎದುರಿನ ಮೂರು ಪಂದ್ಯಗಳ ಸರಣಿ ಹರಾರೆಯಲ್ಲಿ ಗುರುವಾರ ಆರಂಭವಾಗಲಿದೆ.

ಮಂಗಳೂರು ಯುನೈಟೆಡ್‌ಗೆ ಮೈಸೂರು ಸವಾಲು

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಬೆಂಗಳೂರಿನಲ್ಲಿ ಇಂದಿನಿಂದ ಪಂದ್ಯಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯ ಎರಡನೇ ಲೆಗ್ ಪಂದ್ಯಗಳಿಗೆ ಉದ್ಯಾನನಗರಿ ಆತಿಥ್ಯ ವಹಿಸಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆಯುವ ಮೊದಲ ಹಣಾಹಣಿಯಲ್ಲಿ ಮಂಗಳೂರು ಯುನೈಟೆಡ್ ತಂಡವು ಮೈಸೂರು ವಾರಿಯರ್ಸ್ ವಿರುದ್ಧ ಕಣಕ್ಕಿಳಿಯಲಿದೆ.

ಎರಡನೇ ಪಂದ್ಯದಲ್ಲಿ ಶಿವಮೊಗ್ಗ ಸ್ಟ್ರೈಕರ್ಸ್ ಮತ್ತು ಬೆಂಗಳೂರು ಬ್ಲಾಸ್ಟರ್ಸ್ ಮುಖಾಮುಖಿಯಾಗಲಿವೆ.

ಮೈಸೂರಿನಲ್ಲಿ ನಡೆದ ಮೊದಲ ಲೆಗ್ ಪಂದ್ಯಗಳಲ್ಲಿ ಗುಲ್ಬರ್ಗ ಮಿಸ್ಟಿಕ್ಸ್‌ನ ರೋಹನ್ ಪಾಟೀಲ (ಔಟಾಗದೆ 112, ಮೈಸೂರು ವಾರಿಯರ್ಸ್ ಎದುರು) ಮತ್ತು ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್‌ನ ಮಯಂಕ್ ಅಗರವಾಲ್ (ಔಟಾಗದೆ 102, ಶಿವಮೊಗ್ಗ ವಿರುದ್ಧ) ಶತಕ ಗಳಿಸಿ ಮಿಂಚಿದ್ದರು. ಇಲ್ಲಿಯೂ ಉತ್ತಮ ಸಾಮರ್ಥ್ಯ ತೋರುವ ಛಲದಲ್ಲಿದ್ದಾರೆ. ಶಿವಮೊಗ್ಗ ಸ್ಟ್ರೈಕರ್ಸ್‌ನ ಅವಿನಾಶ್ ಡಿ. ಪಂದ್ಯವೊಂದರಲ್ಲಿ ಐದು ವಿಕೆಟ್ ಗಳಿಸಿ ಮಿನುಗಿದ್ದರು.

ಸದ್ಯ ಮಯಂಕ್ ನಾಯಕತ್ವದ ಬೆಂಗಳೂರು, ಆರು ಪಂದ್ಯಗಳಿಂದ ಎಂಟು ಪಾಯಿಂಟ್ಸ್ ಗಳಿಸಿ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಆರ್.ಸಮರ್ಥ ಸಾರಥ್ಯದ ಮಂಗಳೂರು ಯುನೈಟೆಡ್ ಕೂಡ ಎಂಟು ಪಾಯಿಂಟ್ಸ್ ಕಲೆಹಾಕಿದೆ. ಆದರೆ ನೆಟ್ ರನ್‌ರೇಟ್‌ನಲ್ಲಿ ಹಿಂದೆ ಇದೆ.

ಕರುಣ್ ನಾಯರ್ ಮುಂದಾಳತ್ವದ ಮೈಸೂರು ವಾರಿಯರ್ಸ್ ಆರು ಪಾಯಿಂಟ್ಸ್‌ನೊಂದಿಗೆ ಮೂರನೇ ಸ್ಥಾನದಲ್ಲಿದೆ. ಮೈಸೂರಿನಲ್ಲಿ ಹಿನ್ನಡೆ ಅನುಭವಿಸಿರುವ ಗುಲ್ಬರ್ಗ, ಹುಬ್ಬಳ್ಳಿ ಟೈಗರ್ಸ್, ಮಂಗಳೂರು ಯುನೈಟೆಡ್ ತಂಡಗಳು ಇಲ್ಲಿ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿವೆ. ಆಗಸ್ಟ್ 26ರಂದು ಫೈನಲ್ ಸೇರಿದಂತೆ 16 ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ.



ಮಯಂಕ್ ಅಗರವಾಲ್

ಇಂದಿನ ಪಂದ್ಯಗಳು

ಮಂಗಳೂರು ಯುನೈಟೆಡ್– ಮೈಸೂರು ವಾರಿಯರ್ಸ್ — ಮಧ್ಯಾಹ್ನ 3ರಿಂದ

ಶಿವಮೊಗ್ಗ ಸ್ಟ್ರೈಕರ್ಸ್– ಬೆಂಗಳೂರು ಬ್ಲಾಸ್ಟರ್ಸ್ — ಸಂಜೆ 7ರಿಂದ

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಫ್ಯಾನ್ ಕೋಡ್ ಆ್ಯಪ್

ಡುರಾಂಡ್ ಕಪ್: ಮೊಹಮ್ಮಡನ್‌ಗೆ ಜಯ

ಕೋಲ್ಕತ್ತ (ಪಿಟಿಐ): ಮೊಹಮ್ಮಡನ್ ಎಸ್‌ಸಿ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ 3-1ರಿಂದ ಹಾಲಿ ಚಾಂಪಿಯನ್ ಎಫ್‌ಸಿ ಗೋವಾಗೆ ಸೋಲುಣಿಸಿತು.

ಬುಧವಾರ ನಡೆಯುವ ಹಣಾಹಣಿಯಲ್ಲಿ ಬೆಂಗಳೂರು ಎಫ್‌ಸಿ ಮತ್ತು ಜಮ್ಶೆಡ್‌ಪುರ ಮುಖಾಮುಖಿಯಾಗಲಿವೆ.

ಬಿಸಿಸಿಐ ಮಾಜಿ ಕಾರ್ಯದರ್ಶಿ ಚೌಧರಿ ನಿಧನ



ಅಮಿತಾಭ್ ಚೌಧರಿ

ರಾಂಚಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮಾಜಿ ಹಂಗಾಮಿ ಕಾರ್ಯದರ್ಶಿ ಹಾಗೂ ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆ (ಜೆಎಸ್‌ಸಿಎ) ಅಧ್ಯಕ್ಷ ಅಮಿತಾಭ್ ಚೌಧರಿ (58) ಅವರು ಮಂಗಳವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ನಿವೃತ್ತ ಐಪಿಎಸ್ ಅಧಿಕಾರಿಯಾಗಿದ್ದ ಚೌಧರಿ ಅವರು ಜಾರ್ಖಂಡ್ ಲೋಕ ಸೇವಾ ಆಯೋಗದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

ರಾಂಚಿಯಲ್ಲಿ ಅತ್ಯುನ್ನತ ಕ್ರಿಕೆಟ್ ಕ್ರೀಡಾಂಗಣಗಳನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಚೌಧರಿ, ಅಂತರರಾಷ್ಟ್ರೀಯ ಕ್ರಿಕೆಟ್ ಮತ್ತು ಐಪಿಎಲ್ ಪಂದ್ಯಗಳನ್ನು ಆಯೋಜಿಸಲು ಕಾರಣರಾಗಿದ್ದರು. ಬಿಸಿಸಿಐ, ಬಿಹಾರ ಕ್ರಿಕೆಟ್ ಸಂಸ್ಥೆಯನ್ನು ವಿಸರ್ಜಿಸಿದ ಬಳಿಕ ಜಾರ್ಖಂಡ್‌ಗೆ ಪ್ರಥಮದರ್ಜೆ ಕ್ರಿಕೆಟ್ ಸ್ಥಾನಮಾನ ಕೊಡಿಸುವಲ್ಲಿಯೂ ಚೌಧರಿ ಪಾತ್ರ ಇತ್ತು. ಈ ಸ್ಥಾನ ಪಡೆದ ನಂತರ, ಮಹೇಂದ್ರ ಸಿಂಗ್ ಧೋನಿ ಬಿಹಾರದಿಂದ ವಲಸೆ ಬಂದು ವೃತ್ತಿಜೀವನದ ಕೊನೆಯವರೆಗೂ ಜಾರ್ಖಂಡ್ ರಾಜ್ಯ ಪ್ರತಿನಿಧಿಸಿದರು.

ಪ್ರಗ್ನಾನಂದಗೆ ಜಯ

ಮಿಯಾಮಿ (ಪಿಟಿಐ): ಭಾರತದ ಯುವ ಚೆಸ್ ಸ್ಪರ್ಧಿ ಆರ್. ಪ್ರಗ್ನಾನಂದ ಅವರು ಇಲ್ಲಿ ನಡೆಯುತ್ತಿರುವ ಎಫ್‌ಟಿಎಕ್ಸ್ ಕ್ರಿಪ್ಟೊ ಕಪ್ ಚೆಸ್ ಟೂರ್‌ನಲ್ಲಿ ಶುಭಾರಂಭ ಮಾಡಿದರು.

17 ವರ್ಷದ ಪ್ರಗ್ನಾನಂದ ಮೊದಲ ಹಣಾಹಣಿಯಲ್ಲಿ 2.5-1.5 ಪಾಯಿಂಟ್‌ಗಳಿಂದ ಜೂನಿಯರ್ ವಿಭಾಗದ ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಅಲಿರೆಜಾ ಫಿರೋಜಾ ವಿರುದ್ಧ ಗೆದ್ದರು.

ನಾಲ್ಕು ಸುತ್ತುಗಳ ಹಣಾಹಣಿಯ ಮೊದಲ ಹಾಗೂ ಮೂರನೇ ಸುತ್ತುಗಳಲ್ಲಿ ಪ್ರಗ್ನಾನಂದ ಗೆದ್ದರೆ, ಎರಡನೇ ಸುತ್ತಿನಲ್ಲಿ ಸೋಲು ಅನುಭವಿಸಿದರು. ನಾಲ್ಕನೇ ಸುತ್ತಿನಲ್ಲಿ ಡ್ರಾ ಸಾಧಿಸಿ ಪಂದ್ಯ ತಮ್ಮದಾಗಿಸಿಕೊಂಡರು.

ಕೊಕ್ಕೊ: ಯೋಧಾಸ್‌ಗೆ ಗೆಲುವು

ಪುಣೆ: ಆದರ್ಶ್ ಮೋಹಿತೆ ಅವರ ಆಲ್‌ರೌಂಡ್ ಆಟದ ಬಲದಿಂದ ತೆಲುಗು ಯೋಧಾಸ್ ತಂಡವು ಅಲ್ಟಿಮೇಟ್ ಕೊಕ್ಕೊ ಲೀಗ್‌ನ ಪಂದ್ಯದಲ್ಲಿ ಜಯ ಗಳಿಸಿತು.

ಇಲ್ಲಿನ ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಹಣಾಹಣಿಯಲ್ಲಿ ಯೋಧಾಸ್ 68-47ರಿಂದ ರಾಜಸ್ಥಾನ ವಾರಿಯರ್ಸ್ ಎದುರು ಗೆದ್ದಿತು. ಇದು ಆ ತಂಡಕ್ಕೆ ಟೂರ್ನಿಯಲ್ಲಿ ಸತತ ಎರಡನೇ ಜಯವಾಗಿದೆ. ಮೊದಲ ಇನಿಂಗ್ಸ್‌ನ ಡಿಫೆನ್ಸ್‌ನಲ್ಲಿ ಮೂರು ನಿಮಿಷ 40 ಸೆಕೆಂಡ್‌ಗಳ ಕಾಲ ಇದ್ದ ಆದರ್ಶ್ ಬಳಿಕ 10 ಪಾಯಿಂಟ್ಸ್ ಕೂಡ ಗಳಿಸಿ ಯೋಧಾಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಪ್ರಸಾದ್ ಪಡ್ಯೆ 13 ಮತ್ತು ರೋಹನ್ ಸಿಂಗಾಡೆ 10 ಪಾಯಿಂಟ್ಸ್ ಕಲೆಹಾಕಿದರು. ರಾಜಸ್ಥಾನ ತಂಡದ ಪರ ನಾಯಕ ಮಜರ್ ಜಮಾದಾರ್ ಗಳಿಸಿದ 17 ಪಾಯಿಂಟ್ಸ್ ವ್ಯರ್ಥವಾದವು.

ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಒಡಿಶಾ ಜಗರ್‌ನಟ್ಸ್ 51-43ರಿಂದ ಚೆನ್ನೈ ಕ್ವಿಕ್ ಗನ್ಸ್‌ಗೆ ಸೋಲುಣಿಸಿತ್ತು.



ತೆಲುಗು ಯೋಧಾಸ್ ಮತ್ತು ರಾಜಸ್ಥಾನ ವಾರಿಯರ್ಸ್ ತಂಡಗಳ ಆಟಗಾರರ ನಡುವಣ ಸೆಣಸಾಟ– ಪಿಟಿಐ ಚಿತ್ರ